ಸಂಚಿಕೆ ೨೧

ಏಪ್ರಿಲ್ ೨೦೧೯

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ತ್ರೈಮಾಸಿಕ ಪತ್ರಿಕೆ






ಸಂಚಿಕೆ ೨೧, ಏಪ್ರಿಲ್ ೨೦೧೯

# ಈ ಸಂಚಿಕೆಯಲ್ಲಿ





೦೪ **ಸಂಪಾದಕೀಯ**

೦೫ **ಸಂಪಾದಕೀಯ ತಂಡ**

೦೬ **ಅಧ್ಯಕ್ಷರ ನುಡಿ**

೦೭ **ಸಂತೋಷ್ ಕುಮಾರ್ ಸವಿ ನೆನಪು**

೦೮ **ಬೃಂದಾವನ ವಿಶ್ವಸ್ತ ಮಡಳಿ(೨೦೧೯ - ೨೦)**

೦೯ **ಮುನ್ನೋಟ**

೧೨ **ಓದುಗರ ಅನಿಸಿಕೆಗಳು**

೧೩ **ಅಂತರಂಗದ ಅನ್ವೇಶಣೆ**
ಶರೀರತ್ರಯ

೧೮ **ಕವನ**
ನನಗೆ ಶಿವರಾತ್ರಿಯೆಂದರೆ

೨೦ ಲೇಖನ
ಬೇಂದ್ರೆ ಕಾವ್ಯದಲ್ಲಿ
ಒಲವಿನ ಚಿತ್ತಾರ









೨೩ **ಲೇಖನ**
ವಸಂತ ಬಂದ ಋತುಗಳ ರಾಜ

೨೮ **ಸಂದರ್ಶನ**
ದಾಸವಾಣಿಯ ಸುಮಧುರ ಗಾಯಕಿ
ನಂದಿನಿ ಗುಜರ್

೩೨ **ಪ್ರವಾಸ ಕಥನ**
ಕೈಲಾಸ ಮಾನಸ ಸರೋವರ ಯಾತ್ರೆ -
ಒಂದು ಜೀವನಾನುಭವ





೩೭ **ಸಣ್ಣ ಕಥೆಗಳು**

೫೧ **ಚಿಣ್ಣರ ಲೋಕ**
ಮಕ್ಕಳ ರೇಖಾ ಚಿತ್ರಗಳು

೫೨ **ಸಿನೆಮಾ**
ಅಂತೂ ಹೋದೆ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ

೫೬ **ವನಿತೆಯ ಮನದಾಳ**
ಸ್ವದೇಶ ಪರದೇಶ – ನನ್ನ ಮನಿಸ್ಸನ ಒಂದು ದ್ವಂದ್ವ

೫೮ **ವನಿತೆಯ ಮನದಾಳ**
ಮಹಿಳೆ ಮುಂದುವರೆಯುವುದು ಎಂದು?

೬೦ **ಕವನ**
ಮಲೆನಾಡಿಗೊಂದು ನಮ್ಮ ಪಯಣ

೬೨ **ಲೇಖನ**
ಪುರಂದರ ಸಾಹಿತ್ಯ ದರ್ಶನ













೬೪ **ಇ -ಕಾಲದಲ್ಲಿ**
5G ತಂತ್ರಜ್ಞಾನ

# ಹೊಸ ಭರವಸೆ

ಸಂಪಾದಕರಿಂದ



ನಮಸ್ಕಾರ ಸ್ನೇಹಿತರೆ,  ಯುಗಾದಿ ಹಬ್ಬದ ಶುಭಾಶಯಗಳು! 'ವಿಕಾರಿ' ನಾಮ ಸಂವತ್ಸರ ಎಲ್ಲರಿಗೂ ಒಳಿತನ್ನು ತರಲಿ ಎಂದು ಬೃಂದಾವನ ವಾಣಿ ಸಂಪಾದಕ ತಂಡದ ಪರವಾಗಿ ಹಾರೈಸುತ್ತೇನೆ. ಬೃಂದಾವನ ವಾಣಿಯ ಜನವರಿ ಸಂಚಿಕೆಯನ್ನು ಓದಿ ಮೆಚ್ಚುಗೆ ವ್ಯಕ್ತಪಡಿಸಿದ್ದಕ್ಕೆ ನಿಮ್ಮೆಲ್ಲರಿಗೂ ಸಂಪಾದಾಕ ತಂಡದಿಂದ ಧನ್ಯವಾದಗಳು.

ಚಳಿಯನ್ನು ಓಡಿಸಿ ವಸಂತನನ್ನು ಬರಮಾಡಿಕೊಳ್ಳುತ್ತಿದ್ದೇವೆ. ವಸಂತನ ಆಗಮನ ಯಾರಿಗೆ ತಾನೆ ಇಷ್ಟವಿಲ್ಲ, ಅದರಲ್ಲೂ ನ್ಯೂಜೆರ್ಸಿ ವಾಸಿಗಳಾದ ನಮಗೆ ಯಾವಾಗ ವಸಂತ ಕಾಣುವುದೋ ಎಂದು ಪರಿತಪಿಸುತ್ತಿರುತ್ತೇವೆ. ತಿಂಗಳುಗಟ್ಟಲೆ ನಮ್ಮ ಮೈಯ ಅವಿಭಾಜ್ಯ ಅಂಗದಂತಿದ್ದ ಎರಡು ಮೂರು ಪದರ ಬಟ್ಟೆಗಳನ್ನು ಕಿತ್ತೆಸೆಯುವ ಪ್ರಕ್ರಿಯೆ ನಮ್ಮದಾದರೆ, ಎಲೆಯುದುರಿಸಿಕೊಂಡು ತಿಂಗಳುಗಟ್ಟಲೆ ಬೋಳಾಗಿ ನಿಂತ ಮರಗಿಡಗಳು ಚಿಗುರಿ, ಟಿಸಿಲೊಡೆದು ಹೊಸ ಜೀವನಚೈತ್ರವನ್ನು ಆರಂಭಿಸಿ ನಯನ ಮನೋಹರ ದೃಶ್ಯವನ್ನು ಉಣಬಡಿಸಲು ಸಜ್ಜಾಗಿರುತ್ತವೆ. ನಾಲ್ಕು ಋತುಗಳ ರಾಜ್ಯವೆಂದೇ ಪ್ರಖ್ಯಾತವಾಗಿರುವ ನ್ಯೂ ಜೆರ್ಸಿಯಲ್ಲಿ ವಸಂತನ ಗಾಂಭೀರ್ಯವನ್ನು ನೋಡುವುದೇ ಒಂದು ಖುಷಿ. ವಸಂತನ ವೈಶಿಷ್ಟ್ಯವೇ ಹಳೇ ಬೇರು, ಹೊಸ ಚಿಗುರು! ತನ್ನ ಅದೇ ಹಳೆಯ ಬೇರು, ರೆಂಬೆ-ಕೊಂಬೆಗಳನ್ನಿಟ್ಟುಕೊಂಡೇ ಹೊಸ ಚಿಗುರುಗಳಿಂದ ಹೊಸ ಚೇತನವನ್ನು ನಿರಂತರವಾಗಿ ಕಂಡುಕೊಳ್ಳುವ ನಮ್ಮ ಸುತ್ತಲಿನ ಪ್ರಕೃತಿ ನಮ್ಮಗಳಿಗೆ ಆದರ್ಶವಾಗಬೇಕು.

**ಹಳೆ ನೆನಪುಗಳುದುರಲಿ ಬಿಡು**
**ಬೀಸುವ ಚಳಿಗಾಳಿಗೆ**
**ತರಗೆಲೆಗಳ ಚಿತೆಯುರಿಯಲಿ**
**ಚೈತ್ರೋದಯ ಜ್ವಾಲೆಗೆ.**

**ಹೊಸ ಭರವಸೆ ಚಿಗುರುತಲಿದೆ**
**ಎಲೆಯುದಿರಿದ ಕೊಂಬೆಗೆ**
**ಅರಳಿ ನಗುವ ಹೂಗಳಲ್ಲಿ**
**ಪುಟಿಯುತಲಿದೆ ನಂಬಿಕೆ.**

ಹೊಸ ಭರವಸೆಗಳನ್ನು ಹೊತ್ತು ಕನ್ನಡ ಸೇವೆಗೆ ಸದಾ ಸಿದ್ಧವಾಗಿರುತ್ತಿದ್ದ ನಮ್ಮ ಪ್ರೀತಿಯ ಸ್ನೇಹಿತ, ಬೃಂದಾವನ ಕನ್ನಡಕೂಟದ ಮಾಜಿ ಅಧ್ಯಕ್ಷರಾದ ಶ್ರೀ ಸಂತೋಷ್ ಕುಮಾರ್ ಕಡ್ಲೆಬೇಳೆಯವರು ನಮ್ಮನ್ನಗಲಿದ್ದಾರಾದರೂ ಬರಿ ನೆನಪುಗಳಾಗಷ್ಟೇ ಉಳಿಯದೆ ನಮ್ಮಗಳ ಕನ್ನಡ ಸೇವೆಯಲ್ಲಿ ಚಿಗುರುತಿರಲಿ. ಸಮಸ್ತ ಬೃಂದಾವನ ಕನ್ನಡಕೂಟದ ಸದಸ್ಯರಿಂದ ಶ್ರೀ ಸಂತೋಷ್ ಕುಮಾರ್ ಕಡ್ಲೆಬೇಳೆಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಹೊಸ ಭರವಸೆಗಳನ್ನು ಕೊಡುತ್ತಾ, ಹೊಸ ಆಕಾಂಕ್ಷೆಗಳನ್ನಿಟ್ಟುಕೊಂಡ ರಾಜಕೀಯ ಪಕ್ಷಗಳು ಭಾರತದಲ್ಲಿ ಚುನಾವಣಾ ಕಣಕ್ಕಿಳಿದಿವೆ. ಭಾರತವನ್ನು ಹೊಸ ಪ್ರಗತಿಯತ್ತ ಕೊಂಡೊಯ್ಯುತ್ತಾರೆಂಬ ಭರವಸೆಯಿಂದ ಮತ ಹಾಕುವ ಮತದಾರರಿಗೆ ಹೊಸ ಚೇತನ ಕೊಡುವಂಥ ಸರ್ಕಾರ ಚುಕ್ಕಾಣಿ ಹಿಡಿಯಲಿ ಎಂದು ಆಶಿಸೋಣ.

ಈ ಸಂಚಿಕೆಯ ವಿಶೇಷ, ಸಣ್ಣ ಕಥೆಗಳು. ಇನ್ನೂ ವಿಶೇಷವೇನಂದರೆ, ಕರ್ನಾಟಕದ ಪ್ರಸಿದ್ಧ ಲೇಖಕಿ, ಕಥೆಗಾರ್ತಿಯಾದ ಶ್ರೀಮತಿ ಸುನಂದಾ ಕಡಮೆಯವರು ನಮ್ಮ ಈ ಸಂಚಿಕೆಗೆ ಒಂದು ಕಥೆಯನ್ನು ಬರೆದು ಕೊಟ್ಟಿದ್ದಾರೆ. ಜೊತೆಗೆ ಕರ್ನಾಟಕದ ಪ್ರಸಿದ್ಧ ಕವಿ, ಶ್ರೀ ಪ್ರಕಾಶ್ ಕಡಮೆಯವರೂ ಕೂಡ ಒಂದು ಕವನವನ್ನು ಬರೆದು ಕೊಟ್ಟಿದ್ದಾರೆ. ಇವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು. ಅಲ್ಲದೇ ಸುಂದರವಾಗಿ ವಿನ್ಯಾಸಗೊಂಡಿರುವ ಈ ಸಂಚಿಕೆಯಲ್ಲಿ ಸಾಕಷ್ಟು ಬರಹಗಳಿವೆ. ಓದಿ ನಿಮ್ಮ ಅನಿಸಿಕೆಗಳನ್ನು ತಿಳಿಸಿ. ನಿಮಗೂ ನಮ್ಮ ಪತ್ರಿಕೆಗೆ ಬರೆಯಬೇಕೆಂಬ ಇಚ್ಛೆಯಿದ್ದರೆ vani@brindavana.org ಗೆ ಮಿಂಚಂಚೆ ಮೂಲಕ ನಿಮ್ಮ ಬರಹವನ್ನು ಕಳುಹಿಸಿ.
ಮುಂದಿನ ಸಂಚಿಕೆಯಲ್ಲಿ ಮತ್ತೆ ಸಿಗುವ.

ಧನ್ಯವಾದಗಳೊಂದಿಗೆ,



**ಅಹೀಶ್ ಭಾರದ್ವಾಜ**

## ಸಂಪಾದಕೀಯ ತಂಡ

**ಅಹೀಶ್ ಭಾರದ್ವಾಜ್**
*ಸಂಪಾದಕರು*



**ದಾಶರಥಿ ಘಟ್ಟು**
*ವಿಷಯ ನಿರ್ವಹಣೆ*



**ಸರಿತಾ ನವಲಿ**
*ವಿಷಯ ನಿರ್ವಹಣೆ*



**ಅಜೇಯ ರಾವ್**
*ವಿಷಯ ನಿರ್ವಹಣೆ*



**ಲಕ್ಷ್ಮಿ ಕೊಲಾಲ**
*ವಿಷಯ ನಿರ್ವಹಣೆ*



**ಬಿಂದು ಮಾಧವಿ ಪಾಲಾಕ್ಷಪ್ಪ**
*ವಿಷಯ ನಿರ್ವಹಣೆ*



**ಶ್ರೀ ವಿದ್ಯಾ ಪ್ರಶಾಂತ್**
*ವಿಷಯ ನಿರ್ವಹಣೆ*



**ರಘುರಾಂ ರಾಯಸಂ**
*ವಿಷಯ ನಿರ್ವಹಣೆ*




***ಪರಿಕಲ್ಪನೆ ಮತ್ತು ಪತ್ರಿಕೆ ವಿನ್ಯಾಸ: ಸರಿತಾ ನವಲಿ, ಅಹೀಶ್ ಭಾರದ್ವಾಜ್***

### ಸಂಚಿಕೆ ನೆರವು:

**ರಘುರಾಂ ರಾಯಸಂ**
*'ಸಣ್ಣ ಕತೆಗಳು' ಪುಟ ವಿನ್ಯಾಸ*



**ರಾಮಪ್ಪ ಒಣರೊಟ್ಟಿ**
*ದ.ರಾ.ಬೇಂದ್ರೆ ವರ್ಣಚಿತ್ರ*



ಮುಖಪುಟ ಛಾಯಾಚಿತ್ರ:
**ಮಾವಿನ ಚಿಗುರು** ಕೃಪೆ: ಅಂತರ್ಜಾಲ
ಪುಟ ಛಾಯಾಚಿತ್ರ:
**ಹೊಂಗೆಯ ಹೂವು**
ಕೃಪೆ: ಶಿವಶಂಕರ ಬಣಗಾರ ಹೊಸಪೇಟೆ.

**ಪ್ರಕಾಶಕರು:** ಬೃಂದಾವನ, Karnataka Cultural Organization Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ.
www.brindavana.org

© 2019 All rights reserved. no part of this book may be reproduced, stored in a retrieval system or transmitted in any form or by any means, electronic, mechanical, photocopying, recording or otherwise without prior permission of the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.

ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.

ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗಳಿಗೆ ಸಂಪರ್ಕಿಸಿ:
vani@brindavana.org

### ಸದಸ್ಯತ್ವ ಮಾಹಿತಿ

ಬೃಂದಾವನ, ನ್ಯೂಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಚಾರಿಟಿ ಸಂಸ್ಥೆ. ನ್ಯೂಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡವನ್ನು ಬೆಳೆಸಿ, ಪೋಷಿಸಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ".

ವಾರ್ಷಿಕ, ದ್ವೈವಾರ್ಷಿಕ, ಅಜೀವ, ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

ಆನ್ಲೈನ್ ಮೂಲಕ ಸದಸ್ಯತ್ವ ಪಡೆಯಲು www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ.

ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.

ಹೆಚ್ಚಿನ ಮಾಹಿತಿಗಳಿಗೆ ಸಂಪರ್ಕಿಸಿ:
president@brindavana.org

# ಅಧ್ಯಕ್ಷರ ನುಡಿ



ನ್ಯೂ ಜೆರ್ಸಿಯ ಕನ್ನಡ ಬಾಂಧವರಿಗೆಲ್ಲ ಯುಗಾದಿ ಹಬ್ಬದ ಶುಭಾಶಯಗಳು! ಮುಂಬರುವ 'ವಿಕಾರಿ' ನಾಮ ಸಂವತ್ಸರ ಎಲ್ಲರಿಗೂ ಹೊಸ ಹರ್ಷವನ್ನು ತರಲಿ ಎಂದು ನಮ್ಮ ಸೌರಭ ತಂಡ ಹಾರೈಸುತ್ತದೆ.

ಕಳೆದ ತಿಂಗಳಿನ ಕಡು ಛಳಿಯ ವಾತಾವರಣದಲ್ಲಿ ಕಂಗಾಲಾದ ನಮಗೆಲ್ಲ ಹರುಷವನ್ನು ಮೂಡಿಸಲು ಋತುಗಳ ರಾಜ ವಸಂತನ ಆಗಮನ ಇನ್ನೇನು ಕೆಲವೇ ದಿನಗಳಲ್ಲಿ ಆಗುತ್ತಿದೆ. ವಸಂತನ ಆಗಮನವನ್ನು ಬರಮಾಡಿಕೊಳ್ಳಲು ಉದ್ಯಾನ ರಾಜ್ಯದ ವನಸಿರಿ, ಹಸಿರಿನ ಒರತೆಯನ್ನು ತನ್ನ ಮಡಿಲಿನಲ್ಲಿ ಅರಳಿಸಿಕೊಂಡು ಕಾಯುತ್ತಿದೆ. ಬೇಗಬೇಗನೇ ಉದಯಿಸುವ ಸೂರ್ಯನನ್ನು ಬರಮಾಡಿಕೊಳ್ಳಲು ಪಕ್ಷಿ ಸಂಕುಲ ತನ್ನಲ್ಲೇ ಪೈಪೋಟಿಯನ್ನು ಹಾಕಿಕೊಂಡಂತೆ ಗೋಚರಿಸುತ್ತಿದೆ. ನಮ್ಮ ಈ ಹೊಸ ವರ್ಷದ ಆಚರಣೆಯೆಂದರೆ ನಮಗೆಲ್ಲ ಅದೇನೋ ಸಂಭ್ರಮ. ಯುಗಾದಿಯ ಮುಖೇನ ಹೀಗೆ ಹೊಸ ವರ್ಷವನ್ನು ಬರಮಾಡಿಕೊಳ್ಳುವುದರ ಜೊತೆಗೆ, ಬೇವು-ಬೆಲ್ಲ, ಹೋಳಿಗೆ ಊಟ, ಹೊಸ ವರ್ಷದ ಗ್ರಹಾಚಾರ ಫಲ, ಹಾಗೂ ಹಳೆಯದನ್ನು ಮರೆತು ಹೊಸತನ್ನು ಆಶಿಸುವ ಪರಿಪಾಟಲೆಯನ್ನು ಪಾಲಿಸಿಕೊಂಡು ಹೋಗುವ ಪರಿಪಾಠ ನಮಗೆ ಸಹಜವಾಗಿ ಬಂದಿದೆ ಎಂದರೆ ತಪ್ಪೇನಿಲ್ಲ .

ಎಲ್ಲ ಸಂಸ್ಕೃತಿಯ ಪ್ರತೀಕವಾಗಿ, ಶಾಂತಿದೂತರ ಆಧ್ಯಾತ್ಮಿಕ ಏಳಿಗೆಗಾಗಿ ಕೋಟಿಗಟ್ಟಲೆ ಜನರು ಭಾಗವಹಿಸಿ ಜನವರಿಯಲ್ಲಿ ಯಶಸ್ವಿಯಾಗಿ ನಡೆದ ಅರ್ಧ ಕುಂಭಮೇಳವನ್ನು ಪ್ರಯಾಗದಲ್ಲಿ ಆಚರಿಸುವುದನ್ನು ನಾವೆಲ್ಲ ಸಂಭ್ರಮದಿಂದ ನೋಡಿದೆವು. ಶಾಂತಿ-ಸಹನೆ ನಮ್ಮ ದೌರ್ಬಲ್ಯವೆಂದುಕೊಂಡು ಭಯವನ್ನು ಬಿತ್ತುಲು ಪ್ರಯತ್ನಿಸುವ ಈ ಭಯೋತ್ಪಾದಕರಿಂದ ಹಗಲೂ-ರಾತ್ರಿ ದೇಶದ ಗಡಿಯನ್ನು ಕಾದುಕೊಂಡು, ತಮ್ಮನ್ನೇ ತಾವು ಸಮರ್ಪಿಸಿಕೊಂಡ ಹುತಾತ್ಮ ಯೋಧರನ್ನು ಇಡೀ ವಿಶ್ವವೇ ನೆನೆದು ಕಣ್ಣೀರಿಡುವಂಥ ಘಟನೆಗಳು ಫೆಬ್ರುವರಿಯಲ್ಲಿ ಜರುಗಿದವು. ಅಲ್ಲದೇ, ಫೆಬ್ರುವರಿ ಹತ್ತರಂದು ನಮ್ಮ ಬೃಂದಾವನ ಸೌರಭ ತಂಡದ ಟ್ರಸ್ಟೀ, ಮಾಜಿ ಅಧ್ಯಕ್ಷ ಹಾಗೂ ಸಕ್ರಿಯ ಕಾರ್ಯಕರ್ತ ಸಂತೋಷ್‌ಕುಮಾರ್ ಕಡ್ಲೆಬೇಳೆಯವರನ್ನು ಕಳೆದುಕೊಂಡೆವು. ಈ ಸಂದರ್ಭದಲ್ಲಿ ಸಂತೋಷ್ ಅವರ ಕೊಡುಗೆಯನ್ನು ಸೌರಭ ತಂಡ ವಿಶೇಷವಾಗಿ ನೆನೆಯುತ್ತದೆ. ಮೃತರ ಆತ್ಮಕ್ಕೆ ಶಾಂತಿ ಕೋರುತ್ತಾ, ನೋವಿನಲ್ಲೂ ನಾವೆಲ್ಲ ಒಟ್ಟುಗೂಡಿದ್ದೇವೆ.

ಈ ವರ್ಷ, ನಮ್ಮ ಮೊಟ್ಟ ಮೊದಲ ಕಾರ್ಯಕ್ರಮ 'ವಸಂತೋತ್ಸವ' ಏಪ್ರಿಲ್ ೭ರ ಭಾನುವಾರ ಹೈಟ್ಸ್‌ಟೌನ್ ಹೈ ಸ್ಕೂಲ್‌ನಲ್ಲಿ ನಡೆಯುವ ವಿಚಾರ ನಿಮಗೆಲ್ಲ ತಿಳಿದೇ ಇದೆ. ಹೊಸ ವರ್ಷದ ಯಾದಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಿಮ್ಮನ್ನು ರಂಜಿಸಲು ಸೌರಭ ತಂಡ ಸಿದ್ಧವಾಗಿದೆ. ನಮ್ಮ ಮುಖ್ಯ ಅತಿಥಿ ಶ್ರೀಮತಿ ಶುಭಾ ಧನಂಜಯ ಅವರು ಪ್ರಸ್ತುತ ಪಡಿಸುವ ನೃತ್ಯ ರೂಪಕದ ಜೊತೆಗೆ ಈ ಕಾರ್ಯಕ್ರಮಕ್ಕೆಂದೇ ತಿಂಗಳುಗಟ್ಟಲೇ ಕ್ಲಿಷ್ಟಕರವಾದ ಕನ್ನಡ ಶಬ್ದಗಳನ್ನು ಪೋಣಿಸಿಕೊಂಡು, ನಿಮ್ಮನ್ನು ರಂಜಿಸಲಿರುವ ಕನ್ನಡ ಶಾಲೆಯ ಮಕ್ಕಳ ಕಾರ್ಯಕ್ರಮಗಳ ಜೊತೆಗೆ ನಮ್ಮ ಸಮುದಾಯದ ಹಲವಾರು ಸದಸ್ಯರು ಸೇರಿ ನಡೆಸಿ ಕಾರ್ಯಕ್ರಮಗಳು ನಿಮಗೆ ಮುದ ನೀಡುತ್ತವೆ ಎಂಬುದು ನಮ್ಮ ನಂಬಿಕೆ. ಮಧ್ಯಾಹ್ನದ ಹಬ್ಬದೂಟದ ಜೊತೆಗೆ ಕಾರ್ಯಕ್ರಮದ ಕೊನೆಯಲ್ಲಿ ಸಿಂಹಾದ್ರಿ ಸಂತೆಬೆನ್ನೂರು ತಂಡದವರಿಂದ ರಸಮಂಜರಿ ಕಾರ್ಯಕ್ರಮವನ್ನು ಏರ್ಪಡಿಸಿದ್ದೇವೆ. ಎಂದಿನಂತೆ ಈ ಕಾರ್ಯಕ್ರಮದಲ್ಲಿಯೂ ಸಹ ಫುಡ್ ಡ್ರೈವ್ ಅನ್ನು ದೇಣಿಗೆಯ ಅಂಗವಾಗಿ ಆಯೋಜಿಸಿರುತ್ತೇವೆ, ದಯವಿಟ್ಟು ಎಲ್ಲರೂ ತಮ್ಮ ಇಷ್ಟಾನುಸಾರ ಸಹಾಯ ಮಾಡಬೇಕಾಗಿ ಕೋರುತ್ತೇವೆ. ಜೊತೆಗೆ, ಈ ಕಾರ್ಯಕ್ರಮದಲ್ಲಿ ಕನ್ನಡ ಬಿಸಿನೆಸ್ ಕಮ್ಯೂನಿಟಿಯನ್ನು ಸ್ಥಳೀಯ ನೇತಾರರಿಂದ ಸಾಂಕೇತಿಕವಾಗಿ ಉದ್ಘಾಟಿಸಿ, ಈ ಸಮುದಾಯವನ್ನು ಇನ್ನಷ್ಟು ಬೆಳೆಸುವ ನಿಟ್ಟಿನಲ್ಲಿ ಚಾಲನೆ ನೀಡಲಾಗುವುದು.

ದಯವಿಟ್ಟು ನೀವು ಮತ್ತು ನಿಮ್ಮ ಬಂಧು ಮಿತ್ರರು ಬಂದು ವಸಂತೋತ್ಸವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇವೆ. ತಪ್ಪದೇ ಬನ್ನಿ!

ಹೊಸ ವಿನ್ಯಾಸದಲ್ಲಿ "ಬೃಂದಾವನ ವಾಣಿ"ಯನ್ನು ಹೊರತರುತ್ತಿರುವ ಸಂಪಾದಕೀಯ ಮಂಡಳಿಗೆ ಅನಂತ ನಮನಗಳು.

ತಮ್ಮ ವಿಶ್ವಾಸಿ,



**ಸತೀಶ ಹೊಸನಗರ**

# ನಮ್ಮನ್ನಗಲಿದ ಸಂತೋಷ



ಹೊನ್ನಾವರದ ಕನ್ನಡ ವೀರ
ಭಾರತ ದೇಶದ ಹೆಮ್ಮೆಯ ಕುವರ
ನಿನ್ನಯ ಸ್ನೇಹ, ಎಣೆಯಿಲ್ಲದ ತೀರ
ಎಲ್ಲರ ನೆನಪಿನಲಿ ಎಂದೆಂದಿಗೂ ನೀ ಅಮರ

ಜನ್ಮ ಭೂಮಿಯಿಂದ ಕರ್ಮ ಭೂಮಿಗೆ ಪಯಣ
ನಿನ್ನಯ ಮಾತೃ ಭೂಮಿ ಪ್ರೇಮ ಅಸಾಧಾರಣ
ಸ್ನೇಹದಿಂದ ಸೇರಿ ಹೊಸ ಗೂಡು ಕಟ್ಟುವ ಜೇನು ನೊಣ
ಕಟ್ಟೆ ಹುಡುಗರ ಸ್ನೇಹದೊಂದಿಗೆ, ಬದುಕೇ ನಿನಗೆ ಕ್ರೀಡಾಂಗಣ

ಮರೆಯಲಾಗದು ನಿನ್ನಯ ಕನ್ನಡ ಪ್ರೇಮ
ಬೃಂದಾವನಕೆ ಸೇವೆ ಸಲ್ಲಿಸಿದೆ ಆಗಿ ನೀ ಪ್ರಥಮ
ಸಾರ್ಥಕವಾಯಿತು ನಿನ್ನಯ ಶ್ರಮ, ಯಶಸ್ಸಿನ ಆರರ ಆಕ್ಕ ಕಾರ್ಯಕ್ರಮ
ಸ್ನೇಹಿತರೊಂದಿಗೆ ಮಿಡಿಯುತಿದೆ ಮನ, ನೆನೆಸಿ ಆ ವಿಧಿ ನಿಯಮ

ದೇಣಿಗೆಯಲಿ ಎಂದೆಂದು ಮುಂದು
ರೈತ, ಸೈನಿಕರಾಗಲಿ, ಭಾರತ, ಅಮೆರಿಕವಾಗಲಿ, ಅಗತ್ಯವಿರುವವರೆಲ್ಲ ಒಂದು
ಮರೆಯಲಾರೆವು ನಿನ್ನಯ ಉತ್ಸಾಹದ ಚಿಲುಮೆಯ ಎಂದೆಂದೂ
ಸ್ನೇಹ ಬುಗ್ಗೆಯ ಉಕ್ಕಿಸು ಮತ್ತೊಮ್ಮೆ ಬಂದು

ಮಂದಸ್ಮಿತಳಿಗೆ ನಿನ್ನಯ ನೆನಪು ನಿರಂತರ
ಪ್ರೇರಣ, ಚೈತನ್ಯ ಏರುವರು ತಂದೆಯ ಎತ್ತರ
ಎಲ್ಲರ ಮನಸ್ಸಿನಾಳದಲಿ ಎಂದೆಂದಿಗೂ ನೀ ಅಮರ
ಸಂಭವಿಸು ಬಾ ಮತ್ತೆ ಕನ್ನಡದ ಕುವರ !!



ಪ್ರೀತಿಯೊಂದಿಗೆ ನಮಿಸುತ್ತ,
ಡಾ ಅಶೋಕ್ ಕಟ್ಟಿಮನಿ

ಫೆಬ್ರುವರಿ ೧೪, ೨೦೧೯

ಅಮೇರಿಕ ಕನ್ನಡ ಸ್ನೇಹಿತರೆಲ್ಲರ ಪ್ರೀತಿ ಅಭಿಮಾನಗಳೊಂದಿಗೆ

# ಬೃಂದಾವನ ವಿಶ್ವಸ್ತನೀಯ ಮಂಡಳಿ(೨೦೧೯ - ೨೦)



**ಶ್ರೀ ಬೆನ್ ಕಾಂತರಾಜು**

*ವಿಶ್ವಸ್ತನೀಯ ಮಂಡಳಿ ಸದಸ್ಯರು*



**ದಿ. ಸಂತೋಷ್ ಕುಮಾರ್ ಕಡ್ಲೆಬೇಳೆ**

*ವಿಶ್ವಸ್ತನೀಯ ಮಂಡಳಿ ಸದಸ್ಯರು*



**ಶ್ರೀ ಡಾ. ಅಶೋಕ್ ಕಟ್ಟೀಮನಿ (ಹಿಂದಿನ ಅಧ್ಯಕ್ಷರು)**

*ವಿಶ್ವಸ್ತನೀಯ ಮಂಡಳಿ ಸದಸ್ಯರು*



**ಶ್ರೀ ಸತೀಶ್ ಹೊಸನಗರ (ಹಾಲಿ ಅಧ್ಯಕ್ಷರು)**

*ವಿಶ್ವಸ್ತನೀಯ ಮಂಡಳಿ ಸದಸ್ಯರು*


ಯುಗಾದಿ ಹಬ್ಬ
ವಸಂತೋತ್ಸವ
HAPPY Ugadi
A fun filled Ugadi Event with Cultural Programs
Habbada Oota, Sangeeta Sanje
Sunday, April 7th 2019 @ 11:00 am - 7:00 pm
Hightstown High School, 25 Leshin Lane, Hightstown, NJ 08520
ಕಾರ್ಯಕ್ರಮಗಳ ವಿವರ:
* ಹೆಸರಾಂತ ನೃತ್ಯಗಾರ್ತಿ ವಿದುಷಿ ಶುಭಾ ಧನಂಜಯ ರವರಿಂದ ಶಾಸ್ತ್ರೀಯ ನೃತ್ಯ ಪ್ರದರ್ಶನ
* ಬೃಂದಾವನ ಕನ್ನಡ ಶಾಲಾ ಮಕ್ಕಳಿಂದ ವಿಶೇಷ ಕಾರ್ಯಕ್ರಮಗಳು
* ರಂಗ ಬೃಂದಾವನ ತಂಡದಿಂದ ಟಿ.ಪಿ.ಕೈಲಾಸಂ ರವರ ಹಾಸ್ಯ ನಾಟಕ 'ನಮ್ ಕಂಪನಿ'
* 'ಬೇವು-ಬೆಲ್ಲ' ಸಂಗೀತ ಸಂಜೆ ಸಿಂಹಾದ್ರಿ ಸಂತೇಬೆನ್ನೂರ್ ಮತ್ತು ಸ್ನೇಹಿತರಿಂದ
ಹಬ್ಬದೂಟ - ಮಧ್ಯಾಹ್ನ 12.00 ರಿಂದ 1.15
ಸ್ನ್ಯಾಕ್ಸ್ ಮತ್ತು ಕಾಫಿ - ಸಂಜೆ 4.30
Registration Fee:
Vasantotsava Event
Event Registration in $
Early Bird (Before March 25th)
After March 25th
For current members



ಈಶಾನ್ಯ ಅಮೆರಿಕ ಕನ್ನಡಿಗರು ಅರ್ಪಿಸುವ
ಸಂತೋಷ್ ಕುಮಾರ್ ಕಲ್ಲೆಬೇಳೆ ಸ್ಮರಣಾರ್ಥ
ಭಾರತೀಯ ಸೇನೆಯ ಸಹಾಯಾರ್ಥ
ಎಪ್ರಿಲ್ 21
ಭಾನುವಾರ 3 ಗಂಟೆಗೆ
Hightstown School
25 Leshin Ln, Hightstown
NJ 08520
ದೇಶ, ತ್ಯಾಗ, ಸ್ಮರಣೆ
ಕನ್ನಡ ಮ್ಯೂಸಿಕಲ್ ನೈಟ್
Vijay Prakash LIVE
MUSICAL
Concert in NJ
DONATIONS:$39, $59, $109
ಈ ಕಾರ್ಯಕ್ರಮದ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ದಯವಿಟ್ಟು ಭಾಗವಹಿಸಿ
ANURADHA BHAT
SHASHIKALA
ARUN KUMAR
AKASH
BRUTHUVA
PRAVEEN
SANDEEP
3rd Anniversary
TANISH
National Promoters:
Tanish Media LLC
Donations & Sponsorship online at : https://vpconcert.com/newjersey2 | www.tanishmedia.com
For more information & Sponsorship contact: vpconcertnj@gmail.com
Contact Details: BEN +1 (732) 672-9844 | ASHOK +1 (848) 248-9697
SATHISH +1 (973) 527-3173 | SATYA +1 (732) 763-2363


ಕನ್ನಡ ಸಾಹಿತ್ಯ ರಂಗ ಮತ್ತು ತ್ರಿವೇಣಿ ಕನ್ನಡ ಸಂಘದ ಸಹಯೋಗದಲ್ಲಿ ನಡೆಯಲಿರುವ ಅದ್ದೂರಿಯ ಸಾಹಿತ್ಯ ಸಮ್ಮೇಳನ
ಒಂಭತ್ತನೆಯ ವಸಂತ ಸಾಹಿತ್ಯೋತ್ಸವಕ್ಕೆ
ನಿಮ್ಮೆಲ್ಲರಿಗೂ ಹಾರ್ದಿಕ ಸ್ವಾಗತ
TRIVENI TO HOST
9th VASANTHA SAHITYOTSAVA
Celebration of Kannada Sahitya Ranga
May 18th Saturday & 19th Sunday, 2019
Venue: DeMasi Middle School 199 Evesboro Medford Road, Marlton, NJ 08053
ಕನ್ನಡ ಸಾಹಿತ್ಯದ ಪ್ರಸಿದ್ಧ ಲೇಖಕರು, ಪ್ರಕಾಶಕರೂ ಆದ ಶ್ರೀ ವಸುಧೇಂದ್ರ
ಅವರ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಮುಖ್ಯ ವಸ್ತು -'ಬದಲಾವಣೆ'ಯನ್ನು ಕುರಿತು
ಉಪನ್ಯಾಸ ಮತ್ತು ಪುಸ್ತಕ ಲೋಕಾರ್ಪಣೆ
ಅತಿಥಿಗಳು:
ಡಾ. ವಸುಂಧರಾ ಭೂಪತಿ
ಪ್ರಕಾಶ್ ಕಡಮೆ
ಸುನಂದಾ ಕಡಮೆ
ಸಾಹಿತ್ಯಿಕ ಕಾರ್ಯಕ್ರಮಗಳು:
ಕಮ್ಮಟಗಳು – ಅನುವಾದ ಸಾಹಿತ್ಯ, ಸಣ್ಣ ಕಥೆಗಳು । ನಮ್ಮ ಬರಹಗಾರರು – ಪರಿಚಯ
ಸ್ತ್ರೀ ಸಂವೇದನೆ – ವಿಚಾರ ಸಂಕಿರಣ । ಅಧ್ಯಕ್ಷರೊಡನೆ ಸಂವಾದ ಇತ್ಯಾದಿ....
ಮನರಂಜನೆಗಳು: ಗಾಯನ, ನೃತ್ಯ, ನಾಟಕ, ನೃತ್ಯ ರೂಪಕ ಮತ್ತು ಮಕ್ಕಳ ಕಾರ್ಯಕ್ರಮಗಳು
For more information, please visit www.kannadasahityaranga.org

# ಜನವರಿ ಸಂಚಿಕೆಗೆ ಓದುಗರ ಅನಿಸಿಕೆಗಳು

ಸೌರಭ ತಂಡದ ಹೊಸಮುಖದ ವಾಣಿ
ಸೌರಭವ ಸೂಸುತಿದೆ ಹೊಸತನವ ಬೀರಿ
ಸಂಪಾದಕ ಮಂಡಲಿಗೆ ನನ್ನ ಶಹಭಾಷ್ ಗಿರಿ
ಮತ್ತೆ ಮತ್ತೆ ಮೂಡಲಿ ನವ್ಯತೆಯ ತೋರಿ

**- ವಿ ಪ್ರಸನ್ನಕುಮಾರ್**

ಸಂಚಿಕೆ ಬಹಳ ಚೆನ್ನಾಗಿ ಮೂಡಿ ಬಂದಿದೆ!
ಸಂಪಾದಕೀಯ ತಂಡಕ್ಕೆ ಶುಭಾಶಯಗಳು

**-ಮಲ್ಲಿಕ್ ಪ್ರಸಾದ್**

ಬೃಂದಾವನವಾಣಿಯ ಸಂಪಾದಕೀಯ ತಂಡದ ಸದಸ್ಯರಿಗೆ ಹೃತ್ಪೂರ್ವಕ ಅಭಿನಂದನೆಗಳು.ಸೌರಭ ತಂಡದ ಪರವಾಗಿ ಪ್ರಕಾಶಗೊಂಡ ಈ ವಾಣಿಯು ಎಲ್ಲ ರೀತಿಯಿಂದಲೂ ಓದುಗರ ಕಣ್ಣುಗಳನ್ನೂ ಹಾಗು ಮನಸ್ಸನ್ನೂ ಸೆಳೆಯುತ್ತದೆ. ಮುಖಪುಟದ ವಿನ್ಯಾಸವು ಬಹಳ ಚೆನ್ನಾಗಿದೆ. ಮುಖಪುಟದಲ್ಲಿನ ಸುಮದಿಂದ ಹೊರಬಂದ ಸಾಹಿತ್ಯ ಸೌರಭವು ವಾಣಿಯೊಳಗಿನ ವೈವಿಧ್ಯಮಯ ಲೇಖನಗಳ ಹಾಗು ಸುಂದರ ಛಾಯಾ ಚಿತ್ರಗಳ ಮೂಲಕ ಹರಡಿದೆ. ಲೇಖನ ಸೂಚಿ ಪುಟಗಳ ವಿನ್ಯಾಸ ಬಹಳ ಚೆನ್ನಾಗಿದೆ. ಸಂಪಾದಕೀಯ ಹಾಗು ಅಧ್ಯಕ್ಷರನುಡಿಯು ಬೃಂದಾವನವಾಣಿಯ ಹಾಗು ಸೌರಭ ತಂಡದ ನೋಟಗಳನ್ನು ಚೆನ್ನಾಗಿ ನಿರೂಪಿಸಿವೆ. ಲೇಖನಗಳು ವೈವಿಧ್ಯಮಯವಾಗಿದ್ದು ಸಾಹಿತ್ಯದ ವಿಸ್ತಾರದ ಅನುಭವವನ್ನು ನೀಡುತ್ತವೆ. ಇದೆ ರೀತಿ ಮುಂದಿನ ಸಂಚಿಕೆಗಳೂ ಸಾಹಿತ್ಯ ಸೌರಭವನ್ನು ಹರಡಲೆಂದು ಶುಭಾಶಯವನ್ನು ಕೋರುತ್ತೇನೆ.

ವಿಶ್ವಾಸಾದರಪೂರ್ವಕ,
**ಎಂ. ಜಿ. ಪ್ರಸಾದ್**

ಸಂಚಿಕೆ ಬಹಳ ಚೆನ್ನಾಗಿ ಮೂಡಿ ಬಂದಿದೆ!
ಸಂಪಾದಕೀಯ ತಂಡಕ್ಕೆ ಶುಭಾಶಯಗಳು

**-ಶೈಲೇಶ್ ಉಪ್ಪಿನ್**

ಸಂಚಿಕೆ ಬಹಳ ಚೆನ್ನಾಗಿ ಮೂಡಿ ಬಂದಿದೆ! ಸೌರಭ ತಂಡಕ್ಕೆ ಅಭಿನಂದನೆಗಳು.

**- ಲತಾ**

ಈ ಸಂಚಿಕೆ ಬಹಳ ಚೆನ್ನಾಗಿ ಬಂದಿದೆ. ಮತ್ತೆ ಮಕ್ಕಳೋತ್ಸವ/ರಾಜ್ಯೋತ್ಸವ ಕಾರ್ಯಕ್ರಮಗಳ ನೆನಪು ಮಾಡಿಕೊಟ್ಟಿತು. ಬರಹಗಳೂ ಚೆನ್ನಾಗಿವೆ. ಒಳ್ಳೆಯ ಸಂಚಿಕೆಯನ್ನು ಎದುರು ನೋಡುತ್ತೇವೆ.ಸಂಪಾದಕೀಯ ತಂಡಕ್ಕೆ ಅಭಿನಂದನೆಗಳು.—**ಅರ್ಚನಾ ಆಚಾರ್ಯ**

ಈ ಸಂಚಿಕೆ ಬಹಳ ಚೆನ್ನಾಗಿ ಮೂಡಿ ಬಂದಿದೆ . ಒಳ್ಳೆಯ ಬರಹಗಳಿವೆ ಮತ್ತು ವರ್ಣಮಯವಾಗಿದೆ. ಸಂಪಾದಕೀಯ ತಂಡಕ್ಕೆ ಅಭಿನಂದನೆಗಳು.

**- ಸವಿತಾ ರಾವ್**

# ಅಂತರಂಗದ ಅನ್ವೇಷಣೆ

# ಶರೀರತ್ರಯ



*ಡಾ.ಎಂ.ಜಿ.ಪ್ರಸಾದ್*

**"ಭಾರತ ಎಂಬ ಪದದಲ್ಲಿಯೂ 'ಭಾ' ಎಂದರೆ 'ಪ್ರಕಾಶ' ಹಾಗೂ 'ರತ' ಎಂದರೆ ಅದನ್ನು 'ಅರಸುವವರು' ಎಂದರ್ಥ. ಆದ್ದರಿಂದ ಭಾರತೀಯರು ಎಂದರೆ 'ಜ್ಞಾನದ ಪ್ರಕಾಶವನ್ನು ಅನ್ವೇಷಿಸಿ ಹೊಂದುವವರು' ಎಂದರ್ಥ."**

**ಪೀಠಿಕೆ**

ಅನ್ವೇಷಣೆ ಎಂದರೆ ಹುಡುಕುವುದು. ಎಲ್ಲ ಪ್ರಾಣಿಗಳೂ ಆಹಾರ, ಶತ್ರುವಿನಿಂದ ರಕ್ಷಣೆ, ಸಂತತಿಯನ್ನು ಬೆಳೆಸಲು ಸಂಗಾತಿ ಇವುಗಳನ್ನು ಹುಡುಕುತ್ತವೆ. ಇದು ನಿಸರ್ಗದಲ್ಲಿ ಸಹಜವಾಗಿ ಕಾಣಬರುತ್ತದೆ. ಹಾಗೆಯೇ ನಿಸರ್ಗದಲ್ಲಿ ಪ್ರತಿಯೊಂದು ಚೈತನ್ಯವಿರುವ ಹಾಗೂ ಜಡವಸ್ತುವಿಗೆ ಅದರದೇ ಆದ ಧರ್ಮ ಅಥವಾ ಲಕ್ಷಣಗಳಿರುತ್ತವೆ. ಧರ್ಮ ಎಂಬ ಪದವು "ಧಾರಣಾತ್ ಇತಿ ಧರ್ಮ" ಎಂದರೆ "ಧರಿಸುವುದರಿಂದ ಧರ್ಮ" ಎಂಬ ವ್ಯುತ್ಪತ್ತಿಯಿಂದಾಗಿದೆ. ಉದಾಹರಣೆಗೆ ಬೆಂಕಿಗೆ ಸುಡುವುದೇ ಪ್ರಧಾನ ಲಕ್ಷಣ ಅಥವಾ ಧರ್ಮ. ಹಾಗೆಯೇ ಪಕ್ಷಿಗೆ ಹಾರುವುದೇ ಧರ್ಮ. ಮೀನಿಗೆ ಈಜುವುದೇ ಧರ್ಮ.

ಇದೆ ರೀತಿ ಮನುಷ್ಯನ ಧರ್ಮ ಅಥವಾ ಲಕ್ಷಣವೇನು? ಎಂಬ ಪ್ರಶ್ನೆಗೆ ಉತ್ತರ ಅಷ್ಟು ಸುಲಭವಲ್ಲ. ಏಕೆಂದರೆ ಮನುಷ್ಯರಲ್ಲಿ ದೇಹದ ಮಟ್ಟದಲ್ಲಿ ಎಲ್ಲರ ಅಗತ್ಯಗಳೂ ಸಾಮಾನ್ಯವಾಗಿ ಕಂಡರೂ ಮಾನಸಿಕ ಯೋಜನೆಗಳ ಮಟ್ಟದಲ್ಲಿ ವೈವಿಧ್ಯತೆಯಿರುವುದು ಎಲ್ಲರಿಗೂ ತಿಳಿದ ವಿಷಯ. ಹಾಗಿದ್ದರೂ "ಪ್ರಶ್ನೆ ಮಾಡುವುದು", "ಅನ್ವೇಷಣೆ", "ಸರಿ ಹಾಗೂ ತಪ್ಪುಗಳ ವಿವೇಚನೆ" ಮುಂತಾದ ಲಕ್ಷಣಗಳನ್ನು ಎಲ್ಲಾ ಮನುಷ್ಯರಲ್ಲೂ ಕಾಣುತ್ತೇವೆ. ಈ ಲಕ್ಷಣಗಳು ಮನುಷ್ಯನನ್ನು ಧರಿಸುವುದರಿಂದ ಇವನ್ನು ಮನುಷ್ಯನ ಧರ್ಮ ಎಂದಿದೆ. ಈ ಧರ್ಮ ಅಥವಾ ಲಕ್ಷಣ ಮನುಷ್ಯನಲ್ಲಿ ಹುಟ್ಟಿನಿಂದ ಬಂದಿರುವುದರಿಂದ ಮನುಷ್ಯ ಪ್ರಾಣಿಗಳಿಗಿಂತ ವಿಭಿನ್ನನು. ಹಿತೋಪದೇಶದ ಒಂದು ಶ್ಲೋಕ ಹೀಗಿದೆ:

**"ಆಹಾರ ನಿದ್ರಾ ಭಯಂ ಮೈಥುನಂ ಚ**
**ಸಾಮಾನ್ಯಮೇತತ್ ಪಶುರ್ಭಿನರಾಣಾಮ್**
**ಧರ್ಮೋ ಹಿತೇಷಾಮಧಿಕೋ ವಿಶೇಷಃ**
**ಧರ್ಮೇಣ ಹೀನಾಃ ಪಶುಭಿಃ ಸಮಾನಾಃ"**

ಎಂದರೆ "ಆಹಾರ, ನಿದ್ರೆ, ಭಯ ಹಾಗೂ ಮೈಥುನ ಇವು ಪಶುಗಳಿಗೆ ಹಾಗೂ ಮನುಷ್ಯರಿಗೆ ಸಮಾನವಾದ ಲಕ್ಷಣಗಳು. ಆದರೆ ಧರ್ಮವೊಂದೇ ಮನುಷ್ಯನಿಗಿರುವ ಹೆಚ್ಚುಗಾರಿಕೆ. ಆದುದರಿಂದ ಧರ್ಮವನ್ನು ಬಿಟ್ಟ ಮನುಷ್ಯರು ಪಶುಗಳಂತಾಗುತ್ತಾರೆ."

ಮನುಷ್ಯರ ವೈಶಿಷ್ಟ್ಯವೇ ತಮ್ಮ ಪರಿಸರದ ಅಂದರೆ ಬಹಿರಂಗ ಹಾಗೂ ಅಂತರಂಗಗಳನ್ನು ಅನ್ವೇಷಣೆ ಮಾಡುವುದು. ಈ ವಿಶೇಷ ಅನ್ವೇಷಣೆಯನ್ನು ಮನುಷ್ಯನು ತನ್ನ ದೇಹ ಅಥವಾ ಶರೀರ ಎಂಬ ಸಾಧನದಿಂದ ಮಾಡುವುದು ಸಹಜ.

**ಸನಾತನ ಧರ್ಮದ ಅನ್ವೇಷಣಾ ಮಾರ್ಗ**

ಭಾರತದಲ್ಲಿ ರೂಪುಗೊಂಡ ಸನಾತನ ಧರ್ಮದಲ್ಲಿ ಹಿಂದಿನ ಕಾಲದಿಂದಲೂ ಅನ್ವೇಷಣೆ ಮಾಡಿ ಜ್ಞಾನವನ್ನು ಪಡೆದ ಅನೇಕರು ಋಷಿಗಳೆನಿಸಿಕೊಂಡರು. "ಋಷತಿ ಜ್ಞಾನೇನ ಸಂಸಾರಪಾರಮ್", ಎಂದರೆ "ಜ್ಞಾನದಿಂದ ಸಂಸಾರದ ಕೊನೆಯನ್ನು ಮುಟ್ಟಿದವನು ಅಥವಾ ಮುಟ್ಟಿದವಳು" ಎಂದಾಗುತ್ತದೆ. ಹಾಗೆಯೇ ಭಾರತ ಎಂಬ ಪದದಲ್ಲಿಯೂ 'ಭಾ' ಎಂದರೆ 'ಪ್ರಕಾಶ' ಹಾಗೂ 'ರತ' ಎಂದರೆ ಅದನ್ನು 'ಅರಸುವವರು' ಎಂದರ್ಥ. ಆದ್ದರಿಂದ ಭಾರತೀಯರು ಎಂದರೆ 'ಜ್ಞಾನದ ಪ್ರಕಾಶವನ್ನು ಅನ್ವೇಷಿಸಿ ಹೊಂದುವವರು' ಎಂದರ್ಥ. ಭಾರತೀಯ ಋಷಿಗಳು ಅಂತರಂಗ ಹಾಗೂ ಬಹಿರಂಗ ಕ್ಷೇತ್ರಗಳಲ್ಲಿ ಸಂಶೋಧನಾ ದೃಷ್ಟಿಯಿಂದ ಅನ್ವೇಷಣೆ ಮಾಡಿ ಪಡೆದ ಅಸಂಖ್ಯಾತ ಸಾರ್ವಕಾಲಿಕ ತತ್ವಗಳೇ ಸನಾತನ ಧರ್ಮ ಎಂದೆನಿಸಿದೆ.

**(ಮುಂದಿನ ಪುಟಕ್ಕೆ)**

## ಅಂತರಂಗದ ಅನ್ವೇಷಣೆ

### ಶರೀರತ್ರಯ (ಮುಂದುವರೆದುದು)

ಇದರ ಸಾಹಿತ್ಯವೇ ವೇದೋಪನಿಷತ್ತುಗಳು, ಸ್ಮೃತಿ, ಇತಿಹಾಸ, ದರ್ಶನ, ಪುರಾಣಗಳು ಇತ್ಯಾದಿ. ಈ ಅಪಾರ ಸಾಹಿತ್ಯದಲ್ಲಿ ನಾವು ನೂರಾರು ಋಷಿಗಳ ಅನ್ವೇಷಣಾ ಸಾಧನೆಯನ್ನು ಕಾಣುವುದಲ್ಲದೆ ಅದನ್ನು ಸ್ಫೂರ್ತಿಯಾಗಿಟ್ಟುಕೊಂಡು ಈಗಿನ ಕಾಲದಲ್ಲಿಯೂ ಬಹುಸಂಖ್ಯೆಯಲ್ಲಿ ವಿಶ್ವಾದ್ಯಂತ ಸಾಧಕ-ಸಾಧಕಿಯರು ಅನ್ವೇಷಣಾ ಮಾರ್ಗದಲ್ಲಿದ್ದಾರೆ. ಈ ಸನಾತನ ಧರ್ಮದ ಮಾರ್ಗವನ್ನು ಯೋಗಮಾರ್ಗ ಎಂದು ಹೇಳಬಹುದು. ಹಾಗೆಯೇ ಪ್ರಸ್ತುತ ಕಾಲದಲ್ಲಿಯೂ ವಿಜ್ಞಾನಿಗಳಿಂದ ಆಧುನಿಕ ಸೌಲಭ್ಯ ಮತ್ತು ಸಲಕರಣೆಗಳನ್ನು ಉಪಯೋಗಿಸಿ ವಿಜ್ಞಾನ ಮಾರ್ಗದಿಂದ ಅಂತರಂಗ ಹಾಗೂ ಬಹಿರಂಗ ಕ್ಷೇತ್ರಗಳಲ್ಲಿ ಅನ್ವೇಷಣೆಗಳು ನಡೆದಿವೆ. ಇನ್ನೊಂದು ಮುಖ್ಯವಾದ ಅಂಶವೆಂದರೆ ಯೋಗಮಾರ್ಗ ಹಾಗೂ ವೈಜ್ಞಾನಿಕ ಮಾರ್ಗ ಎರಡನ್ನೂ ಒಂದಕ್ಕೊಂದು ಪೂರಕವಾಗಿ ನೋಡಬೇಕು. ಏಕೆಂದರೆ ಎರಡೂ ಸಹ ಜ್ಞಾನವನ್ನು ಪಡೆಯಲು ಮನುಷ್ಯನು ಉಪಯೋಗಿಸುವ ಮಾರ್ಗಗಳಷ್ಟೇ. ನಮಗೆ ಎರಡೂ ಅನ್ವೇಷಣಾ ಮಾರ್ಗಗಳೂ ಬೇಕು. ಪ್ರಸ್ತುತ ಲೇಖನದಲ್ಲಿ ಸನಾತನ ಧರ್ಮದ ದರ್ಶನದ ಮೂಲಕ ಮನುಷ್ಯನ ಶರೀರದ ಅನ್ವೇಷಣೆಯಲ್ಲಿ ಕಂಡು ಬಂದ ಶರೀರ ತ್ರಯ ತತ್ವವನ್ನು ವಿವೇಚಿಸಲಾಗಿದೆ.

### ಶರೀರ ತ್ರಯ

'ಶರೀರ' ಎಂಬ ಪದ 'ಶ್ರೀಯತೇ ಇತಿ ಶರೀರಃ' ಎಂದರೆ "ಯಾವುದು ನಷ್ಟವಾಗುವುದೋ ಅದು ಶರೀರ" ಎನ್ನುವ ವ್ಯುತ್ಪತ್ತಿಯಿಂದ ಆಗಿದೆ. ಹಾಗೆಯೇ "ದೇಹ" ಎಂಬ ಪದವು "ದಿಹ್ಯತೆ" ಎಂದರೆ "ದಿನೇ ದಿನೇ ಬೆಳೆಯುವುದರಿಂದ ದೇಹ" ಎಂದಾಗುತ್ತದೆ. ಸನಾತನ ಧರ್ಮದ ದರ್ಶನದ ಪ್ರಕಾರ ಮೂರು ರೀತಿಯ ಶರೀರಗಳಿವೆ (ಅಥವಾ ದೇಹಗಳಿವೆ). ಅವುಗಳನ್ನೇ ಸ್ಥೂಲ ಶರೀರ, ಸೂಕ್ಷ್ಮ ಶರೀರ ಹಾಗೂ ಕಾರಣ ಶರೀರಗಳೆಂದು - ಕರೆಯಲಾಗಿದೆ. ಈ ಮೂರೂ ಒಟ್ಟಿಗೆ ಸೇರಿ ಶರೀರ ತ್ರಯ ಅಥವಾ ದೇಹ ತ್ರಯ ಎಂದು ಕರೆಯಲ್ಪಡುತ್ತದೆ. ಈ ಮೂರೂ ಶರೀರಗಳೂ ಒಂದಲ್ಲಾ ಒಂದು ದಿನ ನಷ್ಟವಾಗುವುವು. ಈ ಮೂರೂ ಶರೀರಗದೊಳಗೆ ಇರುವ ಜೀವಕ್ಕೆ "ಜೀವಾತ್ಮ" ಎನ್ನುವುದು. ಈ ಜೀವಾತ್ಮನಿಗೆ ನಾಶವಿಲ್ಲ. ಈ ಶರೀರ ತ್ರಯವು ಜೀವಾತ್ಮನಿಗೆ ಉಪಾಧಿಯಂತೆ. ಈ ಮೂರೂ ಶರೀರಗಳೂ ಪೂರ್ಣವಾಗಿ ನಾಶವಾದ ನಂತರವೇ ಜೀವಾತ್ಮ ಹಾಗೂ ಸರ್ವವ್ಯಾಪಿ ಪರಮಾತ್ಮನ ದರ್ಶನ, ಐಕ್ಯತೆ ಅಥವಾ ಸಂಯೋಗವುಂಟಾಗುತ್ತದೆ. ಆದ್ದರಿಂದಲೇ ಆತ್ಮನ ನಾಶವಿಲ್ಲ ಎಂಬುದನ್ನು ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ತನ್ನ ಭಕ್ತನೂ ಹಾಗೂ ಸಾಧಕನೂ ಆದ ಅರ್ಜುನನ ಮೂಲಕ ಇಡೀ ಜಗತ್ತಿಗೇ ಉಪದೇಶವನ್ನು ನೀಡಿದ್ದಾನೆ.

**"ಅಚ್ಛೇದ್ಯೋಯಮದಾಹ್ಯೋಯಮ್ ಅಕ್ಲೇದ್ಯೋಶೋಷ್ಯ ಏವ ಚ | ನಿತ್ಯಃ ಸರ್ವಗತಃ ಸ್ಥಾಣುಃ ಅಚಲೋಯಂ ಸನಾತನಃ||"**

ಎಂದರೆ "ಆತ್ಮನು ತುಂಡರಿಸಲಾಗದವನು, ಸುಡಸಲಾಗದವನು, ತೋಯಿಸಲಾಗದವನು, ಹಾಗೂ ಒಣಗಿಸಲಾಗದವನು. ಏಕೆಂದರೆ ಆತ್ಮನು ನಿತ್ಯನು, ಎಲ್ಲೆಡೆಯಲ್ಲಿಯೂ ವ್ಯಾಪಿಸಿರುವವನು, ಸ್ಥಿರನು, ಅಚಲನು ಹಾಗೂ ಸನಾತನನು." ಆದ್ದರಿಂದ ಅನ್ವೇಷಣೆಯ ಸಾಧನೆ ಮಾಡಿ ಅತ್ಮದರ್ಶನವನ್ನು ಸಾಧಿಸಬೇಕಾದರೆ ಮೊದಲು ಮೂರು ಶರೀರಗಳ ಬಗ್ಗೆ ತಿಳಿದುಕೊಳ್ಳಬೇಕು.

### ಸ್ಥೂಲ ಶರೀರ

ಸ್ಥೂಲ ಶರೀರವೆಂದರೆ ಎಲ್ಲರಿಗೂ ಕಾಣುತ್ತಿರುವ ಪಂಚಭೂತಗಳಿಂದ ಸಿದ್ಧವಾದ ಶರೀರ. ಜಗದ್ಗುರು ಶ್ರೀ ಆದಿಶಂಕರಾಚಾರ್ಯರ ಈ ಶ್ಲೋಕದಲ್ಲಿ ಪಾಂಚಭೌತಿಕ ಸ್ಥೂಲ ಶರೀರದ ಬಗ್ಗೆ ಚೆನ್ನಾಗಿ ಹೇಳಿದೆ.

**ಪಂಚೀಕೃತ ಮಹಾಭೂತ ಸಂಭವಂ ಕರ್ಮ ಸಂಚಿತಂ|**
**ಶರೀರಂ ಸರ್ವದುಃಖಾನಾಂ ಭೋಗಾಯತನಮುಚ್ಯತೇ||**

(ಮುಂದಿನ ಪುಟಕ್ಕೆ)

# ಅಂತರಂಗದ ಅನ್ವೇಷಣೆ

## ಶರೀರತ್ರಯ (ಮುಂದುವರೆದುದು)

ಎಂದರೆ "ಭೂಮಿ, ನೀರು, ಬೆಂಕಿ, ಗಾಳಿ ಹಾಗೂ ಆಕಾಶಗಳೆಂಬ ಪಂಚಮಹಾಭೂತಗಳ ಸೇರುವಿಕೆ ಹಾಗೂ ಜೀವಿಯ ಕರ್ಮ ಸಂಚಯದಿಂದ ಉಂಟಾದ ಈ ಸ್ಥೂಲ ಶರೀರವು ಸುಖ ಹಾಗೂ ದುಃಖಗಳನ್ನು ಅನುಭವಿಸುವ ಆಶ್ರಯ ಅಥವಾ ಮನೆಯಂತಾಗಿದೆ."

ಅಂಗಾಂಗಳಿರುವ ಈ ದೇಹವನ್ನೇ ಸಾಮಾನ್ಯವಾಗಿ ಎಲ್ಲರೂ ತಾವೆಂದು ವ್ಯವಹರಿಸುತ್ತಾರೆ. ಈ ದೇಹಕ್ಕೇ ಹೆಸರು, ವರ್ಣ, ಲಿಂಗ ಇತ್ಯಾದಿ ಹೇಳುತ್ತೇವೆ. ಈ ಶರೀರವನ್ನೇ ಅನ್ನಮಯ ಎನ್ನುತ್ತೇವೆ. ಏಕೆಂದರೆ ಪ್ರಧಾನವಾಗಿ ಇದು ಆಹಾರದಿಂದಲೇ ಹುಟ್ಟಿ, ಆಹಾರದಿಂದಲೇ ಬೆಳೆಯುತ್ತದೆ. ಈ ಸ್ಥೂಲ ಶರೀರಕ್ಕೆ ನವದ್ವಾರಗಳು ಮತ್ತು ಸಪ್ತಧಾತುಗಳಿವೆ. ಹಾಗೆಯೇ ಈ ಶರೀರವು ಆರು ವಿಕಾರಗಳಿಗೆ ಒಳಗೊಳ್ಳುತ್ತದೆ. ನವದ್ವಾರಗಳು ಯಾವುವೆಂದರೆ ಎರಡು ಮೂಗಿನ ಹೊಳ್ಳೆಗಳು, ಕಣ್ಣುಗಳು, ಬಾಯಿ, ಎರಡು ಕಿವಿಗಳು, ಮಲ ಮತ್ತು ಮೂತ್ರ ವಿಸರ್ಜನೆ ಮಾಡುವ ಎರಡು ದ್ವಾರಗಳು. ನಂತರ ಸಪ್ತಧಾತುಗಳೆಂದರೆ ಚರ್ಮ, ರಕ್ತ, ಮಾಂಸ, ಮೇದಸ್ಸು (ಕೊಬ್ಬು), ಮೂಳೆ, ಮಜ್ಜೆ (ಮೂಳೆಯಲ್ಲಿನ ಜಿಡ್ಡು) ಹಾಗೂ ಶುಕ್ಲ (ಅಥವಾ ಶೋಣಿತ). ನಂತರ ಶರೀರಕ್ಕಾಗುವ ಆರು ವಿಕಾರಗಳೆಂದರೆ ಆರಂಭದಲ್ಲಿ ಪಿಂಡರೂಪದಲ್ಲಿ ಗರ್ಭದಲ್ಲಿರುವುದು, ಹುಟ್ಟುವುದು, ಬೆಳೆಯುವುದು, ಮುದಿಯಾಗುವುದು, ಕ್ಷೀಣವಾಗುವುದು ಮತ್ತು ಸಾಯುವುದು. ಮತ್ತೊಂದು ವಿಷಯವೇನೆಂದರೆ ಒಬ್ಬನು (ಅಥವಾ ಒಬ್ಬಳು) ಮಾಡಿದ ಕರ್ಮವನ್ನು ಸ್ಥೂಲ ಶರೀರದ ಮೂಲಕವೇ ಅನುಭವಿಸಬೇಕು.

## ಸೂಕ್ಷ್ಮ ಶರೀರ

ನಮ್ಮೆಲ್ಲರ ಸ್ಥೂಲ ಶರೀರದೊಳಗೆ ಸೂಕ್ಷ್ಮವಾಗಿರುವ ಅಂದರೆ ಭೌತಿಕವಾಗಿ ಕಾಣದಿರುವ ಶರೀರಕ್ಕೆ ಸೂಕ್ಷ್ಮ ಶರೀರವೆಂದು ಹೇಳುತ್ತಾರೆ. ಪ್ರಾಣೇಂದ್ರಿಯಗಳೇ ಸೂಕ್ಷ್ಮ ಶರೀರದ ತತ್ವಗಳು. ಈ ತತ್ವಗಳು ಯಾವುವೆಂದರೆ ಐದು ಜ್ಞಾನೇಂದ್ರಿಯಗಳು, ಐದು - ಕರ್ಮೇಂದ್ರಿಯಗಳು, ಐದು ಪ್ರಾಣಗಳು ಹಾಗೂ ನಾಲ್ಕು ಅಂಗಗಳನ್ನೊಳಗೊಂಡ ಅಂತಃಕರಣ.ಒಟ್ಟು ಈ ಹತ್ತೊಂಬತ್ತು ತತ್ವಗಳಲ್ಲಿ ಒಂದೊಂದನ್ನೂ ಆಧ್ಯಾತ್ಮಿಕವೆಂದೂ, ಅದರ ಕ್ರಿಯೆಗಳನ್ನು ಆಧಿಭೌತಿಕವೆಂದೂ ಹಾಗೂ ಅದರ ಹಿಂದಿರುವ ಚೇತನಾಶಕ್ತಿಯನ್ನು ಆಧಿದೈವಿಕವೆಂದೂ ಕರೆಯುತ್ತಾರೆ. ಅಂದರೆ ಸೂಕ್ಷ್ಮ ಶರೀರವೂ ಜಡ. ಅವುಗಳು ಕಾರ್ಯಮಾಡುವುದಕ್ಕೆ ಅದರ ಹಿಂದಿರುವ ನಿಸರ್ಗದಲ್ಲಿನ ದೇವತಾ ಶಕ್ತಿಗಳೇ ಕಾರಣ. ಈಗ ಸೂಕ್ಷ್ಮ ಶರೀರದ ತತ್ವಗಳನ್ನು ಪರಾಮರ್ಶಿಸೋಣ. ಮೊದಲಿಗೆ ಅಂತಃಕರಣ. ಎಂದರೆ ನಮ್ಮೊಳಗಿರುವ ಕರಣ ಅಥವಾ ಸಾಧನ. ಅಂತಃಕರಣದ ನಾಲ್ಕು ಅಂಗಗಳೇ ಮನಸ್ಸು, ಬುದ್ಧಿ , ಅಹಂಕಾರ ಹಾಗೂ ಚಿತ್ತ. ಮನಸ್ಸಿನ ಬಗ್ಗೆ "ಸಂಕಲ್ಪ ವಿಕಲ್ಪಾತ್ಮಕಂ ಮನಃ" ಎಂದರೆ ಸಂಕಲ್ಪ ಹಾಗೂ ವಿಕಲ್ಪಗಳನ್ನು ಮಾಡುವುದೇ ಮನಸ್ಸು. ಸಂಕಲ್ಪವೆಂದರೆ ಯಾವುದಾದರೊಂದು ಕೆಲಸವನ್ನು ಮಾಡುತ್ತೇನೆ ಎನ್ನುವುದು. ಆ ಕೆಲಸವನ್ನು ಮಾಡಬಹುದೇ ? ಮಾಡಬಾರದೇ? ಎಂತೆಲ್ಲಾ ಯೋಚಿಸುವುದು ವಿಕಲ್ಪ. ಎಲ್ಲದಕ್ಕೂ ಮನಸ್ಸೇ ಆರಂಭ ಹಾಗೂ ಮುಖ್ಯ. ಬುದ್ಧಿಯ ಬಗ್ಗೆ "ನಿಶ್ಚಯಾತ್ಮಿಕಾ ಬುದ್ಧಿಃ" ಎಂದರೆ ಮನಸ್ಸಿಗೆ ಬಂದ ಸಂಕಲ್ಪ ಹಾಗೂ ವಿಕಲ್ಪಗಳನ್ನು ವಿಂಗಡಿಸಿ ಒಂದು ನಿಶ್ಚಯವಾದ ತೀರ್ಮಾನಕ್ಕೆ ಬರುವುದೇ ಬುದ್ಧಿಯ ಕೆಲಸ. ನಂತರದಲ್ಲಿ ಅಹಂಕಾರದ ಬಗ್ಗೆ "ಅಹಂ ಭಾವಾತ್ಮಕೋ ಅಹಂಕಾರಃ" ಎಂದರೆ ಈ ನಿಶ್ಚಯವಾದ ಕೆಲಸವನ್ನು ಮಾಡುವವನು "ನಾನು" ಎಂಬ ಭಾವ ಬರುವುದು. ನಾಲ್ಕನೆಯದಾದ ಚಿತ್ತದ ಬಗ್ಗೆ "ಧಾರಣಾತ್ಮಕಂ ಚಿತ್ತಂ" ಎಂದರೆ ಧಾರಣೆಯಾಗಿ ನಿಲ್ಲುವ ಭಾವ. ಅರಿವೇ ಒಬ್ಬರ ಸ್ವರೂಪ ಎಂಬುದೇ ಚಿತ್ತದಲ್ಲಿರುತ್ತದೆ. ಚೈತನ್ಯದ ಪ್ರತಿಬಿಂಬವನ್ನು ಹೊಂದಿ ಅದು 'ಚಿತ್' ಎಂದು ಎನಿಸಿಕೊಳ್ಳುವ ಮನಸ್ಸಿನ ಸ್ಥಿತಿಗೆ ಚಿತ್ತ ಎನ್ನುವುದು. ಆದ್ದರಿಂದ ಎಲ್ಲರ ಜೀವನದಲ್ಲಿ ಅಂತಃಕರಣದ ಪಾತ್ರ ಅತಿ ಮುಖ್ಯವಾದುದು.

**(ಮುಂದಿನ ಪುಟಕ್ಕೆ)**

## ಅಂತರಂಗದ ಅನ್ವೇಷಣೆ

### ಶರೀರತ್ರಯ (ಮುಂದುವರೆದುದು)

ಐದು ಮುಖ್ಯವಾದ ಪ್ರಾಣವಾಯುಗಳೇ ಪ್ರಾಣವಾಯು, ಅಪಾನವಾಯು, ವ್ಯಾನವಾಯು, ಉದಾನವಾಯು, ಹಾಗೂ ಸಮಾನವಾಯು. ಈ ಪಂಚಪ್ರಾಣಗಳು ನಮ್ಮ ದೇಹದಲ್ಲಿದ್ದು ವಿವಿಧ ಕಾರ್ಯಗಳನ್ನು ಮಾಡುತ್ತಿವೆ. ಮೊದಲಿಗೆ ಪ್ರಾಣವಾಯುವು ಮುಖ ಮತ್ತು ಮೂಗುಗಳ ಮಧ್ಯೆ, ಹೃದಯ, ನಾಭಿಮಂಡಲ ಹಾಗೂ ಪಾದಾಂಗುಷ್ಠಗಳಲ್ಲಿ ಇರುತ್ತದೆ. ಶರೀರದಲ್ಲಿ ನಿಶ್ವಾಸ ಹಾಗೂ ಉಚ್ಛ್ವಾಸಗಳು ಉಂಟಾಗುವಂತೆ ಮಾಡುವುದೇ ಪ್ರಾಣದ ಪ್ರಧಾನ ಕಾರ್ಯ. ಎರಡನೆಯದಾದ ಅಪಾನವಾಯುವಿನ ಸ್ಥಾನಗಳು ಗುದ, ಲಿಂಗ, ತೊಡೆ ಹಾಗೂ ಮಂಡಿಗಳು. ಮಲ ಹಾಗೂ ಮೂತ್ರಗಳ ವಿಸರ್ಜನೆಯು ಅಪಾನವಾಯುವಿನ ಕಾರ್ಯ. ಹಾಗೆಯೇ ಇದು ಅನ್ನವು ಜೀರ್ಣಿಸುವಂತೆ ಮಾಡುತ್ತದೆ. ಮೂರನೆಯ ವ್ಯಾನವಾಯುವು ಎಲ್ಲ ಅಂಗಗಳಲ್ಲೂ ಹಾಗೂ ಎಲ್ಲ ಕಾಲಗಳಲ್ಲಿಯೂ ವ್ಯಾಪಿಸಿರುತ್ತದೆ. ಇದು ಪ್ರಾಣ ಮತ್ತು ಅಪಾನದ ಕಾರ್ಯಗಳಲ್ಲಿ ಸಹಕರಿಸುತ್ತದೆ. ಹಿಡಿದುಕೊಳ್ಳುವುದು ಮತ್ತು ಬಿಡುವುದು ವ್ಯಾನದ ಕಾರ್ಯ. ವ್ಯಾಧಿಪ್ರಕೋಪ ಮತ್ತು ಮರಣಗಳೂ ಸಹ ಇದರಿಂದಲೇ ಆಗುತ್ತವೆ. ನಾಲ್ಕನೆಯದಾದ ಉದಾನವಾಯುವು ಶರೀರದ ಎಲ್ಲ ಸಂಧಿಗಳಲ್ಲಿಯೂ ಮತ್ತು ಹಸ್ತಪಾದಗಳಲ್ಲಿಯೂ ವ್ಯಾಪಾರ ಮಾಡುತ್ತದೆ. ಉದಾನವು ಶರೀರವನ್ನು ಮೇಲಕ್ಕೆತ್ತುತ್ತದೆ. ಮಾತನಾಡುವ ಸಾರ್ಥ್ಯವೂ ಉದಾನವಾಯು-ವಿನಿಂದುಂಟಾಗುತ್ತದೆ. ಶರೀರದಲ್ಲಿ ಕಾಮೋದ್ರೇಕವುಂಟಾಗಲು ಇದು ಕಾರಣವಾಗುತ್ತದೆ. ಐದನೆಯದಾದ ಸಮಾನವಾಯುವು ಎಲ್ಲ ಅವಯವಗಳನ್ನೂ ವ್ಯಾಪಿಸಿಕೊಂಡಿರುತ್ತದೆ. ಸಮಾನವಾಯುವಿನ ಮೂಲಕ ತಿಂದದ್ದು ಹಾಗೂ ಕುಡಿದದ್ದು ರಸರೂಪದಲ್ಲಿ ಶರೀರದ ಎಲ್ಲ ಭಾಗಗಳಿಗೂ ಹೋಗುತ್ತದೆ. ಈ ಐದು ಪ್ರಧಾನವಾಯುಗಳಿಗೆ ಸಹಾಯಕಾರಿಯಾಗಿ ಇನ್ನೂ ಐದು ಉಪವಾಯುಗಳಿವೆ. ಆ ಐದು ಉಪವಾಯುಗಳೇ ನಾಗ (ಇದು ತೇಗು ಮತ್ತು ವಾಂತಿಗಳನ್ನು ಮಾಡಿಸುತ್ತದೆ), ಕೂರ್ಮ (ಇದು ರೆಪ್ಪೆ ಬಡಿಯುವಂತೆ ಮಾಡುತ್ತದೆ), ಕೃಕರ (ಇದು ಹಸಿವು ಬಾಯಾರಿಕೆಗಳಿಗೆ ಕಾರಣ), ದೇವದತ್ತ (ನಿದ್ರೆ ಹಾಗೂ ಆಕಳಿಕೆ ಉಂಟು ಮಾಡುವುದು) ಹಾಗೂ ಧನಂಜಯ (ಇದು ಮೃತ ಶರೀರದಲ್ಲಿ ಉಳಿದುಕೊಂಡು ಶರೀರದ ಊದುವಿಕೆಯನ್ನು ಉಂಟುಮಾಡುವುದು). ಪಂಚಪ್ರಾಣಗಳು ಹಾಗೂ ಪಂಚ ಉಪಪ್ರಾಣಗಳೂ ಸೇರಿ ಶರೀರದಲ್ಲಿನ ಕ್ರಿಯೆಗಳಿಗೆ ಹಾಗೂ ಆರೋಗ್ಯಕ್ಕೆ ಕಾರಣವಾಗಿವೆ.

ಸೂಕ್ಷ್ಮ ಶರೀರದ ಮುಂದಿನ ತತ್ವಗಳೇ ಪ್ರಪಂಚದ ಜ್ಞಾನವನ್ನು ಪಡೆಯುವುದಕ್ಕೆ ಮಾಧ್ಯಮಗಳಾದ ಶ್ರೋತ್ರ, ತ್ವಕ್, ನೇತ್ರ, ಜಿಹ್ವೆ ಮತ್ತು ಘ್ರಾಣ. ಸ್ಥೂಲ ಶರೀರದಲ್ಲಿ ಈ ಐದು ಜ್ಞಾನ ಮಾಧ್ಯಮಗಳಿಗೆ ಸರಿಸಮಾನಾದ ಅಂಗಗಳೇ ಕ್ರಮವಾಗಿ ಕಿವಿಗಳು. ಚರ್ಮ, ಕಣ್ಣು, ನಾಲಗೆ ಹಾಗೂ ಮೂಗು. ಹಾಗೆಯೇ ಈ ಜ್ಞಾನದ ಮಾರ್ಗಗಳೇ ಕೇಳುವುದು, ಸ್ಪರ್ಶಿಸುವುದು, ನೋಡುವುದು, ರುಚಿಯನ್ನು ಆಸ್ವಾದಿಸುವುದು ಹಾಗೂ ಮೂಸಿ ನೋಡುವುದು. ಇನ್ನೊಂದು ಮುಖ್ಯವಾದ ಸಂಗತಿಯೆಂದರೆ ವಸ್ತುಗಳ ಜ್ಞಾನದ ವಿಷಯವನ್ನು ಅನುಭವಿಸುವ ಮನಸ್ಸು ಒಂದೇ ಆಗಿದೆ. ಅಂದರೆ ಒಮ್ಮೆಗೆ ಮನಸ್ಸು ಒಂದು ಸಮಯಕ್ಕೆ ಒಂದು ಜ್ಞಾನೇಂದ್ರಿಯ ಮಾರ್ಗದಲ್ಲಿ ಮಾತ್ರವೇ ಪ್ರವಹಿಸಬಲ್ಲುದು. ಆದ್ದರಿಂದ ನಾವು ಏನನ್ನಾದರೂ ಗಮನವಿಟ್ಟು ನೋಡುತ್ತಿದ್ದರೆ ಆ ಸಮಯದಲ್ಲೇ ಗಮನವಿಟ್ಟು ಕೇಳುವುದಕ್ಕೆ ಆಗುವುದಿಲ್ಲ. ನಿಜಕ್ಕೂ ಒಂದೇ ಸಮಯಕ್ಕೆ ಅನೇಕ ಜ್ಞಾನೇಂದ್ರಿಯಗಳ ಮೂಲಕ ಗಮನವಿಟ್ಟು ಕೆಲಸ ಮಾಡಲು ಆಗುವುದಿಲ್ಲ. ಮನಸ್ಸು ತನ್ನ ಸ್ಥಾನವನ್ನು ಒಂದು ಇಂದ್ರಿಯದಿಂದ ಮತ್ತೊಂದಕ್ಕೆ ಬಹಳ ಬೇಗ ಬದಲಾಯಿಸುವುದರಿಂದ ಇದು ಮೇಲ್ನೋಟಕ್ಕೆ ಸಾಮಾನ್ಯವಾಗಿ ಗೊತ್ತಾಗುವುದಿಲ್ಲ. ಈ ಸತ್ಯಾಂಶವು ಆಧುನಿಕ ವಿಜ್ಞಾನದ ಸಂಶೋಧನೆಗಳಿಂದಲೂ ನಿರ್ಧಾರಿತವಾಗಿದೆ.

ಕೊನೆಯ ಗುಂಪಾದ ಐದು ಕರ್ಮೇಂದ್ರಿಯಗಳೇ ವಾಕ್, ಪಾಣಿ, ಪಾದ, ಪಾಯು ಹಾಗೂ ಉಪಸ್ಥ. ಇವುಗಳ ಆಧಿಭೌತಿಕ ಕ್ರಿಯೆಗಳೇ ಕ್ರಮವಾಗಿ ಮಾತನಾಡುವುದು, ಕೈಗಳಿಂದ ತೆಗೆದುಕೊಳ್ಳುವುದು ಹಾಗೂ ಕೊಡುವುದು, ಕಾಲಿನಿಂದ ನಡೆಯುವುದು, ಪಾಯುವಿನಿಂದ ಮಲವಿಸರ್ಜನೆ ಮತ್ತು ಉಪಸ್ಥದಿಂದ ಮೂತ್ರ, ಶುಕ್ಲ ಹಾಗೂ ಶೋಣಿತಗಳ ವಿಸರ್ಜನೆ. ಈ ಕರ್ಮೇಂದ್ರಿಯಗಳ ಹಿಂದೆಯೂ ಆಧಿದೈವಿಕ ಶಕ್ತಿಗಳಿವೆ. ಹಾಗೆಯೇ ಹಿಂದೆ ನೋಡಿದಂತೆ ಪಂಚ ಜ್ಞಾನೇಂದ್ರಿಯಗಳ ಮತ್ತು ಅಂತಃಕರಣದ ನಾಲ್ಕು ಅಂಗಗಳ ಹಿಂದೆಯೂ ಆಧಿದೈವಿಕ ಶಕ್ತಿಗಳಿವೆ.

(ಮುಂದಿನ ಪುಟಕ್ಕೆ)

# ಅಂತರಂಗದ ಅನ್ವೇಷಣೆ

## ಶರೀರತ್ರಯ (ಮುಂದುವರೆದುದು)

ಆದ್ದರಿಂದಲೇ ಅನ್ವೇಷಣೆಯಲ್ಲಿ ಮೂರೂ ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕು. ಈ ಸೂಕ್ಷ್ಮ ಶರೀರವನ್ನೇ ಲಿಂಗಶರೀರವೆಂದೂ ಕರೆಯುತ್ತಾರೆ. ಆದ್ದರಿಂದ ಈ ಸೂಕ್ಷ್ಮ ಶರೀರ ಅಥವಾ ಲಿಂಗಶರೀರದಲ್ಲಿಯೇ ವ್ಯಕ್ತಿ ಜೀವನದಲ್ಲಿ ಮಾಡುವ ಎಲ್ಲಾ ಕ್ರಿಯೆಗಳ ಫಲಗಳು ಸೂಕ್ಷ್ಮ ರೂಪದಲ್ಲಿರುತ್ತವೆ. ಜೀವಾತ್ಮನು ಸ್ಥೂಲ ಹಾಗೂ ಸೂಕ್ಷ್ಮ ಶರೀರದಿಂದ ಬೇರೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆದರೆ ಜೀವಾತ್ಮನು ತನ್ನ ಸೂಕ್ಷ್ಮ ಹಾಗೂ ಸ್ಥೂಲ ದೇಹಗಳ ಮೂಲಕ ಜೀವನ ನಡೆಸುತ್ತಾನೆ.

**<u>ಕಾರಣ ಶರೀರ.</u>**

ಸ್ಥೂಲ ಮತ್ತು ಸೂಕ್ಷ್ಮ ಶರೀರದ ನಂತರವೇ ಮೂರನೆಯದಾದ ಕಾರಣ ಶರೀರ. ಇದು ಕಣ್ಣಿಗೆ ಗೋಚರವಾಗುವುದಿಲ್ಲ. ಜೀವಾತ್ಮನು ತಾನು ಯಾರು ? ಎಂಬ ಪ್ರಶ್ನೆಗೆ ಉತ್ತರವನ್ನು ಅನ್ವೇಷಣೆ ಮಾಡಬೇಕು. ಈ ಪ್ರಶ್ನೆಯ ಜೊತೆಗೆ ತನ್ನ ಹುಟ್ಟಿಗೆ (ಜನ್ಮಕ್ಕೆ) ಕಾರಣವೇನು ? ಎಂಬ ಪ್ರಶ್ನೆಯು ಬರುವುದು ಸಹಜ. ಈ ಪ್ರಶ್ನೆಗೆ ಒಂದು ರೀತಿಯ ಉತ್ತರವೆಂದರೆ ಹಿಂದೆ ಮಾಡಿದ ಕರ್ಮಫಲವೂ ಹಾಗೂ ಮಾಡಬೇಕಾದ ಕೆಲಸಗಳೂ ಉಳಿದಿತ್ತೆಂಬುದೂ ಇರಬಹುದು. ಇನ್ನೊಂದು ರೀತಿಯಲ್ಲಿ ನೋಡಿದರೆ ತಾನು ಯಾರು ? ಎಂಬ ಪ್ರಶ್ನೆಗೆ ಪೂರ್ಣವಾದ ಉತ್ತರವಾದ ಪೂರ್ಣಜ್ಞಾನವಿಲ್ಲದೆ ಅಜ್ಞಾನದ ಕಾರಣವೂ ಇದೆ. ಏಕೆಂದರೆ ತಾನು ಯಾರು ಎಂಬ ಪ್ರಶ್ನೆಗೆ ಪೂರ್ಣವಾಗಿ ಉತ್ತರವನ್ನು ಪೂರ್ಣ ಜ್ಞಾನದದಂತೆ ಪಡೆಯುವ ತನಕ ಜೀವಾತ್ಮನು ಜನ್ಮಗಳನ್ನು ಹೊಂದುತ್ತಾನೆ. ಆದ್ದರಿಂದ ಅಜ್ಞಾನವೇ ಜನ್ಮಕ್ಕೆ ಕಾರಣವಾದ್ದರಿಂದ ಅಜ್ಞಾನವೇ ಕಾರಣ ಶರೀರ.

**ಸಾರಾಂಶ**

ಜೀವಾತ್ಮನು ಕಾರಣ, ಸೂಕ್ಷ್ಮ ಹಾಗೂ ಸ್ಥೂಲ ಶರೀರಗಳಿಂದ ಬೇರೆಯಾದವನು. ಜೀವಾತ್ಮನು ಈ ಶರೀರ ತ್ರಯಗಳ ಒಳಗಿದ್ದು ಅವುಗಳಲ್ಲಿ ತನ್ನತನವನ್ನು ಆರೋಪಿಸಿ ಜೀವನ ನಡೆಸುತ್ತಾನೆ. ಮುಖ್ಯವಾಗಿ ತಾನು ಯಾರೆಂಬ ಅನ್ವೇಷಣೆ ಮಾಡಬೇಕಾದರೆ ಈ ಮೂರೂ ಶರೀರಗಳ ಬಗ್ಗೆಯೂ ಅನ್ವೇಷಣೆಯನ್ನು ಮಾಡಬೇಕು. ಅನ್ವೇಷಣೆಯನ್ನು ಮಾಡುವುದೇ ಮನುಷ್ಯನ ಲಕ್ಷಣವಾದ್ದರಿಂದ ಬಹಿರಂಗ ಹಾಗೂ ಅಂತರಂಗ ಕ್ಷೇತ್ರಗಲ್ಲಿ ನಾವೆಲ್ಲರೂ ಅನ್ವೇಷಣೆಯನ್ನೇ ಸಾಧನೆಯನ್ನಾಗಿಸಲು ಎಲ್ಲೆಡೆಯಲ್ಲಿರುವ ವಿಶ್ವಾತ್ಮ ಶಕ್ತಿಯಾದ ಪರಮಾತ್ಮನನ್ನು ಪ್ರಾರ್ಥಿಸೋಣ.

**ಗ್ರಂಥ ಸೂಚಿ.**


೧. ವೇದಾಂತ ಪ್ರಬೋಧ , ಸ್ವಾಮೀ ಪರಮಾನಂದ ಭಾರತೀ , ಜ್ಞಾನ ಸಂವರ್ಧಿನೀ ಪ್ರತಿಷ್ಠಾನಂ , ಬೆಂಗಳೂರು (೨೦೧೪)

೨. ಪಂಚೋಪಚಾರ ಪೂಜೆ , ಶ್ರೀ ಶ್ರೀ ರಂಗಪ್ರಿಯ, ಶ್ರೀ ಶ್ರೀ ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ ಬೆಂಗಳೂರು

೩. ಭಾರತೀಯ ವಿಚಾರ ಧಾರಾ , ಕುಳಮರ್ವ ವೆಂಕಪ್ಪ ಭಟ್ಟ , ಕೈತಾಂಜೆ ಪ್ರಕಾಶನ , ದಕ್ಷಿಣ ಕನ್ನಡ (೨೦೧೦)

೪. ಅಷ್ಟಾಂಗ ಯೋಗ , ಎಸ್ ವಿ ಚಾಮು , ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ , ಬೆಂಗಳೂರು (೨೦೦೫) ■

ಕವನ

# ನನಗೆ ಶಿವರಾತ್ರಿಯೆಂದರೆ..



*ಪ್ರಕಾಶ್ ಕಡಮೆ*

**ಲೇಖಕರ ಪರಿಚಯ:**

ಜನನ: 1958, ಗೋಕರ್ಣ ಸನಿಹದ ಕಡಮೆ. ಗಾಣದೆತ್ತು ಮತ್ತು ತೆಂಗಿನ ಮರ, ಆ ಹುಡುಗಿ, ಅಮ್ಮನಿಗೊಂದು ಕವಿತೆ ಇವು ಮೂರು ಕವನ ಸಂಕಲನಗಳು. ಇನ್ನೊಂದು ಪ್ರೇಮ ಕವನ ಸಂಕಲನ ಮತ್ತು ಅರವತ್ತು ಇತರ ಲೇಖಕರ ಪುಸ್ತಕಗಳ ಪರಿಚಯ/ವಿಮರ್ಶೆಯುಳ್ಳ ಸಂಗ್ರಹ ಸಧ್ಯದಲ್ಲೇ ಹೊರಬರಲಿದೆ. ನಾಗಸುಧೆ ಜಗಲಿಯ ಮೂಲಕ ಅನೇಕ ಸಾಹಿತ್ಯಿಕ ಸಂಘಟನೆ, ಸಧ್ಯ ಹುಬ್ಬಳ್ಳಿಯಲ್ಲಿ ವಾಸ, ಅಮ್ಮನಿಗೊಂದು ಕವಿತೆ ಸಂಕಲನಕ್ಕೆ ಡಾ. ಡಿ ಎಸ್ ಕರ್ಕಿ ಕಾವ್ಯ ಪ್ರಶಸ್ತಿ ದೊರಕಿದೆ. ದಾಂಪತ್ಯ ನಿಷ್ಠೆ - ಪರಿಕಲ್ಪನೆ ಬದಲಾಗುತ್ತಿದೆಯೇ? ಕೃತಿಯನ್ನು ಪತ್ನಿ ಸುನಂದಾ ಜೊತೆ ಸೇರಿ ಸಂಪಾದಿಸಿದ್ದಾರೆ.

ನನಗೆ ಶಿವರಾತ್ರಿಯೆಂದರೆ
ಎಷ್ಟೋ ನಿರ್ಗತಿಕರಿಗೆ ಆಶ್ರಯ ನೀಡುವ
ಗಟಾರದಂಚಿನ ಯಾರದೋ ಸಂಚಿನ
ಇಕ್ಕೆಲಗಳ ಸಮುದ್ರದ ಸಮದಾರಿ

ನನಗೆ ಶಿವರಾತ್ರಿಯೆಂದರೆ
ಬಡವ ಬಲ್ಲಿದ ಅನ್ನದೇ ಹಸಿದ ಹೊಟ್ಟೆಗೆ
ತಂಪೆರೆಯುವ ಅಮೃತಾನ್ನ ಪ್ರಸಾದ ಭೋಜನದ
ಸರತಿಯ ಸಾಲಿನೊಳಗಿನ ನಗುಮೊಗದ ಆದರಾಥಿತ್ಯ

ನನಗೆ ಶಿವರಾತ್ರಿಯೆಂದರೆ
ಕೋಟಿ ತೀರ್ಥದ ಮೇಲೆ
ದೋಣಿಯಲಿ ತೇಲುವ ಪತಾಕೆಗಳ ಸಾಲು
ತೇರ ಬೀದಿಯೊಳಗಣ ಗಾಂಭೀರ್ಯದಲಿ
ಸಂಚರಿಸುವ ಮಹಾರಥ
ರಥದ ಹಗ್ಗ ಹಿಡಿದು ಎಳೆವ ಸಹಸ್ರ
ಸಹಸ್ರ ಭಕ್ತರ ಹರ ಹರ ಮಹದೇವ್

ನನಗೆ ಶಿವರಾತ್ರಿಯೆಂದರೆ
ಹೂಮಾರಲು ಅಜ್ಜಿಗೆ ಸಹಕರಿಸುವ
ಶಾಲಾಬಾಲಕರ ಪಟ್ಟಿಪುಸ್ತಕದ ಹಾಳೆಯ ಪರಿಮಳದ ಪ್ರೀತಿ
ಪುಟು ಪುಟು ಓಡಿ ಭಕ್ತರ ಸಾಲಿಗೆ ಹೂ ಮುಟ್ಟಿಸುವ
ಧಾವಂತ.

ಜಾಜಿ ಸೇವಂತಿಗೆ ಗುಲಾಬಿ ತುಳಸಿ ಪಚ್ಚೆ ಕದಿರು ಪತ್ರೆ
ಭಕ್ತ ಹೂಬುಟ್ಟಿಗೆ ಕೈಚಾಚಿದರೆ
ಬಾಲಕರ ಮಿನುಗುಗಣ್ಣಲ್ಲೇ ಶಿವಲಿಂಗ
ನನಗೆ ಶಿವರಾತ್ರಿಯೆಂದರೆ
ಮಹಾಬಲೇಶ್ವರನ ಗುಡಿಯ ಪಕ್ಕದಲ್ಲಿ
ಬಿಳೀ ಮಲ್ಲಿಗೆ ಮಾರುವ ರೆಹಮಾನನ ನಿರೀಕ್ಷೆಯ ನೋಟ
ಬುಟ್ಟಿ ತುಂಬಾ ಮಾಲೆ ತುಂಡುತುಂಡಾಗಿ ಭಕ್ತರ
ಬೊಗಸೆ ಸೇರಿ ಶಿವಲಿಂಕ್ಕೇರುವುದು.
ರಾಮ ತಂದ ಹೂವೋ ರಹೀಮ ಕಟ್ಟಿದ ಮಾಲೆಯೋ
ಶಿವನೆಂದೂ ಯೋಚಿಸನು.
ಗೋಕರ್ಣ ಕಟ್ಟಿದ ಧರ್ಮದ ಹೂಬುಟ್ಟಿಯಲಿ
ಪರಿಶುದ್ಧ ಮಲ್ಲಿಗೆ.

ನನಗೆ ಶಿವರಾತ್ರಿಯೆಂದರೆ
ಕರಾವಳಿಯ ಬಿಸಿಲ ಬೇಗೆಗೆ
ಬಳಲಿ ಬೆಂಡಾದ ಅಮಾಯಕರ
ಅನುದಿನದ ಪಾಡು
ಶಿವಭಕ್ತರ ದಂಡು ರಥಬೀದಿ ಸುತ್ತುತ್ತ
ದೊಡ್ಡ ಮನಸ್ಸು ಮಾಡಿ ನೀಡಿದ ಧಾನದಲಿ
ಇವರ ಹಾಸು ಬಟ್ಟೆಯ ಕಪಾಲಕ್ಕೆ ಬಿದ್ದರೆ ಅಕ್ಕಿ
ಬೇಲೆಯಲ್ಲೇ ಒಲೆ ಹೂಡಿ ಅನ್ನ ಬೇಯಿಸಿದ
ಬಿಸಿ ಹೊಗೆಗೆ ಹಾರುತ್ತಿದೆ ಕಡಲ ಹಕ್ಕಿ

(ಮುಂದಿನ ಪುಟಕ್ಕೆ)


# ಕವನ

## ನನಗೆ ಶಿವರಾತ್ರಿಯೆಂದರೆ... (ಮುಂದುವರೆದುದು)

ನನಗೆ ಶಿವರಾತ್ರಿಯೆಂದರೆ
ಬಾಲ್ಯವನ್ನು ನೆನಪಿಸಿ ಕಾಡುವ
ಮುಂಬೈ ಮಿಠಾಯಿಯ ಅದೇ ಗುಲಾಬಿ ಬಣ್ಣ
ಉದ್ದ ಕೋಲಿಗೆ ಸುತ್ತಿ ಮೇಲೇರಿ ಅರಳಿದ
ಹೂವಂಥ ಚೆಲುವು
ತೇರೆಳೆವ ಜನಸಂದಣಿಯೆಡೆ ನುಸುಳಿ ಓಡುವ ಮಿಠಾಯಿ
ಬಾಯಲ್ಲಿಟ್ಟರೆ ಕರಗಿ ಸಿಹಿ ಪಸರಿ
ನಾಲಿಗೆಗಂಟಿದ ಕೆಂಬಣ್ಣ ಮತ್ತೆ ಮತ್ತೆ
ನೋಡಿಕೊಳ್ಳಬೇಕು ಕನ್ನಡಿಯಲಿ

ನನಗೆ ಶಿವರಾತ್ರಿಯೆಂದರೆ
ಮಾಣೇಶ್ವರನ ಮಗ ಅಪ್ಪಿ ದಂಪತಿಗಳಸಕ್ಕರೆ
ಮಿಠಾಯಿಯಂಗಡಿ
ತಾಜಾ ಬೆಂಡು ಬತ್ತಾಸು ಜಿಲೇಬಿ ಘಮಘಮ
ಬೂಂದಿಲಾಡು
ಶಿವರಾತ್ರಿಗೆ ಎಂಟು ದಿನ ಮುಂಚೇ
ಹಗಲಿರುಳೆನ್ನದೇ ನಿದ್ದೆಗೆಟ್ಟು
ದುಡಿವ ಕೈಗಳ ಹಿಂದಿನ ಶ್ರಮ
ನ್ಯಾಯದ ತಕ್ಕಡಿಯಲಿ ತೂಗುವ ಸಿಹಿ

ನನಗೆ ಶಿವರಾತ್ರಿಯೆಂದರೆ
ಆನುದಾದಾನ ಅಪ್ಪಟ ಮೆಲುನಗೆ
ಹೆಗಲ ಬಳಸಿ ತೋರುವ ಆಪ್ತ ಪಿಸುನುಡಿ
ರಥಬೀದಿಯ ಜನ ಒಂದರೆಕ್ಷಣ ರಥ ಮರೆತು
ಮುತ್ತುವ ಅವನ ಸರಳ ಸಹಜ ಕನ್ನಡತ್ವ ! ■



ಲೇಖನ

# ಬೇಂದ್ರೆ ಕಾವ್ಯದಲ್ಲಿ ಒಲವಿನ ಚಿತ್ತಾರ



*ಅಹೀಶ್ ಭಾರದ್ವಾಜ*

"

**ವಾದ ವಿವಾದಗಳ ಬಿಟ್ಟು ಸಂವಾದದ ಹಾದಿ ಹಿಡಿದರೆ ಹೃದಯಾಂತರಾಳಕ್ಕೆ ಇಳಿದು ವಿಸ್ತಾರವಾದ ಪ್ರೇಮದ ಜಗತ್ತನ್ನು ನೋಡಬಹುದು. ಕವನದ ಈ ಸಾಲುಗಳಲ್ಲಿ ದಾಂಪತ್ಯದ ಸಾಮರಸ್ಯವನ್ನು ಬಣ್ಣಿಸಿರುವ ರೀತಿ ಅದ್ಭುತ.**

"

ಕನ್ನಡದ ನವೋದಯ ಕಾಲದ ಶ್ರೇಷ್ಠ ಕವಿಗಳಲ್ಲೊಬ್ಬರಾದ ವರಕವಿ ದ.ರಾ. ಬೇಂದ್ರೆಯವರು ಅಂಬಿಕಾತನಯದತ್ತ ಎಂಬ ಅಂಕಿತನಾಮದಿಂದ ಕನ್ನಡ ಸಾಹಿತ್ಯಲೋಕಕ್ಕೆ ಬಹಳ ಉತ್ಕೃಷ್ಟವಾದ ಕಾವ್ಯಶೈಲಿಯನ್ನು ಕೊಟ್ಟಿದ್ದಾರೆ. ಬದುಕಿನ ಸುತ್ತ ಹರಿದಾಡುವುದು ಬೇಂದ್ರೆಯವರ ಕಾವ್ಯದ ವೈಶಿಷ್ಟ್ಯ. ಬೇಂದ್ರೆಯವರ ಕವನ ಸಂಕಲನಗಳನ್ನು ಅವಲೋಕಿಸಿದಾಗ ದೇಸಿ ಸೊಗಡಿನ ಆಡುಮಾತಿನ ಲಯ, ಭಾಷೆ, ಛಂದಸ್ಸುಗಳ ಪ್ರಯೋಗ, ಆಧ್ಯಾತ್ಮದ ಸೂಕ್ಷ್ಮತೆ ಹಾಗು ಬದುಕಿನ ನೋವು-ನಲಿವುಗಳು, ಕಷ್ಟ-ಕಾರ್ಪಣ್ಯಗಳು, ಸರಸ-ವಿರಸಗಳು, ಸೌಂದರ್ಯ-ವನ್ನು ಅನುಭವಿಸಿ, ಅದನ್ನು ಅಷ್ಟೇ ವಿಸ್ತಾರವಾಗಿ ತಮ್ಮ ಕವನಗಳಲ್ಲಿ ವ್ಯಕ್ತವಾಗಿಸುವ ಕಾವ್ಯಶೈಲಿ ಅವರ ಕಾವ್ಯದ ಪ್ರಮುಖ ನೆಲೆಯಾಗಿದೆ.

ಬೇಂದ್ರೆಯವರ ಕವನಗಳಲ್ಲಿ ಕಾಣುವ ಭಾಷಾ ವೈವಿಧ್ಯತೆ, ಅವರ ಅಗಾಧ ಭಾಷಾ ಸಂಪತ್ತನ್ನು ಎತ್ತಿ ತೋರಿಸುತ್ತದೆ. ದೇಸಿ ಸೊಗಡಿನ ಆಡುಮಾತಿನ ಕನ್ನಡ, ಅಚ್ಚ ಕನ್ನಡ, ಜನಪದ ಶೈಲಿಯ ಕನ್ನಡ, ಸಂಸ್ಕೃತ ಮೂಲದ, ಮರಾಠಿ ಮೂಲದ ಪದಪ್ರಯೋಗವನ್ನು ಯಥೇಚ್ಛವಾಗಿ ಬಳಸುವ ಶೈಲಿಯಿಂದಲೇ ಅವರೊಬ್ಬ ಶ್ರೇಷ್ಠ ಶಬ್ದ ಗಾರುಡಿಗ ಎಂಬ ಕೀರ್ತಿಗೆ ಪಾತ್ರರಾದರು. ಕವನಗಳಲ್ಲಿ ಬಳಸುವ ವಿಶೇಷ ಪದಗಳನ್ನು ನೋಡಿದ ಕೂಡಲೇ ಇದು ಬೇಂದ್ರೆಯವರ ಕವನವೇ ಇರಬೇಕು ಅನ್ನುವಷ್ಟು ವಿಶ್ವಾಸ ಕಾವ್ಯಾಸಕ್ತರಲ್ಲಿ ಕಾಣುತ್ತದೆ. ಕೆಲವು ಪದಗಳ ಬಳಕೆಯಂತೂ ಬೇಂದ್ರೆಯವರ ಕವನಗಳನ್ನು ಬಿಟ್ಟರೆ ಬೇರೆ ಕಡೆ ಉಪಯೋಗಿಸಿರುವುದನ್ನು ಕಾಣುವುದು ಬಹಳ ವಿರಳ.

ಶಿವಶರಣರ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳಲ್ಲಿ ಕಂಡು ಬರುವ ದೈವತ್ವದ ಅನುಭಾವ ಒಂದು - ತರಹವಾದರೆ, ತಮ್ಮ ಅರಿವಿನಿಂದ, ಬದುಕಿನ ಜೀವಂತಿಕೆಯ ಕ್ಷಣಗಳಲ್ಲಿನ ಮತ್ತು ಆಚರಣೆಯಿಂದ ಪಡೆದ ಅನುಭವವನ್ನು ಅನುಭಾವ ಕಾವ್ಯಗಳ ರೂಪದಲ್ಲಿ ಅಭಿವ್ಯಕ್ತಿಸುವುದು ಬೇಂದ್ರೆಯವರ ವೈಶಿಷ್ಟ್ಯವಾಗಿದೆ. ಜೊತೆಗೆ ಅವರ ಅಭಿವ್ಯಕ್ತಿ ಕಾಲ ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ಯಾವುದೇ ಚೌಕಟ್ಟಿನ ಪರಿಮಿತಿಗೆ ಒಳಪಡದೆ ಕನ್ನಡಕ್ಕೆ ಶ್ರೀಮಂತ ಕಾವ್ಯರಾಶಿಯನ್ನೇ ಕೊಟ್ಟಿದ್ದಾರೆ. ಬದುಕಿಗೆ ಬಹಳ ಹತ್ತಿರವಾಗಿ ಮಿಡಿಯುವ ಕವಿಯಾಗಿ-ದ್ದರಿಂದಲೇ ಗಂಡು ಹೆಣ್ಣಿನ ಒಲವು, ಪ್ರೀತಿ, ವಿರಸ, ಪ್ರಣಯ, ಅನುರಾಗ, ಸ್ನೇಹ, ಗೆಳೆತನ, ಭಕ್ತಿಯನ್ನೊಳಗೊಂಡ ಅನುರಾಗ ಗೀತೆಗಳು, ಪ್ರಣಯ ಗೀತೆಗಳು, ವಿರಹ ಗೀತೆಗಳು, ಕೌಟುಂಬಿಕ ಗೀತೆಗಳು, ಅನುಭಾವ ಗೀತೆಗಳು ಹೀಗೆ ಒಲವಿನ ಕವನಗಳ ಭಂಡಾರವನ್ನು ಬೇಂದ್ರೆಯವರಷ್ಟು ವಿಸ್ತಾರವಾಗಿ ಕನ್ನಡಕಾವ್ಯ ಲೋಕದಲ್ಲಿ ಕಾಣುವುದು ವಿರಳ. ಒಲವು, ಪ್ರೀತಿ, ಪ್ರಣಯ, ಅನುರಾಗ, ಈ ಶಬ್ದಗಳು ಮೇಲ್ನೋಟಕ್ಕೆ ಒಂದೇ ಎನಿಸಿದರೂ ಒಳರ್ಥದಲ್ಲಿ ಭಿನ್ನ. ಬೇಂದ್ರೆಯವರು ತಮ್ಮ ಕಾವ್ಯಗಳಲ್ಲಿ ಈ ಭಿನ್ನತೆಯನ್ನು ಬಹಳ ಚೆನ್ನಾಗಿ ಅನಾವರಣ-ಗೊಳಿಸುತ್ತಾರೆ. ಬಾಲ್ಯ, ತಾರುಣ್ಯ, ವೃದ್ಧಾಪ್ಯಗಳಲ್ಲಿ ಕಾಣಸಿಗುವ ಯಾವುದೇ ರೀತಿಯ ಒಲವಿರಲಿ, ನಮ್ಮನ್ನು ನಾವು ಅರಿತು, ನಮ್ಮ ಅಂತರಂಗದಲ್ಲಿ ಸಾಮರಸ್ಯವನ್ನು ಕಾಣಬೇಕೆಂಬುವ ಚಿಂತನೆ ಅವರ ಬಹುತೇಕ ಕಾವ್ಯಗಳಲ್ಲಿ ಕಾಣಸಿಗುತ್ತದೆ.

ಬೇಂದ್ರೆಯವರ ಮಾತಲ್ಲೇ ಹೇಳುವುದಾದರೆ, "ವಿಚಾರದಲ್ಲಿ ವಿವೇಕಕ್ಕೆ ಹೇಗೆ ಪ್ರಾಧಾನ್ಯವೋ ಹಾಗೆ ಪ್ರೀತಿಯಲ್ಲಿಯೂ ಒಂದು ಹೃದಯದ ವಿವೇಕ ಮೂಡಬೇಕಾಗುತ್ತದೆ. ಭವದ ಅನುಭವ, ಅಭಾವದ ಅನುಭಾವದಂತೆ ರುಚಿಕೆಟ್ಟ ಸಪ್ಪಗೆತನವಲ್ಲ. ವಿಚಾರ ಮಾಡುವಲ್ಲಿ ಅರಿವಿನ ಕೊರತೆಯಿದ್ದಲ್ಲಿ ವಿಚಾರವು ಹೇಗೆ ಸಪ್ಪೆಯೆನಿಸುವುದೋ ಹಾಗೆಯೇ ಪ್ರೀತಿಯಲ್ಲಿ ಹೃದಯದ ಅರಿವು ಕಾಣದಿರೆ ಆ ಪ್ರೀತಿಯು ಸಪ್ಪೆಯೆನಿಸುತ್ತದೆ.

**(ಮುಂದಿನ ಪುಟಕ್ಕೆ)**


# ಬೇಂದ್ರೆ ಕಾವ್ಯದಲ್ಲಿ ಒಲವಿನ ಚಿತ್ತಾರ

**(ಮುಂದುವರೆದುದು)**

ಒಲವು ಭಾವಾವೇಶ ಮತ್ತು ಬುದ್ಧಿಪೂರ್ವಕ-ವಾಗಿರಬಾರದು. ಒಲವು ಕೇವಲ ಭಾವಾವೇಶದಿಂದ ಕೂಡಿದ್ದರೆ ಅಲ್ಲಿ ಭಾವೋದ್ರೇಕ ಆಘಾತವಿದೆ. ಇದೇ ರೀತಿ ಒಲವು ಕೇವಲ ಬುದ್ಧಿಪೂರ್ವಕವಾಗಿದ್ದರೆ, ಕೆಲವು ಸಲ ದುರ್ಬುದ್ಧಿ ಪ್ರಧಾನವಾಗುವ ಸಂಭವವಿರುತ್ತದೆ. ಹಾಗಾಗಿ ಒಲವು ಯುಕ್ತ ಬುದ್ಧಿ ಮತ್ತು ಯುಕ್ತ ಭಾವನೆಯಿಂದ ಕೂಡಿರಬೇಕು."

ಬೇಂದ್ರೆಯವರ ಕವನಗಳು ಬದುಕಿನ ಸುತ್ತ ಹರಿದಾಡುತ್ತಾ ಕುಟುಂಬದ ಸುಸ್ಥಿತಿಗಳ ಬಗ್ಗೆ ಹೆಚ್ಚು ಮಹತ್ವವನ್ನು ಕೊಡುತ್ತವೆ. 'ನಾದಲೀಲೆ' ಕವನ ಸಂಕಲನದಲ್ಲಿನ 'ಮನದನ್ನೆ' ಕವನವು ಕೌಟುಂಬಿಕ ಗೀತೆಯ ಸಾಲಿಗೆ ಸೇರಿದ್ದು. ಗಂಡ ಹೆಂಡತಿಯರ ನಡುವಿನ ಸಾಮರಸ್ಯ ಪರಿಪೂರ್ಣ ದಾಂಪತ್ಯಕ್ಕೆ ಅತ್ಯಗತ್ಯ. ದಾಂಪತ್ಯದಲ್ಲಿ ಹುಟ್ಟದಿಹ ಸಾಮರಸ್ಯ ಇನ್ನೆಲ್ಲಿ ಹುಟ್ಟಬೇಕು? ಪತಿಪತ್ನಿಯರಲ್ಲಿ ಭಾವ ಸಂಶುದ್ಧಿಯಾಗದೇ ಪ್ರೇಮದ ಸೊಬಗು ನಿಚ್ಚಳವಾಗುವುದಿಲ್ಲ. ವಾದ ವಿವಾದಗಳ ಬಿಟ್ಟು ಸಂವಾದದ ಹಾದಿ ಹಿಡಿದರೆ ಹೃದಯಾಂತರಾಳಕ್ಕಿಳಿದು ವಿಸ್ತಾರವಾದ ಪ್ರೇಮದ ಜಗತ್ತನ್ನು ನೋಡಬಹುದು. ಕವನದ ಈ ಸಾಲುಗಳಲ್ಲಿ ದಾಂಪತ್ಯದ ಸಾಮರಸ್ಯವನ್ನು ಬಣ್ಣಿಸಿರುವ ರೀತಿ ಅದ್ಭುತ.

**"ವಾದಕ್ಕೆ ಪ್ರತಿವಾದ**
**ಸಾಕು ವಾದವಿವಾದ**
**ಜೀವ ಸಂವಾದಕ್ಕೆ ಹಸಿದು ಬಂದೆ**
**ನೀಡು ಸಿಪ್ಪೆಯ ಸುಲಿದು ತಿಳಿಲನೊಂದೆ**
**ಜೀವ ಜೀವಾಳದಲಿ ಹೃದಯಾಂತರಾಳದಲಿ**
**ಇಳಿದು ನೋಡು**
**ಬಗೆಯ ಬಾನ್ ಬಯಲನ್ನು**
**ಅಳೆದು ನೋಡು.**
**ಹಚ್ಚಿ ರೆಕ್ಕೆಗೆ ರೆಕ್ಕೆ ಹಾರಿ ನೋಡು**
**ಈಸಾಡು ತೇಲಾಡು ಮುಂದೋಡು ಮೇಲಾಡು**
**ಅಣಕ ಮೂದಲಿಕೆಯಲಿ ಕಟಕಬೇಡ**
**ಕೆನ್ನೀರ ಕೆಸರನ್ನು ಕಲಕಬೇಡ.**



ವರ್ಣಚಿತ್ರ : ರಾಮಪ್ಪ ಒಣರೊಟ್ಟಿ. ಹುಬ್ಬಳ್ಳಿ, ಕರ್ನಾಟಕ

ದಾಂಪತ್ಯದಲ್ಲಿ ಸುಖ ದುಃಖಗಳು ಇದ್ದೇ ಇರುತ್ತವೆ. ಅವುಗಳನ್ನು ಹೇಗೆ ಸರಿತೂಗಿಸಿಕೊಂಡು ಮುನ್ನಡೆಸಬೇಕು? ಏರುಪೇರುಗಳು ಸಹಜವೆ, ಯಾವುದೂ ಶಾಶ್ವತವಲ್ಲವೆಂಬುದನ್ನರಿತು ನಗುನಗುತ ಜೀವನ ಸಾಗಿಸುವುದು ಲೇಸೆಂದು 'ಗರಿ' ಕವನ ಸಂಕಲನದ 'ನನ್ನ ಕೈಯ ಹಿಡಿದಾಕೆ' ಕವನದ ಈ ಸಾಲುಗಳಲ್ಲಿ ಬಹಳ ಸೊಗಸಾಗಿ ಬಣ್ಣಿಸಿದ್ದಾರೆ.

**"ಹುಸಿನಗುತ ಬಂದೇವ ನಸುನಗುತ ಬಾಳೋಣ**
**ತುಸುನಗುತ ತೆರಳೋಣ**
**ಬಡ ನೂರು ವರುಷಾನ್ ಹರುಷಾದಿ ಕಳಿಯೋಣ**
**ಯಾಕಾರೆ ಕೆರಳೋಣ !"**

(ಮುಂದಿನ ಪುಟಕ್ಕೆ)

## ಲೇಖನ

### ಬೇಂದ್ರೆ ಕಾವ್ಯದಲ್ಲಿ ಒಲವಿನ ಚಿತ್ತಾರ (ಮುಂದುವರೆದುದು)

ಸಂಸಾರವೆಂದ ಮೇಲೆ ಸಂತತಿಯನ್ನು ಬೆಳಸಿಕೊಂಡು ಮಕ್ಕಳುಗಳ ಜೊತೆ ಕೂಡಿ ಬಾಳುವುದು ದಾಂಪತ್ಯದ ವೈಶಿಷ್ಟ್ಯ. ಸಂತತಿಯ ಚಿರಂತನ ತತ್ವವನ್ನು ಮನಸ್ಸಿಗೆ ಮುಟ್ಟುವ ರೀತಿಯಲ್ಲಿ "ಸಖೀಗೀತ" ಕವನ ಸಂಕಲನದ ಚಿರಂತನ ಕವನದಲ್ಲಿ ಹೇಳಿದ್ದಾರೆ. ಒಂದು ಜೀವ ವೈಜ್ಞಾನಿಕವಾಗಿ ಹೇಗೆ ಸೃಷ್ಟಿಯನ್ನು ಪಡೆಯುತ್ತದೆಂದು ವರ್ಣಿಸಿದ್ದಾರೆ. ಕವನದ ಒಂದು ಸಾಲಿನಲ್ಲಿ ಪುರುಷನ ವೀರ್ಯಾಣುವು ಸ್ತ್ರೀಯ ಅಂಡಾಣುವನ್ನು ಪ್ರವೇಶಿಸಿ ಫಲಪ್ರದವಾಗುವ ಜೀವಕ್ರಿಯೆಯ ವಿಧಾನವನ್ನು ಅಶ್ಲೀಲತೆಯ ಸೋಂಕು ತಾಕದೆ ವರ್ಣಿಸಿರುವ ರೀತಿ ಗಮನಾರ್ಹವಾದುದು. ಇಂತಹ ವಿಭಿನ್ನವಾದ ವಿಷಯಗಳನ್ನೊಳಗೊಂಡಿರುವ ಕವನಗಳನ್ನು ಸಾಹಿತ್ಯಕ್ಕೆ ಯಾವ ಕುಂದು ಬರದೆ ತಮ್ಮದೇ ಆದ ರೀತಿಯಲ್ಲಿ ಚಿತ್ರಿಸುವುದು ಬೇಂದ್ರೆಯವರ ವೈಶಿಷ್ಟ್ಯತೆ.

**"ಆ ಮುಖಾ - ಈ ಮುಖಾ**
**ಒಂದು ಸತ್ತು**
**ಒಂದು ಅತ್ತು**
**ಒಂದಕೊಂದು ಸಮ್ಮುಖಾ**
**ಬೇರೆ ಬತ್ತಿ**
**ದೀಪ ಹತ್ತಿ**
**ಬೆಳಗುತಿಹುದು ಸ್ನೇಹವಾ**
**ತುಂಬಿ ಬೇರೆ ದೇಹವಾ"**

ಮಡದಿಯನ್ನು ದಾಸಿಯೆಂದು ತಿಳಿಯದೆ ಸಖಿಯನ್ನಾಗಿ ಪರಿಗಣಿಸಿ ಪತಿಯು ನಡೆದರೆ ಅವರಿಬ್ಬರಲ್ಲಿ ನಿಜವಾದ ಪ್ರೇಮದ, ಸ್ನೇಹದ ಹೊಸಹುಟ್ಟು ಆರಂಭವಾದೀತು. ದಾಂಪತ್ಯವು ಪರಿಪಕ್ವವಾಗ-ಬೇಕಾದರೆ ಪತಿ-ಪತ್ನಿಯರಲ್ಲಿ ಭಾವಶುದ್ಧಿಯಾಗುವುದು ಅತ್ಯವಶ್ಯ. "ಅಗ್ನಿಸಾಕ್ಷಿಯಾಗಿ ಬಂದ ಕನ್ಯೆಯನ್ನು ಸ್ನೇಹದ ಅಭ್ಯಾಸದಿಂದ, ಸುಖದುಃಖಗಳಲ್ಲಿ ಸಮಭಾಗಿಯಾಗುವ ಸಹನಾಭೂತಿಯ ಅಂತಃಕರಣದಿಂದ ಸಖಿಯನ್ನಾಗಿ ಮಾಡುವ ಕ್ರಮವೊಂದು ಎಡಬಿಡದೆ ಸಾಗಿರುವದು. ಆ ಕ್ರಮದಲ್ಲಿ ಸ್ನೇಹದ ವಿವಿಧ ರೂಪಗಳೂ ತಮ್ಮ ತಮ್ಮ ಪಾತ್ರವನ್ನಾಡಿ ನಾಯಕ ಪಾತ್ರಕ್ಕೆ ರಸಭಾವಗಳ ಪ್ರಭಾವಲಯಗಳನ್ನು ಕಟ್ಟುವವು." ಎಂದು ಬೇಂದ್ರೆಯವರು ಹೇಳಿದ್ದಾರೆ.

ಪತಿ-ಪತ್ನಿಯರ ಈ ಸ್ನೇಹದ ವಿವಿಧ ರೂಪಗಳನ್ನು ಬೇಂದ್ರೆಯವರು ತಮ್ಮ ಮಿನಿ-ಮಹಾಕಾವ್ಯವಾದ "ಸಖೀಗೀತ"ದಲ್ಲಿ ಬಹಳ ಸುಂದರವಾಗಿ ಚಿತ್ರಿಸಿದ್ದಾರೆ. ಮದವೆಯ ದಿನದ ಸಂಜೆಯ ಸ್ಮೃತಿಯಿಂದ ಆರಂಭವಾದ ಹೊಸದರ ಹುಮ್ಮಸ್ಸು, ವಿವಾಹಿತ-ಪ್ರಣಯಗಳನ್ನು ಪ್ರಸ್ತಾವಿಸುತ್ತಾ ಕೊನೆಯ ಕಾಲದ ಕಷ್ಟಗಳ ದಿನಗಳವರೆಗೂ ಚಿತ್ರಿಸುತ್ತಾ ಹೋಗುವ ನಲವತ್ತು ಪರ್ವಗಳಿದ್ದು ಒಂದೊಂದು ಪರ್ವದಲ್ಲಿ ಆರು ಚರಣಗಳಿದ್ದು ಅದರಿಂದ ಆಯ್ದ ಕೆಲವು ಚರಣಗಳು ಇಲ್ಲಿವೆ.

**"ಬಾ ಅಲ್ಲಿ ಕಡಲಲ್ಲಿ ತೆರೆ ತೆರೆಯನೊಡೆವಲ್ಲಿ**
**ನೀರ್ ಬುರುಗು ಬಿಡುವಲ್ಲಿ ಮೀಯೋಣ ಬಾ**
**ತೆಪ್ಪವೋ ತಾರಿಯೋ ಹರಗೋಲೋ ಹಡಗವೋ**
**ತೆರೆ-ತೊಡೆ-ತೊಟ್ಟಿಲನೇರೋಣ ಬಾ**

**ಹಗಲೆಲ್ಲೊ ಹಾರಿದವು ಇರುಳೆಲ್ಲ ಜಾರಿದವು**
**ಋತು ನಿದ್ದೆಯಾಡಿದವು ಬಗುರೆಯೊಲೇ**
**ನಗೆಯ ನೊರೆಯ ಕೆಳಗೆ ಮೊರೆವ ಬಯಕೆಯ ಕಡಲು**
**ತೆರೆತೆರೆ ತೆರನಾಗಿ ತೆರೆಯುತಿರೇ**

**' ಅಹಹಾ ! ಜೀವದ ಗೆಳತಿ, ಜೀವನದ ಜೊತೆಗಾರ್ತಿ**
**ನೀನಿಲ್ಲದಾನಿಲಲು ನೆಲವಿದೆಯೇ? '**
**ನನಗೂ ನಿನಗೂ ಅಂಟಿದ ನಂಟಿನ**
**ಕೊನೆ ಬಲ್ಲವರಾರು ಕಾಮಾಕ್ಷಿಯೇ !"**

ಹೀಗೆ ಗಂಡು ಹೆಣ್ಣಿನ ಒಲವು, ಪ್ರೀತಿ, ವಿರಸ, ಪ್ರಣಯ, ಅನುರಾಗ, ಸ್ನೇಹ, ಗೆಳೆತನ, ಭಕ್ತಿಯನ್ನೊಳಗೊಂಡ ಅನೇಕ ಕವನ ಸಂಕಲನಗಳನ್ನು ಕನ್ನಡ ಕಾವ್ಯ ಜಗತ್ತಿಗೆ ಪರಿಚಯಿಸಿದ ಬೇಂದ್ರೆಯವರು ಕಾವ್ಯಾಸಕ್ತರಿಗೆ ಅದ್ಭುತವಾದ ಒಲವಿನ ದರ್ಶನವನ್ನು ಕೊಟ್ಟಿದ್ದಾರೆ. ಬೇಂದ್ರೆಯವರ ಒಂದೊಂದು ಕವನದ ಸಾಲಿನ ಕುರಿತಾಗೂ ಪುಟಗಟ್ಟಲೆ ಬರೆಯುವಷ್ಟು ವಿಷಯವಿರುತ್ತದೆ. ಹಾಗಾಗಿ ಅವರ ಒಲವಿನ ದರ್ಶನದ ಮೇಲ್ನೋಟವನ್ನು ಕೊಡುವ ಪ್ರಯತ್ನ ಈ ಸಣ್ಣ ಬರಹ. ■

ಲೇಖನ

# ವಸಂತ ಬಂದ ಋತುಗಳ ರಾಜ !



"ಮೃದು ವಸಂತದ ಮುದ್ದು ಬೆರಳು ಮೊಗ್ಗಿನ ಕಣ್ಣು ತೆರೆದು ಅರಳಾಗಿಸುವ ವೇಳೆಯಲ್ಲಿ
ಎಳೆಬಿಸಿಲ ಹೊದಿಕೆಯಲು ನಗಲು ಚಿಗುರಿದ ತೋಟ ಬಗೆ ಬಗೆಯ ಪರಿಮಳದ ಜ್ವಾಲೆಯಲ್ಲಿ"

- ಕೆ.ಎಸ್.ನರಸಿಂಹಸ್ವಾಮಿ

(ಛಾಯಾಚಿತ್ರ ಕೃಪೆ: ಅಂತರ್ಜಾಲ)



***ಸರಿತಾ ನವಲಿ***

ನ್ಯೂ ಜೆರ್ಸಿಯಲ್ಲಿ ನವೆಂಬರ್ ತಿಂಗಳಿನಿಂದ ಮಾರ್ಚ್‌ನವರೆಗಿರುವ ಸುದೀರ್ಘ ಚಳಿಗಾಲ, ಪ್ರತಿಯೊಂದು ತಿಂಗಳಲ್ಲೂ ಬೇರೆ-ಬೇರೆ ತೆರನಾದ ಅನುಭವಗಳನ್ನು ನೀಡುತ್ತದೆ. ಮುಂಬರುವ ಚಳಿಗಾಲಕ್ಕೆ ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ತಮ್ಮನ್ನು ಸಜ್ಜುಗೊಳಿಸಿಕೊಳ್ಳುವ ಮರ-ಗಿಡಗಳಂತೆ, ಚಳಿಗಾಲದ ವಿವಿಧ ಹಂತಗಳನ್ನು ಎದುರಿಸಲು ನಮ್ಮ ತಯಾರಿಯೂ ಕಂಡುಬರುತ್ತದೆ. ಚಳಿಯ ವಾತಾವರಣದ ಏರಿಳಿತಗಳನ್ನು, ವೈಪರೀತ್ಯವನ್ನು ಎದುರಿಸುತ್ತ ಹೋಗುವಾಗ ಮೈಮನಗಳಲ್ಲಿ ಅದೇನೋ ಜಡತನ, ನಿರಾಸೆ ಮೂಡಿದಂತಾಗಿ ನಮಗೆ ನಾವೇ "ಈ ಚಳಿಗಾಲ ಯಾವಾಗ ಮುಗಿಯುವುದೋ? ವಸಂತನ ಆಗಮನ ಯಾವಾಗ ಆಗುವುದೋ?" ಎಂದು ಪ್ರಶ್ನಿಸಿಕೊಳ್ಳುವಂತಾಗುತ್ತದೆ. ಪ್ರತಿವರ್ಷವೂ ಮನಸ್ಸಿನಲ್ಲಿ ಈ ಪ್ರಶ್ನೆ ಮೂಡಿದಾಗ, ಕವನವೊಂದರ ಸಾಲುಗಳು ನೆನಪಾಗುತ್ತವೆ.

**"ಬತ್ತಿದೆದೆಗೆ ಹೊಸ ಆಸೆಯ ಹೊತ್ತಿಸಿ, ಕೊಂಬೆ**
**ಕೊಂಬೆಯಲಿ ನಂಬಿಕೆಯುಕ್ಕಿಸಿ**
**ಜಡತನದಲಿ ಚೈತನ್ಯವ ಚಿಗುರಿಸಿ**
**ವಸಂತಮೂಡುವುದೆಂದಿಗೆ?**
**ದಿಕ್ಕು ತಪ್ಪಿಸುವ ಕತ್ತಲೆಗಳಲಿ ನಂದಿದಾಸೆಗಳ**
**ಕೋಟಿ ಕಣ್ಗಳಲಿ,**
**ಬೆಳಗಿನ, ನಲವಿನ, ಗೆಲುವಿನ ಭಾವದ ವಸಂತ**
**ಮೂಡುವುದೆಂದಿಗೆ?"**

ಪ್ರಕೃತಿಯಲ್ಲಿನ ಎಲ್ಲ ಜೀವರಾಶಿಗಳೂ ತಮ್ಮದಾಗಿಸಿ-ಕೊಳ್ಳುವ ಚಳಿಗಾಲದ ಅನುಭವವನ್ನು ಮತ್ತು ಆ ಎಲ್ಲ ಜೀವರಾಶಿಗಳಲ್ಲಿ ವಸಂತನ ಆಗಮನದಿಂದ ಕಂಡುಬರುವ ಬದಲಾವಣೆಯನ್ನು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪರವರು ತಮ್ಮ 'ವಸಂತ ಮೂಡುವುದೆಂದಿಗೆ?' ಎಂಬ ಕವನದಲ್ಲಿ ಬರೆದಿದ್ದಾರೆ. ಕವನದ ಸಾಲುಗಳು ಅದೆಷ್ಟು ಅರ್ಥಪೂರ್ಣವಾಗಿವೆ ಎಂದುಕೊಳ್ಳುತ್ತಾ 'ವಸಂತ ಋತು'ವಿನ ಬಗ್ಗೆ ಕವಿ ಬರೆದ ಹಲವು ಕವನಗಳನ್ನು ಓದಿದಾಗ, ವಸಂತಾಗಮನವನ್ನು ಬಗೆ-ಬಗೆಯಾಗಿ ವರ್ಣಿಸಿದ್ದು ಗಮನಕ್ಕೆ ಬಂದಿತ್ತು. (ಮುಂದಿನ ಪುಟಕ್ಕೆ)

## ಲೇಖನ

**ವಸಂತ ಬಂದ ಋತುಗಳ ರಾಜ !** (ಮುಂದುವರೆದುದು)

ಜಿ.ಎಸ್.ಎಸ್. ರವರು ಬರೆದಿರುವ 'ಚೈತ್ರದ ಚುಟುಕು' ಕವನದ ಸಾಲುಗಳಂತೂ ಬಹಳ ಸುಂದರ.

**"ಖಳದುಶ್ಯಾಸನ ಹೇಮಂತ ಮರ-ಮರಗಳ ಹಸಿರುಡೆಯ**
**ಸೆಳೆದು ಹಾಕಿ ನಗ್ನಗೊಳಿಸಿ ಅವಮಾನ ಮಾಡಿದ,**
**ಇಗೋ ಬಂದ ಋತು ವಸಂತ ಕೊಳಲೂದುತ ಎಲ್ಲೋ ನಿಂತು**
**ಮರ ಮರಗಳ ಮೈಯ ತುಂಬ ಹೊಸ ಚಿಗುರನು ಉಡಿಸಿದ"**

ಅರ್ಥಗರ್ಭಿತವಾದ ಕವನದ ಈ ಸಾಲುಗಳು, ಕವಿ 'ವಸಂತ ಋತು'ವಿನ ಬಗ್ಗೆ ಬರೆದಿರುವ ಹಲವಾರು ಕವನಗಳನ್ನು ಓದುವಂತೆ ಪ್ರೇರೇಪಿಸಿದವು. ಪ್ರತಿಯೊಂದು ಕವನದಲ್ಲಿ ಈ ಋತುವನ್ನು ಕವಿ ಅದೆಷ್ಟು ವೈವಿಧ್ಯಮಯವಾಗಿ ಓದುಗನ ಮುಂದೆ ತಂದಿದ್ದಾರೆ ಎನ್ನಿಸಿತು.

**"ಋತು ವಸಂತ ಬಂದನಿದೋ ಉಲ್ಲಾಸವ ತಂದನಿದೋ**
**ಮಬ್ಬು ಕವಿದ ಮೌನಗಳಲಿ ಹೊಸದನಿಗಳ ಹೊಮ್ಮಿಸಿ**
**ಉದುರಿದೆಲೆಯ ಕೊಂಬೆಗಳಲಿ, ಬಣ್ಣದ ಹೊಳೆ ಹರಿಯಿಸಿ**
**ಬತ್ತಿದೆದೆಗೆ ಭರವಸೆಗಳ ಹೊಸಬಾವುಟವೇರಿಸಿ**
**ಹಳೆಗಾಡಿಗೆ ಹೊಸಕುದುರೆಯ ಹೊಸಗಾಲಿಯ ಜೋಡಿಸಿ"**

ಈ 'ವಸಂತಗೀತ' ಕವನವನ್ನು ಓದಿದಾಗ ಪ್ರತಿವರ್ಷವೂ ಹಳೆಗಾಡಿಗೆ ಹೊಸಕುದುರೆಯನ್ನು, ಹೊಸ ಗಾಲಿಯನ್ನು ಜೋಡಿಸಿ ನವ್ಯೋಲ್ಲಾಸ ತರುವ ವಸಂತಋತುವಿನ ಬಗ್ಗೆ ಓದುವಾಗ "ಹೊಸ ಚಿಗುರು ಹಳೆಬೇರು ಕೂಡಿರಲು ಮರ ಸೊಬಗು | " ಎನ್ನುವ ಮಂಕುತಿಮ್ಮನ ಕಗ್ಗದ ಸಾಲುಗಳು ಮನಸ್ಸಿನಲ್ಲಿ ಸುಳಿದುಹೋಗುತ್ತವೆ. ಕನ್ನಡದ ಕವಿಗಳು ಋತು ವಸಂತನನ್ನು ಬಣ್ಣಿಸಿದ ಬಗೆಯನ್ನು ತಿಳಿದುಕೊಳ್ಳುವ ಕುತೂಹಲ ಮೂಡಿದಾಗ, ಬಾಲ್ಯದಲ್ಲಿ ಶಾಲೆಯ ಪಠ್ಯದಲ್ಲಿ ಓದಿದ ಕವನವೊಂದು ನೆನಪಾಗಿತ್ತು.

**"ವಸಂತ ಬಂದ, ಋತುಗಳ ರಾಜ ತಾ ಬಂದ**
**ಚಿಗುರನು ತಂದ, ಪೆಣ್ಗಳ ಕುಣಿಸುತ ನಿಂದ,**
**ಚಳಿಯನು ಕೊಂದ, ಹಕ್ಕಿಗಳುಲಿಗಳ ಚಂದ,**
**ಕೂವು ಜಗ್ ಜಗ್ ಪುವ್ವೀ ಟೂವಿಟ್ಟುವೂ |**

**ಮಾವಿನ ಸೊಂಪು, ಮಲ್ಲಿಗೆ ಬಯಲೆಲ್ಲ ಕಂಪು**
**ಗಾಳಿಯ ತಂಪು, ಜನಗಲ ಜಾತ್ರೆಯ ಕಂಪು**
**ಕಿವಿಗಳಿಗಿಂಪು, ಹಕ್ಕಿಗಳುಲುಹಿನ ಪೆಂಪು**
**ಕೂವು ಜಗ್ ಜಗ್ ಪುವ್ವೀ ಟೂವಿಟ್ಟುವೂ |"**

ಈ ಹಾಡನ್ನು ಮತ್ತೆ-ಮತ್ತೆ ಓದಿದಾಗ, ಶಾಲೆಯ ಸಹಪಾಠಿಗಳೊಂದಿಗೆ, ಅಕ್ಕ-ತಂಗಿ, ಅಣ್ಣ-ತಮ್ಮರೊಂದಿಗೆ ಚೈತ್ರದ ತಿಳಿಗಾಳಿಯಲ್ಲಿ ಮಾವಿನ ಚಿಗುರಿನ ಸುವಾಸನೆಯನ್ನು ಸವಿಯುತ್ತ, ಶಾಲೆಯ ಆಟದ ಮೈದಾನದಲ್ಲಿ, ಮನೆಯ ಅಂಗಳದಲ್ಲಿ, ಹಿತ್ತಲಿನಲ್ಲಿ, ತೋಟಗಳಲ್ಲಿ ಈ ಹಾಡನ್ನು ಹಾಡಿಕೊಂಡು ಆಡಿದ ಬಾಲ್ಯದ ಆ ದಿನಗಳು ನೆನಪಿನಂಗಳದಲ್ಲಿ ಮತ್ತೆ ಚಿಗುರೊಡೆಯುತ್ತವೆ. ಚೈತ್ರ ತರುವ ಸಂಭ್ರಮವೇ ಹಾಗಿದೆ. ಕಣ್ಣ ಹಾಯಿಸಿದ ಕಡೆಗೆಲ್ಲ ಹೊಸತನ ಕಂಡುಬರುತ್ತದೆ. ಆಂಗ್ಲ ಕವಿ ಥಾಮಸ್ ನಾಶ್ ಬರೆದಿರುವ 'ಸ್ಪ್ರಿಂಗ್' ಎಂಬ ಕವನವನ್ನು ಬಿ.ಎಂ.ಶ್ರೀಕಂಠಯ್ಯರವರು ಕನ್ನಡಕ್ಕೆ ಅನುವಾದಿಸಿದ್ದು ಹೀಗೆ. ಕವನದ ಕೊನೆಯಲ್ಲಿ "ಬಂದ ವಸಂತ - ನಮ್ಮಾ ರಾಜ ವಸಂತ !" ಎಂದು ಬರೆಯುತ್ತಾರೆ.

ಋತುಗಳ ರಾಜನೆಂದು ಕರೆಸಿಕೊಳ್ಳುವ 'ವಸಂತ'ನ ಬಗ್ಗೆ ಎಷ್ಟೆಲ್ಲ ಕವನಗಳ ರಚನೆಯಾಗಿರಬಹುದೆಂದು ನನ್ನ ಸಂಗ್ರಹದಲ್ಲಿರುವ ಕನ್ನಡ ಕವಿಗಳ ಹಲವಾರು ಕವನಗಳನ್ನು ಓದುತ್ತ ಹೋದಾಗ ಕವಿಮನಗಳಲ್ಲಿ ಮೂಡಿದ ಹಲವು ಬಗೆಯ ಭಾವಗಳು ಕವನದ ಸಾಲುಗಳಾಗಿರುವುದು ಕಂಡುಬಂದಿತು.

ರಾಷ್ಟ್ರಕವಿ ಕುವೆಂಪುರವರ 'ಕೊಳಲು' ಪುಸ್ತಕವನ್ನು ಕೈಗೆತ್ತಿಕೊಂಡಾಗ 'ಕೋಗಿಲೆ' ಎಂಬ ಶೀರ್ಷಿಕೆಯ ಕವನ ಕಂಡಿತ್ತು.

**"ಕೂ ಹೂ ! ಕೂ ಹೂ !" ಎನ್ನುತ ಹಾಡುವ ಕಿನ್ನರ ಕಂಠದ ಕೋಗಿಲೆಯೆ,**
**ಮಾವಿನ ತಳಿರೊಳು ದೇವತೆಯಂದದಿ ನೀನಡಗೇನನು ಹಾಡುತಿಹೆ?**
**ಹುಲ್ಲೆಯ ತೆರದಲಿ ನಲಿಯುತ ಹಸುರಲಿ ಮೆಲ್ಲನೆ ಬನದಲಿ ಬರುವಾಗ**
**"ಕೂ ಹೂ ! ಕೂ ಹೂ !" ಮೋಹದ ಗಾನದಿ ದೇಹದಿ ಬಾಲ್ಯವ ನೀ ತರುವೆ !**

(ಮುಂದಿನ ಪುಟಕ್ಕೆ)

# ಲೇಖನ

**ವಸಂತ ಬಂದ ಋತುಗಳ ರಾಜ ! (ಮುಂದುವರೆದುದು)**

'ಮಲ್ಲಿಗೆ ಕವಿ' ಕೆ.ಎಸ್.ನರಸಿಂಹಸ್ವಾಮಿಯವರು ತಮ್ಮ ಕವನದಲ್ಲಿ ಈ 'ವಸಂತ' ಬಲು ಮೃದು ಎಂದಿದ್ದಾರೆ.

**"ಮೃದು ವಸಂತದ ಮುದ್ದು ಬೆರಳು ಮೊಗ್ಗಿನ ಕಣ್ಣು ತೆರೆದು ಅರಳಾಗಿಸುವ ವೇಳೆಯಲ್ಲಿ**
**ಎಳೆಬಿಸಿಲ ಹೊದಿಕೆಯಲು ನಗಲು ಚಿಗುರಿದ ತೋಟ ಬಗೆ ಬಗೆಯ ಪರಿಮಳದ ಜ್ವಾಲೆಯಲ್ಲಿ"**

ಕೊರೆಯುವ ಚಳಿಗಾಲ ಕೊನೆಗೊಂಡು, ಮುಂಬರುವ ಬೇಸಿಗೆಯ ಪ್ರಖರತೆಯ ಪರಿಚಯವೇ ಇಲ್ಲದಂತೆ ಬೀಸುವ ಚೈತ್ರದ ತಿಳಿಗಾಳಿ ವಸಂತಋತುವನ್ನು ಮೃದುವಾಗಿಸಿ, ಮಧುರವಾಗಿ-ಸುತ್ತದೆ ಎನ್ನುತ್ತಾರೆ ಕವಿ.

ಚೈತ್ರಮಾಸದ ಮೊದಲ ದಿನದಂದು ಆಚರಿಸಲ್ಪಡುವ 'ಯುಗಾದಿ' ಹಬ್ಬವೂ ಹೊಸ ಆರಂಭವೆನ್ನುವ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಪ್ರೊ.ಎಂ.ವಿ.ಸೀತಾ-ರಾಮಯ್ಯರವರು ತಮ್ಮ 'ಚೈತ್ರಾರಂಭದ ಈ ದಿನ' ಎನ್ನುವ ಕವನದಲ್ಲಿ ಮೊದಲಿಗೆ "ನೂತನ ಚೇತನದಾಹ್ವಾನ ಚೈತ್ರಾರಂಭದ ಈ ಸುದಿನ" ಎಂದು ಯುಗಾದಿಯ ದಿನವನ್ನು ಹೊಸ ಚೈತನ್ಯ ನೀಡುವ ದಿನವೆಂದು ವರ್ಣಿಸಿ ಕವನವನ್ನು ಮುಂದುವರೆಸುತ್ತಾರೆ.

**"ನೋವೋ ನಲಿವೋ ಸೋಲೋ ಗೆಲುವೋ ಎರಡಕು**
**ಸಮಬೆಲೆ ಎನುವ ದಿನ;**
**ಬೇವು ಬೆಲ್ಲ ಬೆಳಗಿಂಗಳು ಬಿಸಿಲು ಎರಡು**
**ಸಮ ಸೇವಿಸುವ ದಿನ"**

ನಮಗೆಲ್ಲ ತಿಳಿದಿರುವಂತೆ ಯುಗಾದಿಯ ದಿನದಂದು ಸೇವಿಸುವ ಬೇವು-ಬೆಲ್ಲ, ಬದುಕಿನ ಏರಿಳಿತಗಳನ್ನೂ, ಕಷ್ಟ-ಸುಖಗಳನ್ನೂ ಸಮನಾಗಿ ಸ್ವೀಕರಿಸಬೇಕೆಂಬುದನ್ನು ಸೂಚಿಸುತ್ತವಲ್ಲವೇ? ಜೀವನದ ನೋವು-ನಲಿವುಗಳನ್ನು ಸಮನಾಗಿ ತೂಗಿ ನೋಡಿ, ಎರಡಕ್ಕೂ ಸಮನಾದ ಬೆಲೆಕೊಡಬೇಕೆಂಬ ಮಾತನ್ನು ಸರಳವಾಗಿ, ಸುಂದರವಾಗಿ ಇಲ್ಲಿ ಕವಿ ಹೇಳುತ್ತಾರೆ.

ಕವಿ ಪು.ತಿ.ನರಸಿಂಹಾಚಾರ್ಯರು ತಮ್ಮ ಕವನವನ್ನು 'ಯುಗಾದಿಯ ಹರಕೆ' ಎಂದೇ ಹೆಸರಿಸಿದ್ದಾರೆ.

**"ಪ್ರತಿಯುಗಾದಿಗೂ ಕಲಿಯುಗ ಸವೆಯುತ ಕೃತಯುಗ ಹತ್ತಿರವಾಗುತಿದೆ.**
**ಪ್ರತಿ ಯುಗಾದಿಗೂ ಮಾವು ಚಿಗುರುವುದು ಬೇವು ಸಹ ಚಿಗುರುತ್ತದೆ.**
**ಪ್ರತಿ ಯುಗಾದಿಗೂ ಬೇವಿನ ಕಹಿಯೆ ಪ್ರಾಶನ ಮಂತ್ರದ ಪ್ರಶಸ್ತಿ ವಾಚನ**
**ಕಹಿಗಳನುಣ್ಣುತ ಬಲಿಷ್ಠರಾಗಿರಿ ಸವಿಗಳ ಸವಿಯುತ ಮಧುರರಾಗಿರಿ**
**ಎಂದಲ್ಲವೇ ಈ ಹಬ್ಬದ ನಲ್ನುಡಿ."**

ಬದುಕಿನಲ್ಲಿ ಬರುವ ಕಷ್ಟ, ಸೋಲು, ಹಿನ್ನಡೆಗಳ ಕಹಿಯನ್ನುಂಡು ಜೀವನಾನುಭವವನ್ನು ಪಡೆಯುವ ಮನುಷ್ಯ ಗಟ್ಟಿಗನಾಗುತ್ತಾನೆ. ಚೈತ್ರದ ಚಿಗುರಿನಲ್ಲಿ, ಮಾವಿನ ಚಿಗುರಿನೊಂದಿಗೆ ಬೇವಿನ ಚಿಗುರೂ ಇದೆ. ಕಹಿಯನ್ನುಂಡು ಕಲಿಯುವ ಪಾಠದೊಂದಿಗೆ, ಬದುಕು ನೀಡುವ ಒಳ್ಳೆಯ ಅನುಭವಗಳ ಸಿಹಿಯನ್ನೂ ಸವಿಯುವಂತೆ ಆಗಲಿ ಎಂದು ಹಾರೈಸುತ್ತಾರೆ.

ಯುಗಾದಿ ಎಂದರೆ ಯುಗದ ಆದಿಯೂ ಹೌದು, ಅಂತ್ಯವೂ ಹೌದು ಎನ್ನುತ್ತಾರೆ ಕವಿ ಗೋಪಾಲ ಕೃಷ್ಣ ಅಡಿಗರು. ಅವರು ತಮ್ಮ 'ಹೊಸ ಯುಗಾದಿಗೆ' ಎಂಬ ಕವನದಲ್ಲಿ 'ಆದಿ' ಮತ್ತು 'ಅಂತ್ಯ'ಗಳನ್ನು 'ಅವಳಿ ಜವಳಿ' ಎಂದು ಕರೆದಿದ್ದಾರೆ.

**"ಯುಗಾದಿ ಎಂದರೂ ಒಂದೆ, ಯುಗಾಂತ ಎಂದರೂ ಸರಿಯೆ, ಆದಿ ಅಂತ್ಯಗಳೆರಡು ಅವಳಿ ಜವಳಿ".**

ಅವರ ಇನ್ನೊಂದು ಕವನ 'ಮತ್ತೆ ಮತ್ತೆ ಯುಗಾದಿ' ಯಲ್ಲಿ ನಿಲ್ಲದೇ ಸಾಗುವ ಸಮಯದ ಬಗ್ಗೆ ಬರೆಯುತ್ತಾರೆ. ಕಾಲಚಕ್ರ ತಿರುಗುತ್ತ, ಹಗಲಿರುಳು ಉರುಳಿ ಮತ್ತೆ-ಮತ್ತೆ ಯುಗಾದಿ ಬರುತ್ತದೆ ಎಂದು ವಿವರಿಸುತ್ತಾರೆ.

**"ಮತ್ತೆ ಮತ್ತೆ ಯುಗಾದಿ ಯಾವುದಕ್ಕಾಗಿ ? ಕಂಭ ಸುತ್ತುವ ವೃತ್ತಗತಿ ಅನಾದಿ:**
**ಚೈತ್ರ ಹೊರಟನೆ ಚೈತ್ರಯಾತ್ರೆಗಿನ್ನೊಂದು ಸಲ- ವರ್ಷ ವರ್ಷದ ತೊಡಕು ತುಡಿವ ಸಲಗ?**

(ಮುಂದಿನ ಪುಟಕ್ಕೆ)

## ಲೇಖನ

**ವಸಂತ ಬಂದ ಋತುಗಳ ರಾಜ !** (ಮುಂದುವರೆದುದು)

**ತೋಟಗಳ ಗಿಡಬಳ್ಳಿ ಕಂಕಾಲಗಳ ಬೋಳಿಗೂ ಚಿಗುರು ಹೂಗಳ ಚಪಲ, ಹಣ್ಣಿನ ಫಲ.**
**ಕಾಲಮಾನದ ಸರಳರೇಖೆಗೆ ಅನಂತ ಗತಿ ದೇವಮಾನವೆ ಬೇರೆ ; ಮನುಷ್ಯ ಮಾನ**
**ವಕ್ರಗತಿಯ ಅಸಂಖ್ಯ ಓರೆಕೋರೆಗಳ ಆತಂಕ, ತಳ್ಳಂಕ**
**ಹಠಾತ್ತಾಗಿ ಮುರಿವ ಆಕಾಶ ಸಂಕ."**

ನಿಲ್ಲದೇ ಸಾಗುವ ಸಮಯದೊಂದಿಗೆ ಚೈತ್ರ, ವರ್ಷ-ವರ್ಷವೂ ವಿಜಯಯಾತ್ರೆಗೆ ಹೊರಟಾಗ, ಚಳಿಗಾಲದಲ್ಲಿ ಎಲೆ ಉದುರಿ ಬೋಳಾಗಿ ನಿಂತ ಗಿಡ-ಬಳ್ಳಿಗಳು ಚಿಗುರಿ, ಮೊಗ್ಗು ಮೂಡಿ, ಹೂವಾಗಿ, ಹಣ್ಣು ತಳೆದು ಸಂಪೂರ್ಣತೆಯನ್ನು ಕಾಣುವ ತವಕದಲ್ಲಿರುತ್ತವೆ ಎನ್ನುತ್ತಾರೆ. ದೇವಮಾನದ ಕಾಲಮಾನ ಸರಳರೇಖೆಯಂತಿದ್ದು ಅನಂತ, ಕೊನೆಯಿಲ್ಲದ್ದಾಗಿದೆ, ಆದರೆ ಮನುಷ್ಯ ಮಾನವೆನ್ನುವುದು ಅನೇಕ ಅಂಕುಡೊಂಕುಗಳಿಂದ ಕೂಡಿದೆ ಎಂಬ ಸತ್ಯವನ್ನೂ ಹೇಳುತ್ತಾರೆ. ಕ್ಷಣಿಕ, ನಶ್ವರವಾಗಿರುವ ಮಾನವನ ಬದುಕಿನಲ್ಲಿ ನೆಲ-ಮುಗಿಲಿನ ನಡುವಿನ ಸೇತುವೆ ಯಾವ ಮುನ್ಸೂಚನೆಯೂ ಇಲ್ಲದಂತೆ ಮುರಿದು ಬೀಳುವ ಆತಂಕವಿದೆ ಎಂಬುದನ್ನು 'ಹಠಾತ್ತಾಗಿ ಮುರಿವ ಆಕಾಶ ಸಂಕ' ಎನ್ನುವ ಸಾಲುಗಳಿಂದ ಕವಿ ಅರ್ಥೈಸುತ್ತಾರೆ.

ಡಾ|| ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ತಮ್ಮ ಕವನದಲ್ಲಿ 'ಹೊಸ ವರ್ಷ ಬಂದಂತೆ ಯಾರು ಬಂದಾರು?' ಕವನದಲ್ಲಿ ಗಿಡ ಮರಕೆ ಹೊಸ ವಸ್ತ್ರ ಯಾರು ತಂದಾರು? ಹಾಡೆಂದು ಕೋಗಿಲೆಯ ಕೂಗಿ ಕರೆದಾರು? ಮಾವಿನಾ ಚಿಗುರನ್ನು ತಿನಲು ಕೊಟ್ಟಾರು? ಎಂದು ಪ್ರಶ್ನಿಸುತ್ತಾ ಕವನವನ್ನು ಮುಂದುವರೆಸುತ್ತಾರೆ.

**"ಹೊಸ ವರ್ಷ ಬಂದಂತೆ ಯಾರು ಬಂದಾರು**
**ಏನೋ ನಿರೀಕ್ಷೆ ಸೃಷ್ಟಿಯಲೆಲ್ಲ**
**ಹೂಗಳ ಪರೀಕ್ಷೆ ದುಂಬಿಗಳಿಗೆಲ್ಲ**
**ಬಂದನೊ ವಸಂತ ಬಂದಿಗಳೆ ಎಲ್ಲ !**
**ಹೊಸ ಬಯಕೆ, ಹೊಸ ಆಲೆ ರುಚಿರುಚಿಯ ಬೆಲ್ಲ."**

ಸೃಷ್ಟಿಯ ಸಮಸ್ತ ಜೀವರಾಶಿಗಳಲ್ಲಿ ಹೊಸತನ ಮೂಡುವುದರೊಂದಿಗೆ ಹೊಸ ಆಲೆಮನೆಯಲ್ಲಿ ರೂಪಗೊಳ್ಳುವ ಬೆಲ್ಲದ ಸವಿಯನ್ನು ಸವಿಯುವ ನಿರೀಕ್ಷೆಯಂತೆ ವಸಂತನ - ಆಗಮನವನ್ನು ಕವಿ ಹೇಳುತ್ತಾರೆ. "ಮನುಷ್ಯನೆಂದರೆ ಹಿಡಿ-ಹಿಡಿ ನೆನಪುಗಳು" ಎನ್ನುವಂತೆ ನೆನಪುಗಳಿಂದಲೇ ರೂಪುಗೊಳ್ಳುವ ಜೀವನ ಕಾಣುವ ಕನಸುಗಳನ್ನು, ಅವುಗಳ ಮಹತ್ವವನ್ನು ಅರ್ಥಪೂರ್ಣವಾಗಿ ಕವನದ ಸಾಲುಗಳನ್ನಾಗಿಸಿದ್ದಾರೆ.

**"ನೆನಪುಗಳ ಜೋಲಿಯಲಿ ತೂಗುವುದು ಮನಸು ಕಟ್ಟುವುದು ಮಾಲೆಯಲಿ ಹೊಸ ಹೊಸಾ ಕನಸು**

**ನನಸಾಗದಿದ್ದರೂ ಕನಸಿಗಿದೆ ಘನತೆ ತೈಲ ಯಾವುದೆ ಇರಲಿ ಉರಿಯುವುದು ಹಣತೆ"**

ಕವಿ ಸುಮತೀಂದ್ರ ನಾಡಿಗ್ ರವರು ತಮ್ಮ 'ಯುಗಾದಿ' ಕವನದಲ್ಲಿ "ಹೇಗೊ ಏನೊ ಕಳೆಯಿತು ಹಿಂದಿನೊಂದು ಯುಗ ! ಹಳೆಯದೆಲ್ಲ ಸುಟ್ಟುರಿಯಲಿ ಬೆಂಕಿಹಚ್ಚಿ ಧಗಧಗ" ಎಂದು ಪ್ರಾರಂಭಿಸಿ ನಂತರದ ಸಾಲುಗಳಲ್ಲಿ ಹಬ್ಬದ ತಯಾರಿಯ ಕುರಿತು ಬರೆಯುತ್ತಾರೆ.

**"ಹಳೆಯ ಪಾತ್ರೆ ಉಜ್ಜಬೇಕು ಹೊಳೆಯ ಬೇಕು ಫಳ ಫಳ**
**ಸಾರಿಸಿನೆಲ, ಝಾಡಿಸಿ ಬಲೆ, ಮನವಾಗಿಸಿ ನಿರ್ಮಲ**
**ರಂಗೋಲೆಯ ರಂಗಿನಲ್ಲಿ, ಹೊಸತೋರಣ ಹಸಿರಿನಲ್ಲಿ**
**ಗರಿಗರಿ ಹೊಸ ಬಟ್ಟೆಯಲ್ಲಿ ಬರಲಿ ಒಪ್ಪ ಓರಣ**
**ಉತ್ಸಾಹದ ಕಾರಣ."**

ಯುಗಾದಿ ಹಬ್ಬವನ್ನು ಎದುರುನೋಡುತ್ತ, ಮನೆಯನ್ನೆಲ್ಲ ಸ್ವಚ್ಛಗೊಳಿಸಿ ಓರಣವಾಗಿಸುವ ನಾವು ಹಬ್ಬದ ದಿನ, ಹೊಸ ತೋರಣ, ರಂಗೋಲಿಗಳಿಂದ ಮನೆಯನ್ನು ಅಲಂಕರಿಸಿ, ಹೊಸಬಟ್ಟೆಯನ್ನು ತೊಟ್ಟು ಹಬ್ಬವನ್ನು ಆಚರಿಸುವ ಬಗೆ ಕವನದ ಸಾಲುಗಳಾಗಿ ನಮ್ಮ ಮುಂದಿದೆ.

ಡಾ.ಸಿದ್ಧಲಿಂಗಯ್ಯರವರು ಯುಗಾದಿಯ ಶೀರ್ಷಿಕೆಯಡಿಯಲ್ಲಿ ಐದು ಕವನಗಳನ್ನು ಬರೆದಿದ್ದಾರೆ. ಯುಗಾದಿ-೧, ಯುಗಾದಿ-೨, ಯುಗಾದಿ-೩, ಯುಗಾದಿ-೪, ಯುಗಾದಿ-೫. ಈ ಎಲ್ಲ ಕವನಗಳ ವಿಷಯ ಯುಗಾದಿಯಾದರೂ, ಪ್ರತಿ ಕವನಗಳಲ್ಲಿನ ಭಾವ ಬೇರೆ, ಬೇರೆಯಾಗಿದೆ. ಯುಗಾದಿ-೧ ಕವನದ ಸಾಲುಗಳು ಹೀಗಿವೆ.

(ಮುಂದಿನ ಪುಟಕ್ಕೆ)

## ಲೇಖನ

**ವಸಂತ ಬಂದ ಋತುಗಳ ರಾಜ !** (ಮುಂದುವರೆದುದು)

**"ಬೇವು ಬೆಲ್ಲದ ಅದೇ ಹಳೆಯ ಪಾಠ**
**ಸ್ವಂತದ್ದೋ ಸಾಲದ್ದೋ ಒಬ್ಬಟ್ಟಿನೂಟ**
**ಬದುಕೇ ಇಲ್ಲದ ಅನಾದಿಯ ಲೆಕ್ಕಕ್ಕೆ**
**ನೀನೊಂದು ಶಬ್ದ ಮಾತ್ರ."**

ಹಗಲಿರುಳುಗಳು ಉರುಳಿಹೋಗಿ ವರ್ಷ,ವರ್ಷವೂ ಬರುವ ಯುಗಾದಿ ಬರೀ ಶಬ್ದವೇ? ಆಲೋಚಿಸುವಂತೆ ಮಾಡುತ್ತದೆ ಕವನದ ಈ ಸಾಲು. ಯುಗಾದಿ-೨ ಕವನದ ಸಾಲುಗಳಲ್ಲಿ ಕವಿ ಯುಗಾದಿಯನ್ನೇ ಪ್ರಶ್ನಿಸುವುದನ್ನು ನೋಡಿದರೆ ಯುಗಾದಿ-ಯೆನ್ನುವುದು ಹಲವರಿಗೆ ಬರೀ ಶಬ್ದ ಮಾತ್ರ ಎನ್ನುವ ಕವಿಯ ಮಾತನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ.

**"ಉಳ್ಳವರಿಗೆ ಹಬ್ಬವಾಯ್ತು ಕವಿಕುಲಕ್ಕೆ ಕಬ್ಬವಾಯ್ತು**
**ಇಲ್ಲದವರಿಗೇನಾಯಿತು ಹೇಳೆ ಯುಗಾದಿ"**

ಯುಗಾದಿಯನ್ನೇ ಪ್ರಶ್ನಿಸುವ ಕವನದ ಸಾಲುಗಳನ್ನು ಓದಿ, ಕವಿ ಚೆನ್ನವೀರ ಕಣವಿಯವರ 'ಯುಗಾದಿ' ಕವನವನ್ನು ಓದಿದಾಗ, ಯುಗಾದಿಯನ್ನು 'ಹಿರಿಯ'ನೆಂದು ಕರೆದು ಮಾತುಕತೆ ನಡೆಸುವ, ಪ್ರಶ್ನಿಸುವ ರೀತಿಯಂತೂ ವಿಶಿಷ್ಟವಾಗಿ ಕಂಡಿತ್ತು.

**"ಕರೆಯದಿದ್ದರೂ ನಾವು, ನೀನು ಬಂದೇ ಬರುವಿ**
**ಅಲ್ಲವೆ? ಬಾ ಮತ್ತೆ, ಬಾ ಯುಗಾದಿ;**
**ಎಂಥ ಬಿಸಿಲೊಳು ಬಂದೆ!**
**ಬೇಕೆ ಬಾಯಾರಿಕೆಗೆ ಬೇವು ಬೆಲ್ಲ?"**

ಹೀಗೆ ಯುಗಾದಿ ಎಂಬ 'ಹಿರಿಯ'ನನ್ನು ಮಾತಿಗೆಳೆಯುತ್ತಾರೆ ಕವಿ. ಕವನವನ್ನು ಮುಂದುವರೆಸುತ್ತ ತಮ್ಮ ಮಾತುಕತೆಯನ್ನೂ ಮುಂದುವರೆಸುತ್ತಾರೆ.

**"ಜೆಟ್ ವಿಮಾನ, ಹೆಲಿಕಾಪ್ಟರ್, ಉಗಿಹಡಗ, ಬೋಟು**
**ಎಮ್.ಎಸ್.ಎಮ್.. ರೈಲು, ಕಾರು ಕೊನೆಗೆ ಎಸ್.ಟಿ.ಬಸ್ಸು?-**
**ಯಾವ ವಾಹನದಲ್ಲೂ ಬರಲಿಲ್ಲವೆ? ನೋಡಿದರೆ ಇಳಿವಯಸ್ಸು.**
**ಕೊನೆಗೆ ಎತ್ತಿನ ಬಂಡಿ ಹತ್ತಿ ಬಂದೆಯ, ಹಿರಿಯ,**
**ಬಂದೊಡನೆ ನಿನ್ನ ಗುರುತಿಸಲಿಲ್ಲವೆ ಇಲ್ಲಿ ಯಾರೂ?**
**ಬಗಲಗಸೆ ಅಂಗಿ ತಲೆಗೆ ಹೆಡಿಗೆಯ ರುಮಾಲು**
**ಮರೆತು ಬಿಡಬೇಕೆ ಇಷ್ಟು ಬೇಗ ಮುಂಶಿನ ಹಾದಿ**
**ಅಥವ ಕಂಡೆಯ ಬೇರೆ ಅದಲು ಬದಲು?!"**

ಹಿರಿಯನ ರೂಪಿನ ಯುಗಾದಿಯನ್ನು ಪ್ರಶ್ನಿಸುತ್ತ ಹೋಗುವ ಕವಿ, ಜಗದ ನಿಜಸ್ಥಿತಿಯ ಬಗ್ಗೆ ಆ ಹಿರಿಯನಲ್ಲಿ ಹೇಳಿಕೊಳ್ಳುತ್ತಾರೆ. ನಶ್ವರ ಬದುಕಿನ ಚಿಂತನೆಯನ್ನು ಆತನಲ್ಲಿ ಮಾತನಾಡುತ್ತಾರೆ.

**"ವರುಷಗಟ್ಟಲೆ ಎತ್ತಲೋ ಕಣ್ಮರೆಯಾಗಿ ಹೋಗುವ ನಿನಗೆ**
**ಹೇಗೆ ಗೊತ್ತು-**
**ಇಲ್ಲಿ, ಒಳಗೊಳಗೆ ನಡೆಯುತ್ತಿರುವ ಮಸಲತ್ತು,**
**ನಿಮಿಷ ನಿಮಿಷಕ್ಕೆ ಹೊಸ ಹೊಸ ವೇಷಧರಿಸಿ ಓಡುವ ಜಗತ್ತು.**
**ಹಾಗೆ ನೋಡಿದರೆ , ನಮಗಿಲ್ಲಿ ಏನಿದೆ ಹೇಳು ವಿಶೇಷ ಸವಲತ್ತು?**
**ಇಂದೊ ನಾಳೆಯೊ ವಲಸೆ ಹೋಗುವರು ನಮ್ಮ ಜನ**
**ಚಂದ್ರ ತಾರಾಲೋಕ ಹುಡುಕಿಕೊಂಡು ಬಹುಶಃ ಕವಿಗಳನ್ನೂ**
**ಜೊತೆಗೆ ಕರೆದುಕೊಂಡು."**

ಈ ಕವನದ ಸಾಲುಗಳಲ್ಲಿ ಯುಗಾದಿಯನ್ನು ಕವಿ ನೋಡುವ ನೋಟ ಅದೆಷ್ಟು ವಿಭಿನ್ನ ಎನಿಸುತ್ತದೆ.

ಯುಗಾದಿಯ ಬಗ್ಗೆ ಹತ್ತಾರು ಕವನಗಳನ್ನು ಓದಿ, ನೂರಾರು ಭಾವಗಳನ್ನು ತಿಳಿದುಕೊಳ್ಳುವಂತಾದಾಗ, ನಾವೆಲ್ಲ ಬಾಲ್ಯದಿಂದ ಹಾಡಿಕೊಂಡು ಬಂದಿರುವ ವರಕವಿ ದ.ರಾ.ಬೇಂದ್ರೆಯವರ 'ಯುಗಾದಿ' ಕವನ ಸಾಲುಗಳು ಮನದಲ್ಲಿ ಮೂಡಿದವು.

**"ವರುಷಕೊಂದು ಹೊಸತು ಜನ್ಮ**
**ಹರುಷಕೊಂದು ಹೊಸತು ನೆಲೆಯು ಅಖಿಲ ಜೀವಜಾತಕೆ!**
**ಒಂದೆ ಒಂದು ಜನ್ಮದಲ್ಲಿ ಒಂದೆ ಬಾಲ್ಯ ಒಂದೆ ಹರೆಯ**
**ನಮಗದಷ್ಟೆ ಏತಕೆ?"**

ಕವಿ ಕವನದಲ್ಲಿ ಪ್ರಶ್ನಿಸುವಂತೆ ನನ್ನ ಮನಸ್ಸಿನಲ್ಲೂ ಮೂಡುವ ಈ ಪ್ರಶ್ನೆಗೆ ಜಿ.ಎಸ್.ಶಿವರುದ್ರಪ್ಪರವರ 'ಚೈತ್ರೋದಯ' ಲೇಖನದಲ್ಲಿ ಉತ್ತರ ಸಿಕ್ಕಿತ್ತು. "ಚೈತ್ರ ಅನ್ನುವುದು ಕೇವಲ 'ಋತು' ಅಲ್ಲ, ಅದು ಸೃಜನಶೀಲತೆಯ ಸಂಕೇತವೂ ಹೌದು. ಪ್ರತಿವರ್ಷದ ಚೈತ್ರದಲ್ಲೂ ಈ ಪ್ರಕೃತಿ ಹೊಸ-ಹೊಸತಾಗುವ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುತ್ತಲೇ ಬದುಕಿಗೆ ಅಗತ್ಯವಾದ ಚಲನಶೀಲತೆಯನ್ನು ಕಾಯ್ದುಕೊಂಡು ಬರುತ್ತಿದೆ. ಹೀಗೆ ಹೊಸ ಹೊಸತಾಗಿ ಹೊಮ್ಮುವುದೇ ನಿಜವಾದ ಸೃಜನಶೀಲತೆಯ ಲಕ್ಷಣ." ಪ್ರತಿ ವರುಷವೂ ಯುಗಾದಿ ಹಬ್ಬದ ಸಂಭ್ರಮದೊಂದಿಗೆ, ಪ್ರಕೃತಿಯಂತೆ ಹೊಸತನ್ನು ಕಾಣುತ್ತ ಸೃಜನಶೀಲರಾಗುವ ಸಂಕಲ್ಪ ನಮ್ಮದಾಗಲಿ. ■

# ಸಂದರ್ಶನ ದಾಸವಾಣಿಯ ಸುಮಧುರ ಗಾಯಕಿ ನಂದಿನಿ ರಾವ್ ಗುಜರ್



**ಪರಿಚಯ:**

ನಂದಿನಿ ರಾವ್ ಗುಜರ್, ಬಾಲ್ಯದಿಂದಲೇ ಸಂಗೀತದ ಒಲವನ್ನು ಹೊಂದಿ, ತಮ್ಮ ೧೨ನೇ ವಯಸ್ಸಿನಿಂದ ಶಾಸ್ತ್ರೀಯ ಸಂಗೀತದ ಕಾರ್ಯಕ್ರಮಗಳನ್ನು ನೀಡುತ್ತ ಬಂದಿದ್ದಾರೆ. ಬಹುತೇಕ ದಾಸರಪದಗಳನ್ನೇ ಹಾಡುವ ಇವರು 'ದಾಸವಾಣಿ'ಯ ಸುಮಧುರ ಗಾಯಕಿಯೆನಿಸಿಕೊಂಡಿದ್ದಾರೆ. ಝೀ ಮತ್ತು ಸುವರ್ಣ ಕನ್ನಡ ವಾಹಿನಿಗಳಲ್ಲಿ ನಿರೂಪಕರಾಗಿಯೂ ಸಂಗೀತ ಸೇವೆಯನ್ನು ಸಲ್ಲಿಸಿದ್ದಾರೆ. ಪ್ರತಿಷ್ಠಿತ 'ಕೆಂಪೇಗೌಡ ಪ್ರಶಸ್ತಿ' ಪಡೆಯುವರೊಂದಿಗೆ ಬಹಳಷ್ಟು ಪ್ರಶಸ್ತಿಗಳ್ನು ಪಡೆದಿದ್ದಾರೆ. ಸದ್ಯ ಪುಣೆಯಲ್ಲಿ ನೆಲೆಸಿದ್ದಾರೆ. ಫೆಬ್ರವರಿ ೨೦೧೯ ರಲ್ಲಿ ಅಮೆರಿಕಾ ಪ್ರವಾಸದಲ್ಲಿದ್ದ ನಂದಿನಿ ಅವರನ್ನು ಬಂದಾವನ ವಾಣಿ ಸಂಪಾದಕೀಯ ತಂಡ ಭೇಟಿ ಮಾಡಿ ಮಾತನಾಡಿದ್ದು ಹೀಗೆ......

**ಬೃಂದಾವನ ವಾಣಿ:** ನಾವು ನಿಮ್ಮನ್ನು ಓದುಗರಿಗೆ ಪರಿಚಯಿಸುವುದರ ಜೊತೆಗೆ ನೀವು ನಿಮ್ಮ ಸಂಗೀತ ಪಯಣದ ಪರಿಚಯವನ್ನು ಮಾಡಿಕೊಡ್ತೀರಾ?

**ನಂದಿನಿ:** ನನ್ನ ಸಂಗೀತ ಪಯಣದ ಪರಿಚಯವನ್ನು ಮಾಡಿಕೊಡಬೇಕಂದ್ರೆ, ನಾನು ಮಗುವಾಗಿದ್ದಾಗಿನಿಂದ ಅಸ್ಸಾಂ ರಾಜ್ಯದಲ್ಲಿ ಬೆಳೆದಿದ್ದೀನಿ. ನಾನು ಒಂದೂವರೆ ವರ್ಷದ ಪುಟ್ಟ ಹುಡುಗಿಯಾಗಿದ್ದಗಲೇ ಹಾಡೋಕೆ ಶುರು ಮಾಡಿದ್ನಂತೆ. ನಮ್ಮ ಮನೆಯಲ್ಲಿ ಯಾರೂ ಸಂಗೀತಗಾರರಿಲ್ಲ! ನಮ್ಮ ಮನೇಲಿ ನಾನು First Generation Musician. ಮೊದಲಿನಿಂದಲೂ ಮನೇಲಿ ಹಿಂದಿ ಚಿತ್ರಗೀತೆಗಳನ್ನ, ಲತಾ ಮಂಗೇಶ್ಕರ್, ಮಹಮ್ಮದ್ ರಫಿ, ಕೆ.ಎಲ್.ಸೈಗಲ್ ಅವರ ಹಾಡುಗಳನ್ನು ಯಾವಾಗಲೂ ಕೇಳ್ತಾಯಿದ್ರು. ಅದನ್ನೆಲ್ಲ ಕೇಳಿಸಿಕೊಂಡೇ ನಾನು ಹಾಡೋಕೆ ಶುರುಮಾಡಿದ್ದು. ಐದು ವರ್ಷದವಳಿದ್ದಾಗಲೆ ೧೦೦೦-೧೫೦೦ ಬಾಲಿವುಡ್ ಗೀತೆಗಳನ್ನ ಹಾಡ್ತಾಯಿದ್ದೆ, ಆಮೇಲೆ ಕರ್ನಾಟಕಕ್ಕೆ ಬಂದ ನಂತರ ಶಾಸ್ತ್ರೀಯ ಸಂಗೀತಾಭ್ಯಾಸ ಕಲೀಲಿಕ್ಕೆ ಪ್ರಾರಂಭಿಸಿದೆ. ಆಗ ಗುರುಗಳು ನನ್ನಲ್ಲಿನ ಪ್ರತಿಭೆಯನ್ನು ಗುರುತಿಸಿದರು. ಶಿವಮೊಗ್ಗದಲ್ಲಿ ವಿದ್ವಾನ್ ಶ್ರೀ ಪ್ರಸನ್ನ ವೆಂಕಟೇಶ್, ಭದ್ರಾವತಿಯಲ್ಲಿ ವಿದ್ವಾನ್ ಶ್ರೀ ಬಿ.ಆರ್.ಶ್ರೀಧರ್ ಅವರಲ್ಲಿ ಸಂಗೀತಾಭ್ಯಾಸ ಮಾಡಿದ್ದೀನಿ. ಕಾಲೇಜು ವಿದ್ಯಾಭ್ಯಾಸದ ಸಮಯದಲ್ಲಿ ವಿದೂಷಿ ನಾಗಮಣಿ ಶ್ರೀನಾಥ್ ಅವರ ಹತ್ರ ಸಂಗೀತಾಭ್ಯಾಸ ಮುಂದುವರೆಸಿದೆ. ಈಗ ಚೆನ್ನೈನಲ್ಲಿ ವಿದೂಷಿ ರಂಜನಿ ಗಾಯತ್ರಿ ಅವರ ಬಳಿ ಅಭ್ಯಾಸ ಮಾಡ್ತಿದ್ದೀನಿ.

ನಾನು ಹನ್ನೆರಡು ವರ್ಷದವಳಿದ್ದಾಗ, ನನ್ನ ಪ್ರತಿಭೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ಅರಂಗೇಟ್ರಂನಂತೆ ಒಂದು ಸ್ವಂತ ಕಾರ್ಯಕ್ರಮ ಕೊಟ್ಟಾಗ ಎಲ್ಲರಿಂದ ಮೆಚ್ಚುಗೆ ಸಿಕ್ಕಿತು. ಅಲ್ಲಿಂದ ಇಲ್ಲಿಯವರೆಗೆ ಸುಮಾರು 2000 ಕಾರ್ಯಕ್ರಮಗಳನ್ನು ಕೊಟ್ಟಿದ್ದೇನೆ. ಅಲ್ಲದೇ ನಾನು ಭಾರತದ ಬೇರೆ, ಬೇರೆ ರಾಜ್ಯಗಳಲ್ಲಿ ಬೆಳೆದದ್ದರಿಂದ ಕನ್ನಡವೂ ಸೇರಿದಂತೆ ಸುಮಾರು 12 ಭಾಷೆಗಳಲ್ಲಿ ನಿರರ್ಗಳವಾಗಿ ಹಾಡ್ತೀನಿ. ಇನ್ನೂ ಹೆಚ್ಚಿನ ಪ್ರಯತ್ನವನ್ನೂ ಮಾಡ್ತಿದ್ದೀನಿ.

(ಮುಂದಿನ ಪುಟಕ್ಕೆ)

# ಸಂದರ್ಶನ



**ಬೃಂದಾವನ ವಾಣಿ:** ನಿಮ್ಮ ಮನೆಯಲ್ಲಿ ಮೊದಲನೆ ಪೀಳಿಗೆಯ ಸಂಗೀತಗಾರ್ತಿ ಅಂದ್ರಲ್ಲ, ಶಾಸ್ತ್ರೀಯ ಸಂಗೀತದ ಅಷ್ಟೇನೂ ಹಿನ್ನೆಲೆಯಿಲ್ಲದ ವಾತಾವರಣದಲ್ಲಿ ನಿಮ್ಮ ವಿಶೇಷ ಪ್ರತಿಭೆಯನ್ನು ಗುರುತುಸಿ, ಪ್ರೋತ್ಸಾಹಿಸಿದ್ದು ಹೇಗೆ?

**ನಂದಿನಿ:** ಮೊದಲಿಗೆ ನಮ್ಮ ತಂದೆ-ತಾಯಿವರಿಗೆ ಸ್ವಲ್ಪ ಕಷ್ಟನೇ ಆಯ್ತು ಅನ್ನಬಹುದು. ಅವರಿಗೆ ಶಾಸ್ತ್ರೀಯ ಸಂಗೀತದ ಹೆಚ್ಚಿನ ಮಾಹಿತಿಯಿರಲಿಲ್ಲವಾದ್ದರಿಂದ ನನ್ನ ಗುರುಗಳು ತೋರಿಸಿದ ದಾರಿಯಲ್ಲೇ ನಡೆದೆ. ನನ್ನ ಸಂಗೀತಾಭ್ಯಾಸವೇ ಮುಂದೇನು ಮಾಡಬೇಕೆಂಬ ದಾರೀನ ತೋರಿಸುವಂತಾಯಿತು. Music just shows the way. ಮನೆಯಲ್ಲಿ ಸಂಗೀತದ ವಾತಾವರಣದಲ್ಲಿ ಬೆಳೆಯುವ ಸೆಕೆಂಡ್ ಜೆನರೇಶಗೆ ಯಾವಾಗಲೂ ಸಹಾಯವಾಗುತ್ತದೆ ಅನ್ನೋ ಮಾತು ಒಪ್ಪುವಂಥದ್ದೇ ಆಗಿದ್ದರೂ, ನನ್ನ ತಂದೆಯವರು ನಾನು ಸ್ವತಂತ್ರಳಾಗಿ ಬೆಳೆದು, ಆತ್ಮವಿಶ್ವಾಸನ ಹೆಚ್ಚಿಸಿಕೊಳ್ಳುವಲ್ಲಿ ಸಾಕಷ್ಟು ಶ್ರಮವಹಿಸಿದರೆನ್ನಬಹುದು. ಇದು ಮುಂದೆ ನಾನು ನನ್ನ ಕಾರ್ಯಕ್ರಮದ ಆಯೋಜಕರೊಂದಿಗೆ ಸ್ವತ್ರಂತ್ರವಾಗಿ ವ್ಯವಹರಿಸೋವಾಗ, ನಿರ್ಧಾರಗಳನ್ನು ತೊಗೊಳ್ಳೋವಾಗ ಸಹಾಯ ಆಯ್ತು. ಸ್ವ ಸಾಮರ್ಥ್ಯವೇ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ ಅನ್ನೋ ನಿಮ್ಮ ಮಾತು ನನ್ನ ವಿಷಯದಲ್ಲಿ ನಿಜವೆನಿಸಿದೆ. ಪರಿಶ್ರಮ ಮತ್ತು ನಿಯಮಿತ ಕಲಿಕೆಯೇ ನಮ್ಮ ಯಶಸ್ಸಿನ ಹಿಂದಿರುತ್ತದೆ. ಅಲ್ಲದೇ ಅದು ಎಲ್ಲ ಕಲೆಗೂ ಅನ್ವಯಿಸುತ್ತದೆ.

**ಬೃದಾವನ ವಾಣಿ:** ನೀವು ಭಾರತದ ಬೇರೆ, ಬೇರೆ ರಾಜ್ಯಗಳಲ್ಲಿ ಇದ್ರಿ ಅಂತ ಹೇಳಿದ್ರಿ, ಹಾಗಾಗಿ ನೀವು ಶಾಸ್ತ್ರೀಯ ಸಂಗೀತಾಭ್ಯಾಸ ಪ್ರಾರಂಭಿಸಿದಾಗ ಮೊದಲಿಗೆ ಹಿಂದೂಸ್ತಾನಿ ಸಂಗೀತವನ್ನು ಕಲಿತು ನಂತರ ಕರ್ನಾಟಕ ಸಂಗೀತವನ್ನು ಕಲಿತದ್ದೋ? ಅಥವಾ ಮೊದಲಿಗೇ ಕರ್ನಾಟಕ ಸಂಗೀತ ಕಲಿತದ್ದೋ?

**ನಂದಿನಿ:** ನಾನು ಮೊದಲಿಗೆ ಕರ್ನಾಟಕ ಸಂಗೀತವನ್ನೇ ಕಲಿಯಲು ಪ್ರಾರಂಭಿಸಿದೆ. ಆದ್ರೆ ಹಿಂದೂಸ್ತಾನಿ ಸಂಗೀತವನ್ನು ತುಂಬಾ ಕೇಳ್ತಿದ್ದೆ. ಅಲ್ಲದೇ ಶಿವಮೊಗ್ಗದಲ್ಲಿ ಶ್ರೀ ವೇಣುಗೋಪಾಲ ಅವರ ಹತ್ತಿರ ಹಿಂದೂಸ್ತಾನಿ ಸಂಗೀತವನ್ನು ಕೇಳಿಲಿಕ್ಕೆಂದೇ ಹೋಗ್ತಾಯಿದ್ದೆ. ಮತ್ತೆ ಭಾವಗೀತೆಗಳನ್ನೂ ಕಲಿತೆ. ಹಿಂದೂಸ್ತಾನಿ ಗಾಯನವನ್ನು ಕೇಳಿದಂತೆಲ್ಲ ಆ ಶೈಲಿ ನನಗೆ ಇಷ್ಟವಾಗ್ತಾ ಹೋಯ್ತು. ಈಗ ಪುಣೆಯಲ್ಲಿ ವಾಸವಾಗಿರುವ ನನಗೆ ಅಲ್ಲಿ ಹಿಂದೂಸ್ತಾನಿ ಸಂಗೀತವನ್ನು ಕೇಳುವ ಹೆಚ್ಚಿನ ಅವಕಾಶಗಳು ಸಿಗುತ್ತವೆ. ನನ್ನ ಹಾಡುಗಾರಿಕೆಯಲ್ಲಿ ಹಿಂದೂಸ್ತಾನಿ ಗಾಯನ 'ಝಲಕ್' ಕೇಳಿಬರುತ್ತದೆ ಅನ್ನುವ ಅಭಿಪ್ರಾಯವಿದೆ. ನನಗೆ ತಿಳಿದಂತೆ ನಮ್ಮ ಗುರುಗಳನ್ನು ಸಂಪೂರ್ಣವಾಗಿ ಅನುಕರಣೆ ಮಾಡದೇ ನಮ್ಮದೇ ಒಂದು ಶೈಲಿಯಲ್ಲಿ ಹಾಡಿದಾಗ ಸಂತೋಷ ಅನ್ಸುತ್ತೆ. ಗುರುಗಳ ಅಭಿಪ್ರಾಯವೂ ಇದೇ ಆಗಿರುತ್ತದೆ. ಆಗಲೇ ನಾವು ಸಂಗೀತಗಾರರೆನಿಸಿಕೊಳ್ಳುತ್ತೇವೆ.

**ಬೃಂದಾವನ ವಾಣಿ:** ನಿಮ್ಮ ಕಾರ್ಯಕ್ರಮದಲ್ಲಿ ಯಾವೆಲ್ಲ ಹಾಡುಗಳನ್ನು ಹಾಡ್ತೀರಾ? ಉದಾಹರಣೆಗೆ, ಬರೀ ದಾಸರ ಪದಗಳನ್ನೋ ಅಥವಾ ತ್ಯಾಗರಾಜರ ಕೃತಿಗಳನ್ನೋ ಇಲ್ಲ, ಎಲ್ಲ ರೀತಿಯ ಹಾಡುಗಳನ್ನು ಸಮ್ಮಿಶ್ರ ಮಾಡಿಕೊಂಡು ಕಾರ್ಯಕ್ರಮವನ್ನು ಕೊಡ್ತಿರಾ?

**ನಂದಿನಿ:** ನಾನು ದಾಸರ ಪದಗಳನ್ನೇ ಹಾಡ್ತೀನಿ. ಹೆಚ್ಚಾಗಿ ನಾನು ಕನ್ನಡದ ಪ್ರೇಕ್ಷಕರಿಗೆಂದೇ ಕಾರ್ಯಕ್ರಮಗಳನ್ನು ಕೊಡ್ತೀನಿ. ಅದಲ್ಲದೇ ದಾಸರ ಪದಗಳನ್ನು ಹಾಡೋಕೆ ಒಂದು ವೈಯಕ್ತಿಕ ಕಾರಣವೂ ಇದೆ. 2010ರಲ್ಲಿ ನನ್ನ ಧ್ವನಿಗೆ ವಿರಾಮ ಕೊಡದೇ ತುಂಬಾ ಹಾಡುಗಳನ್ನು ಹೇಳ್ತಾಯಿದ್ದೆ. ಆಗ ಧ್ವನಿಗೆ ತೊಂದರೆಯಾಗಿ ಆರು ತಿಂಗಳ ಕಾಲ ಹಾಡಲೇಬಾರದು ಅಂತ ವೈದ್ಯರು ಸಲಹೆ ಕೊಟ್ಟಿದ್ರು. ಅದು ಒಬ್ಬ ಸಂಗೀತಗಾರ್ತಿಯಾದ ನನಗೆ ಪರೀಕ್ಷೆಯ ಕಾಲ ಅನ್ನಿಸಿಬಿಟ್ಟಿತ್ತು.

(ಮುಂದಿನ ಪುಟಕ್ಕೆ)

# ಸಂದರ್ಶನ



(ಮುಂದುವರೆದುದು)

ದೇವರ ಸೇವೆಯಲ್ಲಿ ತೊಡಗಿಕೊಂಡೆ. ಕೆಲವು ತಿಂಗಳ ನಂತರ ಕೊಟ್ಟ ಕಾರ್ಯಕ್ರಮದಲ್ಲಿ ಭಕ್ತಿ ಸಂಗೀತವನ್ನು ಹಾಡಿದಾಗ, ಧ್ವನಿಯಲ್ಲಿ ಯಾವ ತೊಂದರೆಯೂ ಕಂಡು ಬರಲಿಲ್ಲ. ಅದನ್ನೇ ಮುಂದುವರೆಸಿಕೊಂಡು ಹೋದೆ. ಅಂದಿನಿಂದ ಇಂದಿನವರೆಗೆ ಧ್ವನಿಯಲ್ಲಿ ಯಾವ ತೊಂದರೆನೂ ಬಂದಿಲ್ಲ. ಭಕ್ತಿ ನನ್ನ ನಂಬಿಕೆಯಾಗಿದೆ.

**ಬೃಂದಾವನ ವಾಣಿ:** ಭಕ್ತಿಯನ್ನು ಅರ್ಥಮಾಡಿಕೊಂಡು ಹಾಡ್ದಾಗ ಅದು ಹೆಚ್ಚು ಪ್ರಭಾವ ಬೀರುತ್ತೆ ಅಂತೀರಾ?

**ನಂದಿನಿ:** ಖಂಡಿತವಾಗಿ. ಅದು ನನ್ನ ಅನುಭವಕ್ಕೆ ಬಂದಿದೆ. ನನ್ನ ಮುಂದಿನ ಪ್ರಾಜೆಕ್ಟ್ ಸಹ ಅದೇ ಆಗಿದೆ. ಬೇರೆ- ಬೇರೆ ರಾಜ್ಯಗಳ, ಬೇರೆ-ಬೇರೆ ಶೈಲಿಯ ಭಕ್ತಿ ಸಂಗೀತವನ್ನು ತಿಳಿದುಕೊಂಡು ಅದನ್ನು ಹಾಡಬೇಕು.ಉದಾಹರಣೆಯಾಗಿ, ಪಂಜಾಬಿನ ಗುರ್ಬಾನಿಗೂ, ನಮ್ಮ ದಾಸರ ಪದಗಳಿಗೂ ಹೇಗೆ ಹೋಲಿಕೆಯಿದೆ ಎನ್ನುವುದು ಮತ್ತು ಇತ್ಯಾದಿ..

**ಬೃಂದಾವನ ವಾಣಿ:** ನೀವು ದಾಸ ಸಾಹಿತ್ಯ ಅಂದಾಗ, ಅಲ್ಲಿ ಸಾಹಿತ್ಯಕ್ಕೆ ಮಹತ್ವವಿರಬೇಕೋ ಅಥವಾ ಹಾಡುಗಾರಿಕೆಗೆ ಒತ್ತು ಕೊಡಬೇಕೋ ಇಲ್ಲ ಎರಡರ ಮಿಶ್ರಣವಿರಬೇಕೋ? ನಿಮ್ಮ ಅಭಿಪ್ರಾಯವೇನು?

**ನಂದಿನಿ:** ಸಂಗೀತಗಾರರಾಗಿ ಸಾಹಿತ್ಯಕ್ಕೆ ಮಹತ್ವವನ್ನು ಕೊಡಬೇಕಾಗಿರುವುದು ನಮ್ಮ ಜಾವಾಬ್ದಾರಿ. ಹಾಡುಗಾರಿಕೆಯಲ್ಲಿ ಸಾಹಿತ್ಯದ ಬಗ್ಗೆ ತುಂಬಾ ಗಮನವಿರಬೇಕು. ಅದರ ಜೊತೆಗೆ ಕೇಳುಗನಿಗೆ ನಾವು ಕಲಿತ ವಿದ್ವತ್ತಿನ ಪರಿಚಯವೂ ಆಗಬೇಕು. ವಾದ್ಯಗೋಷ್ಠಿಗಳಲ್ಲಿ ಸಾಹಿತ್ಯದ ಅವಶ್ಯಕತೆಯಿರುವುದಿಲ್ಲ. ಆದರೆ ಭಾವಗೀತೆ, ದಾಸರ ಪದಗಳನ್ನು ಹಾಡುವಾಗ, ನಾವು ಸಾಹಿತ್ಯವನ್ನು ಅರ್ಥ ಮಾಡಿಕೊಂಡು ಹಾಡಿದರೆ, ಕೇಳುಗನಿಗೂ ಅದನ್ನು ತಲುಪಿಸಬಹುದು.

**ಬೃಂದಾವನ ವಾಣಿ:** ನೀವು ಕಾರ್ಯಕ್ರಮದಲ್ಲಿ ಹಾಡಲಿರುವ ಹಾಡಿನ ಮಾಹಿತಿಯನ್ನು, ಹಾಡಿನ ಭಾವವನ್ನು ಕೇಳುಗರೊಂದಿಗೆ ಹಂಚಿಕೊಳ್ತೀರಾ?

(ಮುಂದಿನ ಪುಟಕ್ಕೆ)

# ಸಂದರ್ಶನ

**ನಂದಿನಿ ರಾವ್ ಗುಜರ್ ಸಂದರ್ಶನ (ಮುಂದುವರೆದುದು)**

**ನಂದಿನಿ:** ನನ್ನ ಕಛೇರಿಗಳಲ್ಲಿ ಮಾತು ಜಾಸ್ತಿಯಿರುತ್ತದೆ ಅನ್ನುವ ಅಭಿಪ್ರಾಯವಿದೆ. ನಾನು ಹಾಡುವ ರಾಗದ ಬಗ್ಗೆ ಮಾಹಿತಿ ಕೊಡುವುದರ ಜೊತೆಗೆ ಅದರ ಭಾವವನ್ನೂ, ಹಿನ್ನೆಲೆಯನ್ನೂ ಹೇಳುತ್ತ ಪ್ರೇಕ್ಷಕರೊಂದಿಗೆ ಸ್ಪಂದಿಸಬಹುದು. ಕೆಲವು ಸಲ ಪ್ರೇಕ್ಷಕರೂ ನನ್ನೊಂದಿಗೆ ದನಿಗೂಡಿಸುತ್ತಾರೆ. ಇತ್ತೀಚಿನ ಕಾರ್ಯಕ್ರಮಗಳಲ್ಲಿ ಹೀಗೆ ಮಾಡ್ತಿದ್ದೀನಿ.

**ಬೃಂದಾವನ ವಾಣಿ:** ಸಂಗೀತ ಸಾಧನೆಯೊಂದಿಗೆ ನಿಮ್ಮ ಸಂಸಾರವನ್ನು ಹೇಗೆ ನಿಭಾಯಿಸುತ್ತೀರಿ?
**ನಂದಿನಿ:** ನನ್ನ ಕುಟುಂಬದಿಂದ ಸಪೋರ್ಟ್ ಚೆನ್ನಾಗಿದೆ. ಏಳು ವರ್ಷದ ಒಬ್ಬ ಮಗನಿದ್ದಾನೆ. ನನ್ನ ತಾಯಿ, ನನ್ನ ಪತಿಯ ನಿರಂತರ ಸಹಾಯ, ಸಹಕಾರ ನನಗಿರೋದ್ರಿಂದ ಈ ಸಂಗೀತ ಸಾಧನೆ ಮುಂದುವರಿತಾ ಇದೆ.

**ಬೃಂದಾವನ ವಾಣಿ:** ಇಂದಿನ ಪೀಳಿಗೆಯ ಮಕ್ಕಳಲ್ಲಿ ಸಂಗೀತಾಸಕ್ತಿಯನ್ನು ಹೇಗೆ ಬೆಳೆಸಬೇಕು ಅಂತೀರಾ?
**ನಂದಿನಿ:** ಈ ನಿಟ್ಟಿನಲ್ಲಿ ನಾನು ಮಕ್ಕಳನ್ನು ದೂಷಿಸದೇ, ಅವರ ತಂದೆ-ತಾಯಿಯರಿಗೆ ಕೆಲವು ಮಾತುಗಳನ್ನು ಹೇಳೋಕೆ ಇಷ್ಟ ಪಡ್ತೀನಿ. ಮಕ್ಕಳಿಗೆ ಆದಷ್ಟು ಮಟ್ಟಿಗೆ ಶಾಸ್ತ್ರೀಯ ಸಂಗೀತವನ್ನು ಕೇಳುವ ಅವಕಾಶವನ್ನು ಕೊಡಬೇಕು. ಸಣ್ಣ-ಪುಟ್ಟ ಆಸೆ ತೋರಿಸಿಯಾದರೂ ಅವರನ್ನು ಸಂಗೀತ ಕಛೇರಿಗಳಿಗೆ ಕರೆದುಕೊಂಡು ಹೋಗಬೇಕು. ನಾನೂ ನನ್ನ ಮಗನ ಬಗ್ಗೆ ಈ ಪ್ರಯತ್ನವನ್ನೇ ಮಾಡ್ತಾ ಇದ್ದೀನಿ. ನಾವು ಮಕ್ಕಳಿಗೆ ಒಳ್ಳೆಯ ವಿಚಾರವನ್ನು ತಿಳಿಸಿಕೊಟ್ಟಲ್ಲಿ ಅವರ ಆಯ್ಕೆಯೂ ಒಳ್ಳೆಯದಾಗಿರುತ್ತದೆ ಅನ್ನುವುದು ನನ್ನ ನಂಬಿಕೆ.

**ಬೃಂದಾವನ ವಾಣಿ:** ನಿಮ್ಮ ಮುಂದಿನ ಯೋಜನೆಗಳೇನು? ನಿಮ್ಮ ಸಂಗೀತ ಸಾಧನೆಯನ್ನು ಹೇಗೆ ಮುಂದುವರೆಸಿಕೊಂಡು ಹೋಗುವ ಯೋಚನೆಯಿದೆ?
**ನಂದಿನಿ:** ಸಂಗೀತ ಸಾಧನೆ ನಿರಂತರ. ಕಲೀಲಿಕ್ಕೆ ತುಂಬಾ ಇದೆ. ಮಕ್ಕಳಿಗೆ ಸಂಗೀತ ಪಾಠ ಮಾಡ್ತಿದ್ದೀನಿ. ಕಾರ್ಯಾಗಾರಗಳನ್ನು ಮಾಡ್ತೀನಿ.

**ಬೃಂದಾವನ ವಾಣಿ:** ಹಿನ್ನೆಲೆ ಗಾಯನ ಮಾಡಿದ್ದೀರ? ಮಾಡುವ ಯೋಚನೆ ಇದೆಯಾ?
**ನಂದಿನಿ:** ಮೊದಲೆಲ್ಲ ಟ್ರ್ಯಾಕ್ಸ್ ಹಾಡಿದ್ದೀನಿ. ಆದ್ರೆ ನನಗೆ ಭಕ್ತಿ ಸಂಗೀತ ಇಷ್ಟ ಅಂತ ಅದನ್ನೇ ಹೆಚ್ಚು ಹೆಚ್ಚಾಗಿ ಮಾಡ್ತೀನಿ. ನನ್ನ ಮನಸ್ಸಿಗೆ ಸಂತೋಷ ಕೊಡುವಂಥ ಗೀತೆಗಳನ್ನು ಹಾಡಬೇಕು ಅನ್ನೋದು ನನ್ನ ಅಭಿಪ್ರಾಯ. ಆ ಗೀತೆಗಳಿಗೆ ಮನಸ್ಸು ಸ್ಪಂದಿಸಬೇಕು. ಮನಸ್ಸಿಗೆ ಮುದನೀಡುವ ಸಾಹಿತ್ಯದ ಭಾವಗೀತೆಗಳನ್ನು ಹಾಡ್ತೀನಿ. ಉದಾಹರಣೆಗೆ ಭಾವಗೀತೆಗಳಲ್ಲಿ ನನಗೆ ಜಿ.ಎಸ್.ಶಿವರುದ್ರಪ್ಪರವರ "ಎಲ್ಲೋ ಹುಡುಕಿದೆ ಇಲ್ಲದ ದೇವರ ..." ಹಾಡು ಮಗುವಾಗಿದ್ದಾಗಿನಿಂದ ತುಂಬಾ ಇಷ್ಟ.



**ಬೃಂದವನ ವಾಣಿ:** ನಮ್ಮೊಂದಿಗೆ ಮಾತನಾಡಿ ತಮ್ಮ ಸಂಗೀತ ಸಾಧನೆಯ ಬಗ್ಗೆ ತಿಳಿಸಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು.
**ನಂದಿನಿ:** ಧನ್ಯವಾದಗಳು. ■



**ಪ್ರವಾಸ ಕಥನ**

# ಕೈಲಾಸ ಮಾನಸ ಸರೋವರ ಯಾತ್ರೆ - ಒಂದು ಜೀವನಾನುಭವ ಭಾಗ ೨



***ಅಜೇಯ ರಾವ್***

**ಹಿಂದಿನ ಸಂಚಿಕೆಯಿಂದ..**

ಮಾನಸರೋವರದ ದಡದ ಮಡ್-ಹೌಸ್‌ಗಳಲ್ಲಿ ಉಳಿದ ನಾವು ಬೆಳಿಗ್ಗೆ ಎದ್ದು ಭಾರತದಿಂದ ತಂದ ಹೋಮ ಹವನ ಸಾಮಗ್ರಿಗಳೊಂದಿಗೆ ಕುಳಿತು ಮೃತ್ಯುಂಜಯ ಹೋಮಃ ಮಾಡಿದೆವು.. ಮಂತ್ರ ಘೋಷಗಳು ಮೊಳಗುತ್ತಿದ್ದಂತೆ ಉಳಿದ ಗುಂಪಿನವರೂ ಬಂದು ಸೇರಿ ನಮ್ಮ ಹೋಮವು ಸಾಂಗವಾಗಿ ನೆರವೇರಿತು. ಶಿವನಲ್ಲಿ ಕೈಲಾಸ ಪರಿಕ್ರಮವನ್ನು ಸುಗಮವಾಗಿ ನಡೆಸಿಕೊಡಲೆಂದು ಪ್ರಾರ್ಥಿಸಿದೆವು. ಎದ್ದಾಗ ಮೋಡ ಕವಿದಿತ್ತಾದರೂ, ಅದೇನೋ ಆಶೀರ್ವಾದವೋ ಎಂಬಂತೆ ಮೋಡಗಳು ಹರಡಿ ಹೋಗತೊಡಗಿದವು. ಈ ಆಶೀರ್ವಾದದೊಂದಿಗೆ ನಾವು ಕೈಲಾಸ ಪರ್ವತದೆಡೆಗೆ ಹೊರಟೆವು. ಮಾನಸ ಸರೊವರದ ಉತ್ತರ ದಿಕ್ಕಿನಲ್ಲಿ ಕೈಲಾಸ ಕೈಲಾಸ ಪರ್ವತದ ಬೇಸ್ ಕ್ಯಾಂಪ್ ಆದ ಈ ಹಳ್ಳಿ ಭಾರತೀಯ ಹಾಗೂ ತಿಬೇಟಿ ಪ್ರವಾಸಿಗರಿಂದ ದೊಡ್ಡ ಊರಾಗಿ ಅಭಿವೃದ್ಧಿಸುತ್ತಿದೆ. ಆರೋಗ್ಯದ ಕಾರಣಗಳಿಂದ ಕೈಲಾಸಪರಿಕ್ರಮ ಮಾಡಲಾಗದಿರುವವರು ಉಳಿದವರು ಪರಿಕ್ರಮ ಮುಗಿಸುವವರೆಗೂ ಮೂರು ದಿನ ಇಲ್ಲಿ ತಂಗುತ್ತಾರೆ. ದಾರ್ಚೆನ್ ಇಂದ ೮ ಕಿಮೀ ದೂರದಲ್ಲಿ ಕೈಲಾಸ ಪರ್ವತದ ಬುಡದಲ್ಲಿ ಯಮದ್ವಾರ ಎಂಬ ಪುಣ್ಯಸ್ಥಳವಿದೆ. ಅಲ್ಲಿಯವರೆಗೂ ನಮ್ಮನ್ನು ಬಸ್‌ನಲ್ಲಿ ಕರೆದೊಯ್ದರು. ಕೈಲಾಸ ಪರ್ವತದ ತಪ್ಪಲಿಗೆ ತಂದು ನಿಲ್ಲಿಸಿದಾಗ ನಮ್ಮೆಲ್ಲರ ಕಣ್ಣಲ್ಲಿ ಆನಂದ ಭಾಷ್ಪ ಹರಿಯುತ್ತಿತ್ತು. ಯಮದ್ವಾರ ಬಹಳ ವಿಶೇಷ ಸ್ಥಳ. ಯಮದ್ವಾರಕ್ಕೆ ಮೂರು ಸುತ್ತು ಬಂದು ಯಮದ್ವಾರ ಪ್ರವೇಶಿಸಿದರೆ ಈ ಜನ್ಮವನ್ನು ಸಾಂಕೇತಿಕವಾಗಿ ಮುಗಿಸಿದಂತೆ.

**(ಮುಂದಿನ ಪುಟಕ್ಕೆ)**



(೧)

**(ಮುಂದುವರೆದುದು)**

ಅದಾದ ಮೇಲೆಯೇ ಕೈಲಾಸದೆಡೆಗೆ ಸಾಗಲು ಸಾಧ್ಯ ಎನ್ನುತ್ತಾರೆ.. ಸಮುದ್ರಮಟ್ಟದಿಂದ ೧೫೦೦೦ ಅಡಿ ಎತ್ತರದಲ್ಲಿರುವ ಈ ಜಾಗದಲ್ಲಿ ನಿಂತು ನಾವು ಕೈಲಾಸ ಪರ್ವತದ ದಕ್ಷಿಣ ಮುಖದ ದರ್ಶನ ಪಡೆದೆವು. ಇಡೀ ಕೈಲಾಸ ಪರ್ವತ ಒಂದು ಏಕಶಿಲೆಯಂತಿದ್ದು ಲಿಂಗದಾಕಾರದಲ್ಲಿದೆ.. ಇದರ ಶಿಖರಕ್ಕೇರುವ ಮೆಟ್ಟಲೋ ಎಂಬಂತಹ ಆಕಾರ ಕಾಣ ಸಿಗುತ್ತದೆ. ಸೂರ್ಯನ ಪ್ರಭೆವೋ, ಶಿವನ ಅನುಗ್ರಹವೋ ಶಿಖರ ಹೊಳೆಯುತ್ತಿತ್ತು.

**ಕೈಲಾಸ ಪರಿಕ್ರಮ - ದಿನ ೧:** ಅಲ್ಲಿಂದ ಕೈಲಾಸ ಪರಿಕ್ರಮ ಪ್ರಾರಂಭವಾಯಿತು. ಕೈಲಾಸ ಪರ್ವತದ ೫೦ಕಿಮೀ ದೂರದ ಪರಿಕ್ರಮ ನಾವು ಮೂರುದಿನದಲ್ಲಿ ಕ್ರಮಿಸಬೇಕು. ಕೆಲವರು ಕಾಲ್ನಡಿಗೆಯಲ್ಲಿ ಕ್ರಮಿಸಿದರೆ ಕೆಲವರು ಕುದುರೆಯಲ್ಲಿ ಕ್ರಮಿಸುತ್ತಾರೆ. ಹಿಂದುಗಳಿಗೂ, ಬೌದ್ಧರಿಗೂ, ಜೈನರಿಗೂ ಅತಿಶ್ರೇಷ್ಠವಾದ ಈ ಪರಿಕ್ರಮ ಮುಕ್ತಿದಾಯಕ. ಅತಿ ಎತ್ತರದ ಈ ಪರ್ವತಚಾರಣ ಬಹಳ ಕಷ್ಟ, ಆದರೆ ಇದನ್ನು ಕೆಲವು ಟಿಬೇಟಿಯನ್ನರು ಒಂದೇ ದಿನದಲ್ಲಿ ಮುಗಿಸಿದರೆ ಕೆಲವರು ಸಾಷ್ಟಾಂಗ ಪ್ರಣಾಮಿಸುತ್ತಲೇ ಮುಗಿಸುತ್ತಾರೆ. ನಮ್ಮ ೧೭ ಜನರ ಗುಂಪಲ್ಲಿ ಆರೋಗ್ಯ/ವಯಸ್ಸಿನ ಕಾರಣಗಳಿಂದ ೫ ಜನರು ಅಲ್ಲೇ ಉಳಿದರೆ, ೯ ಜನರು ಕುದುರೆಯಲ್ಲಿ ಪರಿಕ್ರಮ ಆರಂಭಿಸಿದರು. ಆರೋಗ್ಯ ಹದಗೆಟ್ಟಿದ್ದ ಕಾರಣ ನಾನು - ಅನುಮಾನಿಸಿದ್ದೆನಾದರೂ ಕೊನೆಗೆ ಕಾಲ್ನಡಿಗೆಯಲ್ಲಿ ಪರಿಕ್ರಮಿಸು-ವುದೆಂದು ಶಿವನ ನಿರ್ದೇಶದಂತೆ ತೀರ್ಮಾನಿಸಿದೆ. ನಾನೂ, ಸ್ವಾಮೀಜಿ ಮತ್ತು ದುಬೈನ ಅಮರ್ ಎಂಬವರು ಕಾಲ್ನಡಿಗೆಯಲ್ಲಿ ಹೊರಟೆವು.

ಮೊದಲ ದಿನ ೧೪ ಕಿಮೀ ಕ್ರಮಿಸಬೇಕು. ದಾರಿ ಸುಗಮವಾಗಿದ್ದರೂ ಎತ್ತರಕ್ಕೇರುತ್ತಾ ಹೋದಂತೆ ಉಸಿರಾಡಲು ಕಷ್ಟವಾಗುತ್ತದೆ, ಹೆಜ್ಜೆ ಚಿಕ್ಕದಾಗುತ್ತದೆ, ಹೊತ್ತ ಭಾರ ದ್ವಿಗುಣವೆನಿಸುತ್ತದೆ. ಕೈಲಾಸ ಪರ್ವತದ ಹಲವು ಭಾಗಗಳಲ್ಲಿ ಅಸಂಖ್ಯ ದೇವದೇವತೆಗಳಿದ್ದಾರೆ. ಗಣಪತಿ, ನಂದಿ, ಶಿವನಾಗ, ಎಲ್ಲರ ದರುಶನ ಮಾಡುತ್ತಾ ಶಿವ ಭಜನೆ ಮಾಡುತ್ತಾ ನಾವು ಮುಂದೆ ಸಾಗಿದೆವು. ಕೈಲಾಸ ಪರ್ವತದ ಪಶ್ಚಿಮ ಮುಖದಲ್ಲಿ ನಿಂತು ಶಿವನನ್ನು ಪ್ರಾರ್ಥಿಸಿದೆವು. ದಾರಿಪ್ರಯಾಣಕ್ಕೆ ಊಟ ಕಟ್ಟಿಕೊಂಡಿದ್ದೆವಾದರೂ, ಶಿವನಿಚ್ಛೆ ನನ್ನ ಉಪವಾಸದಲ್ಲೇ ಇತ್ತೇನೊ, ಹೊಟ್ಟೆಯಲ್ಲಿ ಏನೂ ನಿಲ್ಲದ ಕಾರಣ, ಬರಬರುತ್ತಾ ನಿಃಶ್ಯಕ್ತಿಯಿಂದ ನಾನು ಉಳಿದಿಬ್ಬರಿಂದ ಹಿಂದುಳಿದೆ. ಮೃತ್ಯುಂಜಯ ಜಪವನ್ನು ಪಠಿಸುತ್ತಾ ಸಾಗಿದ ನನಗೆ ಅದೇನೊ ಶಿವನೇ ನನ್ನ ಜತೆಯಿದ್ದ ಶಾಂತಿಯಿತ್ತು, ಶಕ್ತಿಯಿತ್ತು. ಕೊನೆಗೂ ನಾನು ೧೬ಸಾವಿರ ಎತ್ತರದಲ್ಲಿರುವ ದೇರಾಫುಕ್ ಕ್ಯಾಂಪ್ ತಲುಪಿದೆ. ಅಲ್ಲಿ ತಲುಪುತ್ತಿದ್ದಂತೆ ಕಾಣುವುದು ಕೈಲಾಸ ಪರ್ವತದ ಉತ್ತರ ಮುಖ. ಅತ್ಯಂತ ಪ್ರಶಸ್ಥವಾದ ಈ ಸ್ಥಳದಿಂದ ಕೈಲಾಸದ ಚರಣ ಸ್ಪರ್ಶಿಸಬಹುದು.

**(ಮುಂದಿನ ಪುಟಕ್ಕೆ)**

# ಪ್ರವಾಸ ಕಥನ

**ಮುಂದುವರೆದುದು....**

ಮೇರುವಿನಂತೆ ಎದ್ದುನಿಂತ ಪರ್ವತದ ಮೇಲೆ ಶಿವ-ಪಾರ್ವತಿಯರು ನಿಂತು ನಮ್ಮೆಲ್ಲರನ್ನು ಆಶೀರ್ವದಿಸಿದಂತಿತ್ತು. ಅಲ್ಲಿಯೇ ಕುಳಿತು ಶಿವನ ಜಪ ಮಾಡಿದ ಸಮಾಧಾನ ಈ ಜನ್ಮಕ್ಕೆ ಸಾಕು. ಅಮ್ಮನ ಆರೋಗ್ಯ ಕಾಪಾಡಿದ್ದಕ್ಕೆ ಶಿವನಿಗೆ ನಾನು ಸಾಷ್ಟಾಂಗ ವಂದಿಸಿ "ಥ್ಯಾಂಕ್ ಯೂ ದೇವಾ" ಎಂದು ಬೇಡಿಕೊಂಡೆ.

ಕ್ಯಾಂಪ್ಗೆ ಬಂದು ಜ್ವರದೊಂದಿಗೆ ಮಲಗಿದ್ದ ನನಗೆ ಡಾ|ರಾಕೇಶ್‌ಜಿ ಆಂಟಿಬಯಟಿಕ್ ಹಾಗೂ ಎಲೆಕ್ಟ್ರಾಲ್ ಗಳನ್ನು ಕೊಟ್ಟು ಸಹಕರಿಸಿದರು. ಕ್ಯಾಂಪ್ ತಲುಪಿದ ಉಳಿದವರ ಸ್ಥಿತಿಯೂ ಕಷ್ಟದಲ್ಲೇ ಇತ್ತು.ಸಾಕಷ್ಟು ಜನ ಯಾತ್ರಿಗಳು ಇಲ್ಲಿಂದಲೇ ವಾಪಸ್ ಹೊರಡಬೇಕಾಗುತ್ತದೆ. ರಾತ್ರಿ ಬೆಳಗಾಗುವಲ್ಲಿ ಅತಿಎತ್ತರದ ಹವಾಮಾನ ತೊಂದರೆಗಳಿಂದ, ದೇಹದಲ್ಲಿ ಆಮ್ಲಜನಕದ ಕೊರತೆಗಳಿಂದ ನಮ್ಮ ಗುಂಪಿನ ೭ ಜನ ಆಪತ್ಕಾಲೀನ ವಾಹನ ತರಿಸಿ ವಾಪಸ್ ಹೊರಡಬೇಕಾಯಿತು. ನನ್ನ ಪರಿಸ್ಥಿತಿಯೂ ಒಳ್ಳೆಯದಿಲ್ಲದಿದ್ದರೂ ದೇಹದಲ್ಲಿ ಆಮ್ಲಜನಕದ ಪ್ರಮಾಣ ಎಲ್ಲವೂ ಸರಿ ಇದ್ದದ್ದರಿಂದ ನನಗೆ ಮುಂದೆ ಹೊರಡುವ ಅವಕಾಶವಿತ್ತು. ಡಾ|ರಾಕೇಶ್‌ಜಿ ಅವರು ಕೊಟ್ಟ ಔಷದಿಗಳಿಲ್ಲದೇ ಹೋದಲ್ಲಿ ನನಗೆ ಖಂಡಿತಾ ಯಾತ್ರೆಯನ್ನು ಪೂರೈಸ- ಲಾಗುತ್ತಿರಲಿಲ್ಲ. ಭಾರ ಕಡಿಮೆ- ಯಾಗಿಸಿಕೊಳ್ಳಲು, ನನ್ನೆಲ್ಲಾ ಲಗೇಜು ಕ್ಯಾಮೆರಾಗಳನ್ನು ಅಲ್ಲಿಂದಲೇ ವಾಪಸು ಕಳುಹಿಸಿದೆ.

**ಕೈಲಾಸ ಪರಿಕ್ರಮ - ದಿನ ೨:** ದೇರಾಫುಕ್‌ನಲ್ಲಿ ಬೆಳಿಗ್ಗೆ ಸೂರ್ಯನ ಹೊಂಗಿರಣಗಳು ಕೈಲಾಸ ಪರ್ವತದ ಮೇಲೆ ಬಿದ್ದಾಗ ಇಡೀ ಪರ್ವತವೇ ಸ್ವರ್ಣಮಯವಾಗುವ ದೃಶ್ಯ ನೋಡಿಯೇ -



(೨)

ಆನಂದಿಸಬೇಕು, ಈ ದೃಶ್ಯವನ್ನು ಕಣ್ತುಂಬಿಕೊಂಡ ನಾವು ಉಳಿದ ೫ ಜನ ಮುಂದಕ್ಕೆ ಪ್ರಯಾಣ ಬೆಳೆಸಿದೆವು. ಎರಡನೇ ದಿನದ ಪ್ರಯಾಣ ಬಹಳ ದುರ್ಗಮ. ಇಲ್ಲಿ ಮಧ್ಯದಲ್ಲಿ ತೊಂದರೆಗೀಡಾದರೆ ಜೀಪ್ ಸಹ ಬರಲಾಗುವುದಿಲ್ಲ. ೧೬ಸಾವಿರ ಅಡಿಗಳಿಂದ ಹೊರಟ ನಾವು ೧೯೦೦೦ ಅಡಿ ಎತ್ತರದ ದೋಲ್ಮಲಾ ಪಾಸ್ ಮುಖಾಂತರ ಸಾಗಬೇಕು. ಕಡಿದಾದ ಈ ಹಂತ ಕುದುರೆಗಳಿಗೂ ಕಷ್ಟವೇ. ಹೇಗೋ ತಲುಪಿದ ನಮಗೆ ಕಂಡದ್ದು ಹಿಮಾಲಯಗಳ ಸುಂದರ ದೃಶ್ಯಾವಳಿ. ಬೌದ್ಧರಿಗೆ ಇದು ಬಹಳ ಮುಖ್ಯಸ್ಥಳ.. ಇಲ್ಲಿ ಅವರ ಹರಕೆಹೊತ್ತ ಮಂತ್ರಪತಾಕೆಗಳು ಸಾಕಷ್ಟು ಕಾಣಸಿಗುತ್ತವೆ.. ಆಮ್ಲಜನಕದ ಕೊರತೆದ್ದರಿಂದ ನಾವು ಇಲ್ಲಿರದೇ ಬೇಗ ಇಳಿಯಲಾರಂಭಿಸಿದೆವು. ಅತಿ ಇಳಿಜಾರಿರುವ ಈ ೫ ಕಿಮೀ ಸಹ ಚಾರಣದ ಅಭ್ಯಾಸವಿಲ್ಲದವರಿಗೆ ಕಷ್ಟವೇ.. ಅಲ್ಲದೆ ಕಡಿದಾಗಿರುವುದರಿಂದ, ಕುದುರೆ ಪ್ರಯಾಣಿಕರೂ ಈ ೫ಕಿಮೀಗಳನ್ನು ನಡೆದೇ ಇಳಿಯಬೇಕು. ಹಾಗಾಗಿ ಕೆಲಜನರಿಗೆ ಸಹಾಯ ಮಾಡುವ ಅವಕಾಶ ನನಗೊದಗಿ ಬಂತು. ದಾರಿಯಲ್ಲಿ ನಮಗೆ ಪರಿಚಯವಾದ ಮಧುಬನ್ ಫುಡ್ಸ್‌ನ ಸುಮಿತ್ ಅಲ್ಲಿಯ ಗೌರೀಕುಂಡದಿಂದ ತೀರ್ಥವನ್ನು ಸಂಗ್ರಹಿಸಲು ಸಹಾಯ ಮಾಡಿದರು. ಗೌರೀಕುಂಡದಲ್ಲಿ ಪಾರ್ವತಿದೇವಿ ಸ್ನಾನ ಮಾಡುತ್ತಿದ್ದರೆಂಬ ಪ್ರತೀತಿಯಿದೆ. ಶಿವನ ಗಂಗೆಯೋ ಎಂಬಂತೆ ಪರ್ವತದ ಪದತಲದಿಂದ ಹರಿದುಬರುವ ಹಿಮನದಿಗಳನ್ನು ದಾಟಿ ನಾವು ಸಮತಟ್ಟಾದನೆಲಕ್ಕೆ ತಲುಪಿದೆವು. ಅಲ್ಲಿಯೇ ಇರುವ ಚಹಾದಂಗಡಿಯಲ್ಲಿ ಊಟದ ಶಾಸ್ತ್ರ ಮುಗಿಸಿದೆವು. ಶಿವನ ಅನುಗ್ರಹದಿಂದ ಪರಿಕ್ರಮದ ಕಷ್ಟಕರಹಂತವನ್ನು ಕ್ರಮಿಸಿದ ಖುಷಿ ನಮ್ಮದಾಗಿತ್ತು..ಆದರೂ ದೋಲ್ಮಲಾ ಪಾಸ್ ನಮ್ಮ ಗುಂಪಿನ ಮೂರು ಜನರ ಆರೋಗ್ಯದ ಮೇಲೆ ಪರಿಣಾಮ ಬೀರಿತು. ಅವರು ರೆಸ್ಕ್ಯೂ ಸಹಾಯ ಪಡೆದು ಆಪತ್ಕಾಲೀನವಾಹನದಲ್ಲಿ ಹೊರಟರು.. ಇಲ್ಲಿಂದ ಅಂಬ್ಯುಲೆನ್ಸ್ ಸಹ ಪ್ರದಕ್ಷಿಣೆಯಾಗಿಯೇ ಸಾಗುವುದರಿಂದ, ಅವರ ಪರಿಕ್ರಮವೂ ಪೂರ್ತಿಯಾಯಿತೆಂದೇ ಹೇಳಬಹುದು.

**(ಮುಂದಿನ ಪುಟಕ್ಕೆ)**

# ಪ್ರವಾಸ ಕಥನ

**ಮುಂದುವರೆದುದು....**

ಹೀಗಾಗಿ ಉಳಿದವರು ನಾನು ಮತ್ತು ಚಿತ್ತ ಸ್ವರೂಪಾನಂದ ಸ್ವಾಮಿಗಳು ಇಬ್ಬರೇ, ನಾವು ನಮಗಾಗಿ ಉಳಿದ ಶೇರ್ಪಾನೊಂದಿಗೆ ನಮ್ಮ ಪರಿಕ್ರಮವನ್ನು ಮುಂದುವರಿಸಿದೆವು. ಅಂದಿನ ಉಳಿದ ೧೪ ಕಿಮೀ ಹಾದಿ ಸುಗಮವಾಗಿತ್ತು. ಪರ್ವತದ ಪೂರ್ವ ಮುಖದ ದರ್ಶನ ಮಾಡಿ ಶಾಂತಿಯಿಂದ ಕುಳಿತು ಸ್ವಾಮೀಜಿ ಹೃಶೀಕೇಶದಿಂದ ಬಿಲ್ವ ಖರ್ಜೂರಗಳಿಂದ ಬಿಲ್ವಾಷ್ಟಕ, ಲಿಂಗಾಷ್ಟಕ, ಚಮಕಗಳಿಂದ ಶಿವನನ್ನು ನೆನೆದೆವು. ಈ ಹಂತದಲ್ಲಿ ಜನರ ಸಂಖ್ಯೆ ಕಮ್ಮಿ ಇದ್ದು ಶಿವನ ಸಾನಿಧ್ಯವನ್ನು ಹೆಚ್ಚಿಸುತ್ತಿತ್ತು. ಮಂತ್ರಗಳನ್ನು ಪಠಿಸುತ್ತ ನಡೆದ ನನಗೆ ಹಾದಿ ತೀರಿದ್ದೇ ತಿಳಿಯಲಿಲ್ಲ. ನಿರೀಕ್ಷೆಗೂ ಮುನ್ನವೇ ೨೨ಕಿಮೀ ಕ್ರಮಿಸಿ ನಾವು ಎರಡನೇ ದಿನದ ಗಮ್ಯವಾದ ಝುತುಲ್‌ಫುಕ್ ತಲುಪಿದೆವು. ದೇವನ ಲೀಲೆ ಸ್ವಾಮೀಜಿ ಮತ್ತು ನನ್ನನ್ನು ಮೂಕರನ್ನಾಗಿ ಮಾಡಿತ್ತು, ಸಂಪೂರ್ಣ ಪರಿಕ್ರಮದ ಭಾಗ್ಯ ಸಿಕ್ಕ ಆನಂದ ರೋಮಾಂಚನಗೊಳಿಸುತ್ತಿತ್ತು. ಡಾಕ್ಟರ್ಜಿ ಕೊಟ್ಟ ಔಶಧಿಗಳ ಪ್ರಭಾವವೋ, ಶಿವನ ಅನುಗ್ರಹವೋ, ಅಂದು ನನ್ನ ಹೊಟ್ಟೆಗೆ ಆಹಾರವೂ ಸೇರಿತು.

**ಕೈಲಾಸ ಪರಿಕ್ರಮ - ದಿನ ೩:** ಮೂರನೆಯ ದಿನ ನಮ್ಮ ಪರಿಕ್ರಮದ ಕೊನೆಯ ದಿನ.. ಕೇವಲ ೮ ಕಿಮಿ ಕ್ರಮಿಸಬೇಕಿದ್ದ ನಾವು ಅತಿ ಬೇಗ ಎದ್ದು ಹೊರಟೆವು. ಉಳಿದವರಿಗಿಂತ ಮುಂಚೆಯೆ ಹೊರಟ ನನಗೆ ಯಾತ್ರೆಯ ಈ ಭಾಗ ಶಿವನ ಅಗಾಧತೆಯಿಂದ ಮೈಮರೆಸಿತ್ತು. ಹಲವು ಭಾವನೆಗಳು ಉಮ್ಮಳಿಸಿದ್ದವು. ಶಿವನೊಡನೆ ಮನಸ್ಸಿನಲ್ಲೇ ಮಾತನಾಡುತ್ತಾ ನಡೆಯುತ್ತಿದ್ದ ನನ್ನ ಕಣ್ಣಲ್ಲಿ ಆನಂದಭಾಷ್ಪ ಸುರಿಯುತ್ತಲೇ ಇತ್ತು. ಏನನ್ನೂ ಬೇಡಬಾರದೆಂದು ಮೊದಲೇ ಎಂದುಕೊಂಡಿದ್ದರೂ, ಕುಟುಂಬದ, ಗೆಳೆಯರ ಹಲವು ಕಷ್ಟಗಳ, ನೊಂದ ಜೀವಗಳ ನೆನಪಾಗುತ್ತಿತ್ತು. ಅವರೆಲ್ಲರಿಗೂ ಆಶೀರ್ವದಿಸು, ನ್ಯಾಯನೀಡು ಎಂದು ಬೇಡುತ್ತಾ ನಡೆಯುವಾಗ ಇನ್ನೂ ಹೆಚ್ಚಿನ ಗೆಳೆಯರ, ನೆರೆಹೊರೆಯರ, ಆಫೀಸಿನ ಒಡನಾಡಿಗಳ ನೆನಪು ಹೆಚ್ಚುತ್ತಿತ್ತು. ಭಗವಂತನಲ್ಲಿ ಕೇವಲ ಇವರಿಗಾಗೇಕೆ ಕೋರಬೇಕು, ಏಕೆ ಎಲ್ಲರ ಕಷ್ಟಗಳನ್ನು ಪರಿಹರಿಸಬಾರದು..? ಪುತ್ರಶೋಕ, ವಿಚ್ಛೇದನ, ರೋಗ ರುಜಿನಗಳೇಕೆ ಎಲ್ಲರಿಗೆ ಎಂಬ ಪ್ರಶ್ನೆಗಳಲ್ಲಿ ಶಿವನಲ್ಲಿ ಪ್ರಶ್ನೆ ಮಾಡುತ್ತಲೇ, ಜತೆಗೆ ಬೇಡುತ್ತಲೇ ನಡೆದಾಗ "ಸರ್ವೇ ಜನಾಃ ಸುಖಿನೋಭವಂತು.."ಎಂಬ ಮಂತ್ರದ ನಿಜವಾದ ಹೃದಯ ಹಗುರಾಯಿತು. ನನ್ನೆಲ್ಲ ನೊಂದ ಬಂದುಮಿತ್ರರಿಗೆ ಶಿವಲಿಂಗಗಳನ್ನರಿಸಿಕೊಳ್ಳುತ್ತಾ ನಡೆವಷ್ಟರಲ್ಲೇ ಸ್ವಾಮೀಜಿ ಹಾಗೂ ಶೇರ್ಪಾ ನನ್ನ ಜತೆಯಾದರು. ಅನತಿದೂರದಲ್ಲೇ ಪರಿಕ್ರಮ ಸಂಪೂರ್ಣವಾಯಿತು. ವಾಪಸ್ ಹೊರಡಲು ನಮಗಾಗಿ ಬಸ್ ಕಾಯುತ್ತಿತ್ತು. ದಾರ್ಚೆನ್ ತಲುಪಿದ ನಮಗಾಗಿ ನಮ್ಮ ಗುಂಪಿನ ಉಳಿದವರೆಲ್ಲರೂ ಕಾಯುತ್ತಿದ್ದರು. ಉಪಹಾರ ಮುಗಿಸಿ ನಾವೆಲ್ಲರೂ ಮರುಪ್ರಯಾಣ ಬೆಳೆಸಿದೆವು. ಮಾನಸ ಸರೋವರ ತಲುಪಿದ ನಾವು ಬೆಂಗಳೂರಿನವರ ಗುಂಪೊಂದರ ಜತೆ ರುದ್ರ ಹೋಮದಲ್ಲಿ ಭಾಗವಹಿಸಿದೆವು. ಪರಿಕ್ರಮ ಸಾಂಗವಾಗಿದ್ದಕ್ಕೆ ಭಗವಂತನಲ್ಲಿ ಪ್ರಾರ್ಥಿಸಿದೆವು.

ನೇಪಾಳದೆಡೆಗೆ ಹೊರಟ ನಮಗೆ ಹವಾಮಾನ ಹದಗೆಡುತ್ತಿರುವ ಸುದ್ದಿ ಬಂತು. ಚೀನಾ ನಿರ್ಗಮಿಸಿ ಹಿಲ್ಸಾದಿಂದ ಸಿಮಿಕೋಟ್‌ಗೆ ಹೆಲಿಕಾಪ್ಟರ್ ಹತ್ತುತ್ತಿದ್ದಂತೆಯೆ ಧೋ ಎಂಬ ಜಡಿಮಳೆ.. ಅಂತಹ ಮಳೆ, ಅತಿಗಾಳಿಯಲ್ಲೂ ಧೃತಿಗೆಡದ ಪೈಲಟ್, ನಮ್ಮನ್ನು ಕೈರಲಿ ನದಿಯ ಕಣಿವೆಯ ಮೂಲಕ ಸಿಮಿಕೋಟ್‌ಗೆ ಕರೆತಂದರು. ಈ ಅನುಭವವೂ ಮೈ ನವಿರೇಳಿಸುವಂತದ್ದಾಗಿತ್ತು. ಸಿಮಿಕೋಟ್‌ನ ಚಿಕ್ಕ ಮಣ್ಣಿನ ಹೋಟೆಲ್‌ನ ಆತಿಥ್ಯ ನಮ್ಮೆಲ್ಲರ ಪಾಲಿಗೆ ಮರುಜೀವವ ತಂದಿತ್ತು. ಹವಾಮಾನ ಹದಗೆಟ್ಟಿದ್ದರಿಂದ ಮುಂದಿನ ಪ್ರಯಾಣ ರದ್ದಾಗಿದ್ದರೂ ನಮ್ಮೆಲ್ಲರ ಮನ ಶಿವನಲ್ಲಿಯೇ ಇತ್ತು. ನಾನು ಅಮೇರಿಕಾಕ್ಕೆ ವಾಪಸ್ ಹೊರಡಲು ಎರಡೇ ದಿನ ಉಳಿದಿದ್ದರಿಂದ ಸ್ವಲ್ಪ ಆತಂಕವೂ ಇತ್ತು. ಮರುದಿನ ಸ್ವಾಮೀಜಿ ಮತ್ತು ನಾನು ಆ ಊರಲ್ಲೊಂದು ಶಿವ ದೇವಸ್ಥಾನ ಇರುವುದನ್ನು ಅರಿತು ಅದನ್ನು ಹುಡುಕಿಕೊಂಡು ಹೊರಟೆವು. ಊರನ್ನು ದಾಟಿ ೨ ಕಿಮೀ ಕಿರು ಹಾದಿಯಲ್ಲಿ ನಡೆದಂತೆ ಗುಡ್ಡದ ಅಂಚಲ್ಲಿ ಮೋಡಗಳ ಮಧ್ಯೆ ಒಂದು ಶಿವ ಮಂದಿರ. ಅಲ್ಲಿನ ವಿಹಂಗಮ ನೋಟವನ್ನು ವರ್ಣಿಸಲಸಾಧ್ಯ. ಅಲ್ಲಿ ಕುಳಿತು ನಾವು ಜಪ ಮಾಡಿ, ಶಿವನಲ್ಲಿ ಹೊರಡಲು ದಾರಿ ಕೋರಿದೆವು. ವಾಪಾಸು ಹೋಟೆಲ್ ತಲುಪುವಷ್ಟರಲ್ಲಿ ಕಣಿವೆಯ ಮೋಡ ಸ್ವಲ್ಪ ಸರಿಯಿತು ಒಂದು ವಿಮಾನಕ್ಕೆ ಹಾರಲು ಅನುಮತಿಯೂ ದೊರಕಿತು. ಅಲ್ಲಿನ ವಿಮಾನಗಳ ಮೇಲೆ ನಮ್ಮ ಟ್ರಾವೆಲ್ಸ್‌ನ ಹಿಡಿತದಿಂದ, ನನ್ನನ್ನೂ ಸೇರಿ ನಮ್ಮ ಗುಂಪಿನ ೪ ಜನರಿಗೆ ಆ ವಿಮಾನದಲ್ಲಿ ಹಾರುವ ಅವಕಾಶ ದೊರಕಿತು. **(ಮುಂದಿನ ಪುಟಕ್ಕೆ)**

# ಪ್ರವಾಸ ಕಥನ

**ಮುಂದುವರೆದುದು....**

ವಿಮಾನದಲ್ಲಿ ಹಾರಿ, ಸಿಮಿಕೋಟ್ ಕಣಿವೆಯನ್ನು ಸುಗಮವಾಗಿ ದಾಟಿದೆವಾದರೂ, ಮತ್ತೆ ಹವಾಮಾನ ಕೆಡುತ್ತಲೇ ಹೊಯಿತು. ನೇಪಾಳ್ಗಂಜ್ ತಲುಪಬೇಕಾದ ನಮ್ಮನ್ನು ಕೇವಲ ರನ್‌ವೇ ಇರುವ ಸುರಿಖೆತ್ ನಲ್ಲಿ ಇಳಿಸಲಾಯಿತು. ಅಲ್ಲಿಂದ ನಾವು ಬಸ್ಸಿನಲ್ಲಿ ಅಭಯಾರಣ್ಯದ ಕಾಡದಾರಿಯಲ್ಲಿ ೩ ಗಂಟೆ ಪ್ರಯಾಣಿಸಿ ನೇಪಾಳ್ಗಂಜ್ ತಲುಪಿದೆವು. ನೇಪಾಳ್ಗಂಜ್‌ನಿಂದ ಬೆಂಗಳೂರು, ಬೆಂಗಳೂರಿನಿಂದ ನ್ಯೂ- ಜೆರ್ಸಿ ಪ್ರಯಾಣಗಳು ಸುಲಲಿತವಾಗಿದ್ದವು.

**ಪ್ರಯಾಣಿಸುವವರಿಗೆ ಸಲಹೆಗಳು:**

ಸರಿಯಾದ ಪ್ರವಾಸೀ ಏಜೆನ್ಸಿಯನ್ನು ಆಯ್ದುಕೊಳ್ಳಿ.
ನೀವು ಅಮೇರಿಕಾದಲ್ಲಿ ನೆಲೆಸಿರುವ ಭಾರತೀಯ ನಾಗರೀಕರಾದಲ್ಲಿ, ವೀಸಾಕ್ಕಾಗಿ ಸಾಕಷ್ಟು ಸಮಯವನ್ನಿಟ್ಟುಕೊಳ್ಳಿ. ನಿಮ್ಮ ಟ್ರಾವೆಲ್ ಏಜೆನ್ಸಿಯೊಂದಿಗೆ ಈ ವಿಷಯಗಳನ್ನು ಮೊದಲೇ ಖಾತರಿ ಮಾಡಿಕೊಳ್ಳಿ.

ದೈಹಿಕ ಸದೃಢತೆ ಈ ಯಾತ್ರೆಗೆ ಬಹಳ ಪೂರಕ. ಯಾತ್ರೆಗೆ ಆರು ತಿಂಗಳಿರುವಾಗಿನಿಂದ ದಿನಾ ಕನಿಷ್ಟ ೧ ಗಂಟೆ ಓಟ ಅಥವಾ ನಡಿಗೆ ಅವಶ್ಯ. ನೀವು ನಡಿಗೆಯಲ್ಲಿಯೇ ಪರಿಕ್ರಮ ಮಾಡಬಯಸುವರಾದಲ್ಲಿ, ತಿಂಗಳಿಗೊಮ್ಮೆಯಾದರೂ ೨೦-೩೦ ಕಿಮೀ ಟ್ರೆಕ್ಕಿಂಗ್ ಮಾಡುವುದು ಒಳ್ಳೆಯದು.

ಟ್ರೈನಿಂಗ್ ಮಾಸ್ಕ್ (high altitude training mask) ಜತೆಗೆ ತರಬೇತಿ ನಡೆಸುವುದು ಸಾಧ್ಯವಾದಲ್ಲಿ ಇನ್ನೂ ಪರಿಣಾಮಕಾರಿ (ಆದರೆ ಉಪಯೋಗಿಸುವಲ್ಲಿ ಎಚ್ಚರ!)
ಹೊರಡುವ ತಯಾರಿಯ ಮುನ್ನ ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳಲು ಮರೆಯದಿರಿ.

ಚೀನಾ ತಲುಪಿದ ನಂತರ ಕೇವಲ ಬೇಯಿಸಿದ ವಸ್ತುಗಳನ್ನೇ ತಿನ್ನಿರಿ. ಹಾಗೂ ಕಾಯಿಸಿದ ನೀರನ್ನೇ ಕುಡಿಯಿರಿ.

ತಾಳ್ಮೆ ಬಹಳಷ್ಟಿರಲಿ. ಚೀನಾದ ಇಮ್ಮಿಗ್ರೇಶನ್ ಅವಸ್ಥೆಗಳು, ಟಿಬೇಟ್ ತಲುಪಿದ ಮೇಲಿರುವ ವ್ಯವಸ್ಥೆಗಳು, ಹವಾಮಾನ, ಆರೋಗ್ಯ ನಿಮ್ಮ ತಾಳ್ಮೆಯನ್ನು ಖಂಡಿತಾ ಪರೀಕ್ಷಿಸುತ್ತವೆ. ಶಿವನ ಧ್ಯಾನದಲ್ಲಿ ನಿರತರಾಗಿ ಹೊಂದಿಕೊಂಡು ಹೋದಲ್ಲಿ ಯಾತ್ರೆ ಎಲ್ಲರಿಗೂ ಸುಗಮ.

Expectations ಕಮ್ಮಿ ಇರಲಿ. ಕೈಲಾಸ ಪರ್ವತದ ದರ್ಶನವೇ ಮಹಾಭಾಗ್ಯ. ಅತಿ ಎತ್ತರದ ವಿರಳ ಗಾಳಿಯ ವಾತಾವರಣವು ದೇಹ ಮತ್ತು ಮನಸ್ಸಿನ ಆರೋಗ್ಯದ ಮೇಲೆ ಹಲವಾರು ಪರಿಣಾಮಗಳನ್ನುಂಟು ಮಾಡುತ್ತದೆ. ಮಿತಿಮೀರಿ ಪ್ರಯತ್ನಿಸಿದಲ್ಲಿ ಪ್ರಾಣಕ್ಕೂ ಅಪಾಯವಿರುವುದು. ■


(೩)

**ಛಾಯಾಚಿತ್ರ ಕೃಪೆ: ಲೇಖಕರು**
**೧. ಕೈಲಾಸ ಪರಿಕ್ರಮ ೨, ಉತ್ತರ ಕೈಲಾಸ ಪರ್ವತ ೩. ಲೇಖಕರು**

## ಸಂಚಿಕೆಯ ಕತೆಗಾರರು:

*೧ ಸುನಂದಾ ಕಡಮೆ*

*೨. ಸರಿತಾ ನವಲಿ*

*೩. ದಾಶರಥಿ ಘಟ್ಟು*

*೪. ಶ್ರೀವಿದ್ಯಾ ಪ್ರಶಾಂತ್*

*೫. ಲಕ್ಷ್ಮಿ ಕೊಲಾಲ್*

*೬. ಅಹೀಶ್ ಭಾರದ್ವಾಜ್*




ಪುಟ ವಿನ್ಯಾಸ: ರಘುರಾಂ ರಾಯಸಂ

ಕಥೆ

# ಗಾಳಿ ಜೋಗುಳ ಹಾಡಿ




ಸುನಂದಾ
ಪ್ರಕಾಶ ಕಡಮೆ

**ಲೇಖಕರ ಪರಿಚಯ:** 1967, ಉತ್ತರಕನ್ನಡದಲ್ಲಿ ಜನನ. 1997 ರಿಂದ ಬರವಣಿಗೆ ಆರಂಭ. ನಾಲ್ಕು ಕಥಾ ಸಂಕಲನಗಳು, ನಾಲ್ಕು ಕಾದಂಬರಿಗಳು, ಮೂರು ಪ್ರಬಂಧ ಸಂಕಲನಗಳು, ಒಂದು ಕವನ ಸಂಕಲನ ಮತ್ತು ಒಂದು ಮಕ್ಕಳ ಕತೆಗಳ ಸಂಗ್ರಹ ಒಟ್ಟೂ 13 ಪುಸ್ತಕಗಳು ಹೊರಬಂದಿವೆ. ಕರ್ನಾಟಕ ಸಾಹಿತ್ಯ ಅಕೆಡಮಿ ಬಹುಮಾನ, ಬಾಲ ವಿಕಾಸ ಅಕೆಡೆಮಿ ಪ್ರಶಸ್ತಿ, ಛಂದ ಪುಸ್ತಕ ಬಹುಮಾನ, ಬಿ.ಎಂ.ಶ್ರೀ. ಕಥಾ ಪ್ರಶಸ್ತಿ, ಬೆಸಗರಹಳ್ಳಿ ರಾಮಣ್ಣ ಕಥಾ ಪ್ರಶಸ್ತಿ, ಡಾ. ಡಿ ಎಸ್ ಕರ್ಕಿ ಕಾವ್ಯ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳು ಇವರ ಸಂಕಲನಗಳಿಗೆ ಸಂದಿವೆ. ಹಲವು ಕತೆಗಳು ಇಂಗ್ಲೀಷ, ತಮಿಳು, ತೆಲುಗು, ಮಲಯಾಳಂ , ಉರ್ದು ಹಾಗೂ ಹಿಂದಿ ಭಾಷೆಗಳಿಗೆ ಅನುವಾದಗೊಂಡಿವೆ.

“ ಒಂದು ಹೆಣ್ಣು ಧರಿಸಿದ ವಸ್ತ್ರವಾದದ್ದರಿಂದಲೇ ವೀಕ್ಷಕರ ಮನಸ್ಸಿನಲ್ಲಿ ಎಂಥದೋ ತಲ್ಲಣ ಹುಟ್ಟಿಸುವ ಶಕ್ತಿ ಅದಕ್ಕೆ ಒಲಿದು ಬಿಟ್ಟಿತ್ತು. ”

ದಟ್ಟ ನೀಲಿ ಬಣ್ಣದ ಸೆಲವಾರ್ ಕಮೀಜ್ ಅದು. ಮೇಲೆ ಧರಿಸುವ ಟಾಪ್ ನ ಬಣ್ಣ ಹಿನ್ನೆಲೆಯಲ್ಲಿ ನೀಲಿಯೇ ಇದ್ದರೂ ಅದರ ಒಳ ಮೈಯಲ್ಲಿ ಬಿಳಿಯ ಸಣ್ಣ ಜಿನುಗಿನ ಹೂಗಳಿವೆ. ನೀಲಿ ಪ್ಲೇನ್ ಬಣ್ಣದ ಪ್ಯಾಂಟು ಮತ್ತು ಅದೇ ಬಣ್ಣದ ವ್ಹೇಲ್. ಮೂರೂ ಒಟ್ಟಿಗೇ ಬಿದ್ದಿರುವ ದೃಶ್ಯ ಕಂಡದ್ದು, ಊರ ಹೊರಗೆ ಹೊಸ ಕಾಲನಿಗಳು ಈಗಷ್ಟೇ ಕಣ್ಣು ತೆರೆಯುತ್ತಿರುವ ಪ್ರದೇಶದ ಒಂದು ಮುಳ್ಳಿನ ಪೊದೆಯ ಅಡಿಯಲ್ಲಿ. ಇತ್ತ ಹಳೆಯ ಕಾಲನಿಯಲ್ಲಿ ವಾಸಿಸುವ ಇದೀಗ ನಲವತ್ತು ಅಥವಾ ಐವತ್ತರ ಗಡಿ ದಾಟಿದ ಮಂದಿ, ನಸುಕಿನ ಐದೋ ಆರೋ ಗಂಟೆಗೆ ಎದ್ದು ಬೆಳಗಿನ ವಾಕಿಂಗು ಹೊರಡುವ ಸ್ಥಳ ಅದು.



ಕೆಲವು ದಿನಗಳಿಂದ ಆ ಮೂರೂ ವಸ್ತ್ರಗಳು ಅಲ್ಲಿ ಬೆಳಗಿನ ವಾಕಿಂಗಿಗೆ ಬರುವ ಎಲ್ಲರ ಗಮನವನ್ನೂ ಸೆಳೆಯುತ್ತಿತ್ತು. ಹಾಗೆ ಬಿದ್ದಿದ್ದ ಆ ವಸ್ತ್ರ ಅಷ್ಟೇನೂ ಹಳತಾಗಿದ್ದಂತೆ ಕಾಣುತ್ತಿರಲಿಲ್ಲ. ಮತ್ತು ಅವರೆಲ್ಲರ ಕುತೂಹಲದ ಮಾತಿಗೂ ಪ್ರಮುಖ ಆಹಾರವಾಗಿತ್ತು. ಅದಾಗ ಹೊಸ ಕಾಲನಿಯ ಸಣ್ಣ ಗುರುತಿನ ಕಲ್ಲುಗಳನ್ನು, ಸಾಲು ದೀಪದ ಕಂಬಗಳನ್ನೂ ಹುಗಿಸಿಕೊಂಡ ಆ ನಿರ್ಜನ ಜಾಗೆಯಲ್ಲಿ ಅಲ್ಲೊಂದು ಇಲ್ಲೊಂದು ಮನೆಗಳು ನಿಧಾನಕ್ಕೆ ಏಳುತ್ತಿದ್ದವು. ಅಂಥ ಮನೆಗಳ ಬಳಿಯಲ್ಲಿ ಒಂದೊಂದು ತಗಡಿನ ಶೆಡ್ಡುಗಳೂ ಕಾಣುತ್ತಿದ್ದವು. ಅದರಲ್ಲಿ ಆಯಾ ಮನೆಗಳ ವಾಚ್‌ಮನ್ ಹಾಗೂ ಅವರ ಸಂಸಾರಗಳು ವಾಸಿಸುತ್ತಿದ್ದವು.

ಅದೇ ವಾಚ್‌ಮನ್‌ರ ಶೆಡ್ಡಿನಲ್ಲಾರೋ ಆ ವಸ್ತ್ರವನ್ನು ಅಲ್ಲಿ ಮುದ್ದಾಂ ಬಿಸಾಕಿರಬಹುದು ಅಂತೆಯೂ ವಾಕಿಂಗಿನ ಜನ ಮಾತಾಡಿಕೊಂಡರು. ‘ಇಷ್ಟು ದಿನ ಇರಲಿಲ್ಲ, ಯಾರು ಹೀಗೆ ಒಗೆದಿರಬಹುದು?’ ‘ಅಷ್ಟೇನೂ ಹಳೆಯದೂ ಆಗಿಲ್ಲ’ ‘ಹರಿದು ಚಿಂದಿಯಾಗಿದ್ದಾದರೆ ಅದು ಬೇರೆ ಮಾತು’ ‘ಬಣ್ಣವೂ ಮಾಸಿಲ್ಲ ನೋಡಿ’ ‘ಕಸ ಆರಿಸುವವರು ಅಲ್ಲಿಂದಲೇ ಓಡಾಡ್ತಾರೆ, ಅವರಾದರೂ ಆಯ್ದುಕೊಳ್ಳಬೇಕಿತ್ತಲ್ಲ’ ‘ಯಾಕೆ ಅದು ಅರ್ಧ ಮಡಚಿಟ್ಟ ಶೈಲಿಯಲ್ಲಿ ಬಿದ್ದಿದೆ?’

(ಮುಂದಿನ ಪುಟಕ್ಕೆ)

## ಗಾಳಿ ಜೋಗುಳ ಹಾಡಿ (ಮುಂದುವರೆದುದು)

'ಅದು ಬಿದ್ದ ಅವತಾರ ಕಂಡರೆಯಾರೋ ಬೇಕೂ ಅಂತಲೇ ಹೀಗೆ ಬಿಸಾಕಿರುವದಂತೂ ಗ್ಯಾರಂಟಿ' 'ಅಥವಾ ಶೆಡ್ ಗಳ ಎದುರು ಕಲ್ಲಿನ ಮೇಲೆ ಒಣಹಾಕಿದ್ದನ್ನು ಬೀಸೋ ಗಾಳಿ ಎತ್ತಿ ತಂದು ಇಲ್ಲಿ ಹಾಕಿತೇ?' 'ಹಾಗೆ ಅಕಸ್ಮಾತ್ತಾಗಿ ಹಾರಿ ಬಂದಿದ್ದರೆ, ಆ ನಂತರ ಹುಡುಕಿ ನೋಡಿ ಅವರು ಬಂದು ಒಯ್ಯಬೇಕಿತ್ತಲ್ಲ?'

'ಒಂದು ಹುಡುಗಿ ಒಂದೇ ಬಾರಿಗೆ ತೊಡುವ ಮೂರೂ ವಸ್ತ್ರಗಳನ್ನು ಹಾಗೆ ಬಿಸಾಕಿ ಬಿಡಲು ಏನು ಕಾರಣ?' 'ಇನ್ನೂ ಕೆಲ ದಿನ ಧರಿಸಿ ಬಳಸಲು ಯೋಗ್ಯವಾದ ಬಟ್ಟೆಯನ್ನು ಯಾರು ಹಾಗೆ ಬಿಸಾಡಿದ್ದು ?' 'ತಮ್ಮ ಒಳ್ಳೆಯ ಉಡುಗೆ ಹಾಗೆ ಬೇಡವೆನಿಸಲು ಯಾವುದಾದರೂ ಒಂದು ಕಹಿಯಾದ ಕಾರಣ ಇದ್ದೇ ಇರಬೇಕಲ್ಲ?' 'ಅಥವಾ ನಮ್ಮ ಹಾಗೆ ವಾಕಿಂಗಿಗೆ ಬರುವ ಯಾರೋ ತಮ್ಮ ಯಾವುದೋ ಮೂಢನಂಬಿಕೆ ಸಾಕ್ಷಾತ್ಕರಿಸಲೋ ಅದನ್ನು ತಂದು ಇಲ್ಲಿ ಒಗೆದಿರಬಹುದೇ?' 'ಮನೆ ಮಗಳು ತೊಟ್ಟ ಬಟ್ಟೆಯನ್ನು ಹಾಗೆ ರಸ್ತೆಯಲ್ಲಿ ಅನಾಥವಾಗಿ ತೆವಳುವಂತೆ ಚೆಲ್ಲಲು, ಯಾವ ಕಟುಕ ತಂದೆತಾಯಿಗೆ ಮನಸ್ಸು ಬರುತ್ತದಪ್ಪ ಛೇ ಛೇ' .

'ಏನೋ ಮಾಟ ಮಂತ್ರ ಮಾಡಿಸಿ, ಅದನ್ನು ಮನೆಯಲ್ಲಿಟ್ಟುಕೊಳ್ಳಬಾರದೆಂಬ ಕಾರಣಕ್ಕೆ ಹೀಗೆ ಬಿಸಾಕಿರಬಹುದು' 'ಅದು ನಮ್ಮ ದೃಷ್ಟಿಗೆ ಬಿದ್ದರೂ ಅಪಾಯವೇ' 'ಅವರ ಮಗಳಿಗೆ ಬಿಟ್ಟ ಭೂತ ಹಿಂದೆ ಬಂದು ನಮ್ಮ ಮನೆ ಸೇರಿಕೊಂಡರೆ ?'

ಹಾಗೆ ರಸ್ತೆಗೆ ಬಿದ್ದ ವಸ್ತ್ರ ಯಾವುದೋ ಟಾವೆಲ್ಲೋ ಹುಡುಗರ ಅಂಗಿ ಪ್ಯಾಂಟೋ ಆಗಿದ್ದರೆ ಅದು ನೋಡುಗರ ಮನಸ್ಸಿನಲ್ಲಿ ಇಂಥ ದಿಗಿಲನ್ನು ಹುಟ್ಟಿಸುತ್ತಿರಲಿಲ್ಲ. ಅದೂ ಹರಯದ ಹುಡುಗಿಯರ ಡ್ರೆಸ್ಸುಗಳಿಗೆ ಅದರದೇ ಆದ ಗಾಂಭೀರ್ಯತೆ ಇರುತ್ತದೆ. ಎಲ್ಲೋ ಒಂದು ಸೂಕ್ಷ್ಮ ಆಘಾತದ ನಂಟು ಅದಕ್ಕಿದೆ. ತಟ್ಟಿದರೂ ತಟ್ಟದಂತಹ ಮಿಸುಗಾಟ.

ಒಂದು ಹೆಣ್ಣು ಧರಿಸಿದ ವಸ್ತ್ರವಾದದ್ದರಿಂದಲೇ ವೀಕ್ಷಕರ ಮನಸ್ಸಿನಲ್ಲಿ ಎಂಥದೋ ತಲ್ಲಣ ಹುಟ್ಟಿಸುವ ಶಕ್ತಿ ಅದಕ್ಕೆ ಒಲಿದು ಬಿಟ್ಟಿತ್ತು.ಇತ್ತೀಚೆಗೆ ಕೆಲವರು ಆ ವಸ್ತ್ರ ಬಿದ್ದಿರುವ ರಸ್ತೆಯನ್ನು ಬಿಟ್ಟು ಬೇಕಂತಲೇ ದೂರದ ತಿರುವಿನಲ್ಲಿ ನಡೆದು ತಮ್ಮ ಬೆಳಗಿನ ವಾಕಿಂಗ್ ಗೆ ವಿರಾಮ ನೀಡುವರು.

ಮುಂದಿನ ಒಂದು ವಾರವಾದರೂ ಆ ವಸ್ತ್ರ ಬೀಸುವ ಗಾಳಿಗೆ ಒಂಚೂರೇ ಅತ್ತಿತ್ತ ಸರಿದಾಡುತ್ತ, ಅದರ ತುದಿ ಮಾತ್ರ ಆ ಬಯಲಿನ ಸಣ್ಣ ಗಾಳಿಗೆ ಸದಾ ಅಲುಗಾಡುತ್ತ, ಗಾಳಿಯೊಂದಿಗೆ ಜೋಗುಳ ಹಾಡಿಸಿಕೊಳ್ಳುತ್ತಿದೆಯೋ ಅಥವಾ ಗಾಳಿಗೇ ತಾನು ಜೋಗುಳ ಹಾಡುತ್ತಿದೆಯೋ ಎಂಬಂತೆ ಅಲ್ಲೇ ಹೊರಳುತ್ತ ಸುರುಳಿಯಾಗಿ ಬಿದ್ದಿತ್ತು.

ಆ ಸಮಯದಲ್ಲಿ ಎರಡು ದಿನ ಮಳೆಯೂ ಸುರಿಯಿತು. ಅದರ ಮಾರನೇ ದಿನ ಆ ವಸ್ತ್ರ ಒದ್ದೆಯಾಗಿ ಅಲ್ಲಲ್ಲಿ ಚೂರು ಮಣ್ಣಿನ ಕೆಸರಲ್ಲಿ ಅದ್ದಿದಂತೆ ಕಾಣುತ್ತಿತ್ತು. ಆಗಲೇ ನೂರಾರು ಕುರಿಗಳ ಹಿಂಡು ಅದೇ ಸ್ಥಳದಲ್ಲಿ ಮೇಯಲು ಬಂದು ಅಲ್ಲೇ ತಾಸುಗಟ್ಟಲೇ ಓಡಾಡಿದ್ದರಿಂದ ಆ ವಸ್ತ್ರಗಳು ಇನ್ನೂ ಜರ್ಜರಿತವಾಗಿ ಮುರುಟಿದವು. ಒಂದು ಕುರಿ ಮರಿಯಂತೂ ಅಲ್ಲಿದ್ದ ದಾವಣಿಯ ಮೆತ್ತಗಿನ ತುದಿಯನ್ನು ತನ್ನ ಪುಟ್ಟ ಬಾಯಲ್ಲಿ ಜಗಿಯುತ್ತ, ಅದು ತಾನು ತಿನ್ನುವ ವಸ್ತು ಅಲ್ಲ ಅಂತ ಗೊತ್ತಾದದ್ದೇ ಅದನ್ನು ಅಲ್ಲೇ ಬಿಟ್ಟು ಚಂಗನೆ ಬೇರೆಡೆ ನೆಗೆದಿತ್ತು. ಆಗ ಅದರ ಕಾಲಿಗೆ ಸುತ್ತಿದ್ದ ಆ ದಾವಣಿ ತನ್ನ ಸಂಗಾಟ ಇದ್ದ ಇನ್ನೆರಡು ಬಟ್ಟೆಯಿಂದ ಪ್ರತ್ಯೇಕಗೊಂಡು ದೂರಕ್ಕೆ ಹೋಗಿ ಇನ್ನೊಂದು ಪೊದೆಯ ಅಡಿಯಲ್ಲಿ ಬಿತ್ತು.

ಏಳೆಂಟು ದಿನಗಳ ನಿರಂತರ ಬಿಸಿಲಿನ ಝಳಕ್ಕೆ ಕಾಯ್ದು ಆ ವಸ್ತ್ರಗಳ ಬಣ್ಣ ಕೊಂಚವೇ ತಿಳಿಯಾಗುತ್ತ ಸಾಗಿತ್ತು. ಆನಂತರದ ದಿನಗಳಲ್ಲಿ ಅವು ಗಾಳಿಗೆ ಬೇಕಾಬಿಟ್ಟಿ ಹಾರಾಡಿ ರಸ್ತೆಯ ನಡೂ ಮಧ್ಯದಲ್ಲಿಯೇ ತನ್ನ ಪೂರ್ತಿ ಮಡಿಕೆಗಳನ್ನು ಬಿಚ್ಚಿಕೊಂಡು ಬಿತ್ತು. ಆಗ ದೂರದಿಂದ ನೋಡಿದರೆ ಯಾವುದೋ ಹುಡುಗಿಯೇ ಬಿದ್ದಿರುವಂತೆ ಕಂಡು ಎದೆ ದಸಕ್ಕೆನ್ನುವ ವಿದ್ರಾವಕ ನೋಟ. ಆದರೂ ಅದನ್ನು ಯಾವ ದಾರಿಹೋಕರೂ ಯಕಶ್ಚಿತ್ ಒಂದು ಕೋಲಿನಿಂದಲೂ ಸಹ ಪಕ್ಕ ಸರಿಸಿ ನಡೆಯಲೊಲ್ಲರು.

ಒಂದು ದಿನ ಆ ನಿರ್ಜನ ತಾಣದಲ್ಲಿ ಇದ್ದಕ್ಕಿದ್ದಂತೆ ಸುಂಟರಗಾಳಿಯೊಂದು ಸುಳಿದು ಬಂತು. ಆ ಮೂರೂ ವಸ್ತ್ರಗಳನ್ನು ತನ್ನೊಂದಿಗೆ ಹೊತ್ತೊಯ್ದ ಆ ಗಾಳಿ, ದೂರದ ಒಂದೊಂದು ಪೊದೆಯಲ್ಲಿ ಒಂದೊಂದು ವಸ್ತ್ರವನ್ನು ಸಿಕ್ಕಿಸಿ ಮುಂದೆ ಸಾಗಿತು. ಬೆಳಗಿನ ವಾಕಿಂಗಿನ ಜನಕ್ಕೆ ಈಗ ದೂರದಲ್ಲಿ ಆ ಮೂರೂ ಪೊದೆಗಳು ನೀಲಿ ಪತಾಕೆ ಕಟ್ಟಿದ ಮುಳ್ಳಿನ ತೇರಿನಂತೆ ಕಾಣುತ್ತಿದೆ. ■

**(ಛಾಯಾಚಿತ್ರ ಕೃಪೆ: ಅಂತರ್ಜಾಲ)**

## ಸಣ್ಣ ಕತೆಗಳು



*ಸರಿತಾ ನವಲಿ*

# ರೂಪ-ವಿರೂಪ

ಆಕೆ ಸಿನೆಮಾ ತಾರೆ. ಸುಂದರವಾದ ಮುಖ-ಮೈಕಟ್ಟು, ಮೊಗ್ಗು ಬಿರಿದಂಥ ನಗುವಿನ, ಬೊಗಸೆ ಕಂಗಳ ಚೆಲುವೆ. ಅದೆಷ್ಟೋ ಸೂಪರ್ ಹಿಟ್ ಸಿನೆಮಾಗಳಲ್ಲಿ ಅಭಿನಯಿಸಿ, ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಳು. ಆಕೆಯ ಸೌಂದರ್ಯಕ್ಕೆ ಮಾರುಹೋದ ಯುವಕರು ಅವಳನ್ನು 'ಕನಸಿನ ರಾಣಿ' ಎಂದೇ ಕರೆಯುತ್ತಿದ್ದರು. ತನ್ನ ಮನೋಜ್ಞ ಅಭಿನಯಕ್ಕಾಗಿ ಸಾಲು-ಸಾಲಾಗಿ ಪ್ರಶಸ್ತಿಗಳನ್ನು ಪಡೆದಿದ್ದಳು. ದೊಡ್ಡದಾದ ಬಂಗಲೆಯಲ್ಲಿ ವಾಸ. ಮನೆಯಲ್ಲಿನ ಕಣ್ಣು ಕೋರೈಸುವಂಥ ದೀಪಗಳು, ನೆಲಕ್ಕೆ ಹಾಸಿದ ರತ್ನಗಂಬಳಿ, ದೇಶ-ವಿದೇಶಗಳಿಂದ ಸಂಗ್ರಹಿಸಿದ ಬೆಲೆಬಾಳುವ ಸಾಮಾನುಗಳು ಅವಳ ಶ್ರೀಮಂತಿಕೆಯನ್ನು ಸಾರಿ ಹೇಳುತ್ತಿದ್ದವು. ಕರುಣೆ-ಅನುಕಂಪ, ಸೇವಾಮನೋಭಾವವೇ ತನ್ನ ಜೀವಾಳ ಎಂದು ಎಲ್ಲೆಡೆ ಹೇಳಿಕೊಂಡು ಬರುತ್ತಿದ್ದಳಲ್ಲದೇ, ಸ್ಲಂ ಏರಿಯಾದ ಬಡಮಕ್ಕಳನ್ನು ಎತ್ತಿಕೊಂಡು ನಿಂತು ವಿಧ-ವಿಧವಾಗಿ ಕ್ಲಿಕ್ಕಿಸಿಕೊಂಡ ಫೋಟೋಗಳು ಬಿಲ್ ಬೋರ್ಡ‌ಗಳಲ್ಲಿ ರಾರಾಜಿಸುತ್ತಿದ್ದವು.

ಈಕೆ ಮನೆಗೆಲಸದ ಹೆಂಗಸು. ಕಡುಗಪ್ಪು ಮೈಬಣ್ಣದ, ಸಾಧಾರಣ ಮೈಕಟ್ಟು, ಎಣ್ಣೆ ಸುರಿಯುವ ಮುಖ. ಮಾಸಿದ ಸೀರೆಯನ್ನುಟ್ಟು, ಕೈಯಲ್ಲಿ ಚೀಲವೊಂದನ್ನು ಹಿಡಿದುಕೊಂಡು, ಮನೆ-ಮನೆಗೆ ತಿರುಗಿ ಕೆಲಸ ಮಾಡಿಕೊಂಡಿದ್ದವಳು. ಪುಟ್ಟ ವಠಾರವೊಂದರ ಒಂದು ರೂಮಿನಲ್ಲಿ ವಾಸ. ಗುಡಿಸಲೆನ್ನಬಹುದಾದ ಮನೆಯಲ್ಲಿ ಒಂದು ಮಿಣುಕು ದೀಪ, ನೆಲಕ್ಕೆ ಹಾಸಿದ ಹರಕಲು ಚಾಪೆ, ಅವರಿವರಿಂದ ಬೇಡಿ ತಂದ ಹಳೆಯ ಸಾಮಾನುಗಳು ಇವಳ ಬಡತನವನ್ನು ಪರಿಚಯಿಸುತ್ತಿದ್ದವು. ಬದುಕಿನ ಸಂಕಷ್ಟಗಳಿಂದ ರೋಸಿ ಹೋಗಿದ್ದ ಇವಳಲ್ಲಿ ಒರಟುತನ ಮನೆಮಾಡಿತ್ತು. ಹಾದಿ-ಬೀದಿಗಳಲ್ಲಿ ಓಡಾಡುವಾಗಲೂ ತನ್ನಷ್ಟಕ್ಕೇ ಬೈದುಕೊಂಡಿರುತ್ತಿದ್ದಳು. ಇವಳನ್ನು ನೋಡಿದರೆ ಅಕ್ಕ-ಪಕ್ಕದ ಮನೆಯ ಮಕ್ಕಳಿಗೆಲ್ಲ ಭಯ ಹುಟ್ಟಿಕೊಳ್ಳುತ್ತಿತ್ತು.

* * * *

ಆ ದಿನ ಹೈ ಸ್ಪೀಡಿನಿಂದ ಬಂದ ಕಾರೊಂದು ರಸ್ತೆಯ ಪಕ್ಕದಲ್ಲಿ ಆಡಿಕೊಂಡಿದ್ದ ಪುಟ್ಟ-ಪುಟ್ಟ ಮಕ್ಕಳನ್ನು ಲೆಕ್ಕಿಸದೇ ಅವರೆಲ್ಲರನ್ನು ಗುದ್ದಿ, ನಿಲ್ಲಿಸದೇ ಅದೇ ಸ್ಪೀಡಿನಲ್ಲಿ ಮುಂದೆ ಹೋಯಿತು. ಪೆಟ್ಟುಮಾಡಿಕೊಂಡು ರಕ್ತಸಿಕ್ತವಾಗಿದ್ದ ಮಕ್ಕಳು ರಸ್ತೆಯಲ್ಲಿ ಚೆದುರಿ ಬಿದ್ದರು. ಮನೆಗೆಲಸಕ್ಕೆ ಹೋಗುವುದು ತಡವಾಗಿ ಇನ್ನು ಮಾಲೀಕಳ ಬೈಗುಳ ಕೇಳಬೇಕಲ್ಲ ಎಂದು ಯೋಚಿಸುತ್ತ ಅವಸರದಿಂದ ಹೋಗುತ್ತಿದ್ದ ಈಕೆಯ ಕಣ್ಣಮುಂದೆಯೇ ಆದ ಅಪಘಾತ ಕಂಡು ಗಾಬರಿಗೊಂಡರೂ, ಸುತ್ತ-ಮುತ್ತ ನೆರೆದಿದ್ದ ಜನಸಮೂಹವನ್ನು ಬೇಡಿಕೊಂಡು ಗಾಯಗೊಂಡ ಮಕ್ಕಳನ್ನು ಆಸ್ಪತ್ರೆಗೆ ಕರೆದೊಯ್ಯುವಲ್ಲಿ ಯಶಸ್ವಿಯಾದಳು. ನೋವಿನಿಂದ ಒದ್ದಾಡುತ್ತಿದ್ದ ಮಕ್ಕಳನ್ನು ಎದೆಗೊತ್ತಿಕೊಂಡು ಸಮಾಧಾನಿಸಿದಳು. ಆದರೆ ಮಕ್ಕಳನ್ನು ಗುದ್ದಿಹೋದ ಕಾರಿನಲ್ಲಿ ಕುಳಿತಿದ್ದ ಚೆಲುವೆ, ಕನಸಿನ ರಾಣಿ ತನ್ನ ಗುರುತು ಸಿಗದಂತೆ ಮುಖಮುಚ್ಚಿಕೊಂಡಿದ್ದು ಕಾಣಿಸಿತು. ಅವಳ ಸುಂದರವಾದ ರೂಪ ಮನಸ್ಸಿನ ವಿರೂಪವನ್ನು ಪರಿಚಯಿಸಿತ್ತು! ■

## ಸಣ್ಣ ಕತೆಗಳು



# ಕ್ಷೋಭೆಯ ದಿನಗಳಲ್ಲೊಂದು ಮಧುರ ಮುಂಜಾವು

**ದಾಶರಥಿ ಘಟ್ಟು**

ಸಂದೀಪ ನಿನ್ನೆ ಮನೆಗೆ ಬಂದಿದ್ದೇ ತುಂಬಾ ತಡವಾಗಿ. ಸಂಜೆ ಐದೂವರೆ ಗಂಟೆಗೆ ಇನ್ನೇನು ಮನೆಗೆ ಹೊರಡೋಣವೆಂದು ಅವನು ಲ್ಯಾಪ್ಟಾಪ್ ಷಟ್ ಡೌನ್ ಮಾಡಬೇಕೆನ್ನುವಷ್ಟರಲ್ಲಿ, ಲೀಸಾ ಬಂದು ರಿಪೋರ್ಟಿಂಗ್ ಅಪ್ಲಿಕೇಶನ್ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದೂ, ಮಾರನೇ ದಿನದ FDA ಸಬ್ಮಿಷನ್ಗೆ ಒಂದು ಮುಖ್ಯ ರಿಪೋರ್ಟು ಬೇಕೇಬೇಕೆಂದೂ ಹೇಳಿದ್ದರಿಂದ, ಮತ್ತೆ ಅಂಗಡಿ ಹರಡಿಕೊಂಡು ಕೂತಿದ್ದಾಯಿತು. ಈ ಬಿಸ್ನೆಸ್ ಯೂಸರ್ ಗಳು ಬೇಕೆಂದಾಗಲೆಲ್ಲಾ FDA ಅಸ್ತ್ರ ಝಳಪಿಸುತ್ತಾ ಬಂದು ಬಿಡುತ್ತಾರೆ. ಆ ದರಿದ್ರ ರಿಪೋರ್ಟ್ ಯಾಕೆ ಸರಿಯಾಗಿ ಜನರೇಟ್ ಆಗುತ್ತಿಲ್ಲ ಎಂದು ನೋಡಲು, ಅಪ್ಲಿಕೇಶನ್ನಿನ ಎಲ್ಲಾ ಘಟಕಗಳನ್ನೂ ಹಿಂಜಿ, ಎಂಟ್ರಿ ಮಾಡಿದ ಮಾಹಿತಿ ಸರಿಯಾದ ಫಾರ್ಮ್ಯಾಟ್ ನಲ್ಲಿದೆಯೇ ಎಂದು ಪರಿಶೀಲಿಸಿ, ದೋಷ ಎಲ್ಲಿದೆ ಎಂದು ಕಂಡುಹಿಡಿದು, ಅದನ್ನು ಸರಿಪಡಿಸಿ, ತಲೆಯ ಮೇಲೇ ಕೂತಿದ್ದ ಲೀಸಾಗೆ ರಿಪೋರ್ಟ್ ಮಾಡಿಕೊಡುವಷ್ಟರಲ್ಲಿ ಏಳೂ ಮುಕ್ಕಾಲಾಯಿತು. ಅಷ್ಟರಲ್ಲಿ ಮನೆಯಿಂದ ಎರಡು ಮೂರು ಕಾಲ್ ಗಳು ಬೇರೆ. ಕೆಲಸ ಮುಗಿದ ತಕ್ಷಣ "ಓಕೆ, ಸೀ ಯು ಟುಮಾರೋ" ಎಂದು ಹೋರಾಟ ಲೀಸಾಗೆ ದೇಶಾವರಿ ವಿದಾಯ ಹೇಳಿ, ಮತ್ತೊಮ್ಮೆ ಅಪ್ಲಿಕೇಶನ್ ಸರಿಯಾಗಿ ಕೆಲಸ ನಿರ್ವಹಿಸುತ್ತಿದೆಯೇ ಎಂದು ಪರೀಕ್ಷಿಸಿ ಅವನು ಪಾರ್ಕಿಂಗ್ ಲಾಟ್ ಗೆ ಬರುವಷ್ಟರಲ್ಲಿ ರಾತ್ರಿ ೮:೧೦. ಸದ್ಯ ಈಗ ರಸ್ತೆಯಲ್ಲಿ ಹೆಚ್ಚು ಟ್ರಾಫಿಕ್ ಇರುವುದಿಲ್ಲ, ಈ ನಲವತ್ತು ಮೈಲಿಯನ್ನು ಒಂದು ಗಂಟೆಯಲ್ಲೇ ಕ್ರಮಿಸಬಹುದು ಅಂತ ಖುಷಿಯಲ್ಲಿ ಹೊರಟ ೧೦ ನಿಮಿಷಕ್ಕೆ ಮಳೆ ಶುರು.

ಈ ದರಿದ್ರ ಸ್ಪ್ರಿಂಗ್ ಸೀಸನ್ ನಲ್ಲಿ ಹೇಳದೆ ಕೇಳದೆ ಯಾವಾಗಂದರೆ ಆಗ ಮಳೆ ಹಿಡಿದುಬಿಡುತ್ತದೆ. ಮಳೆಯ ನಾಲ್ಕು ಹನಿ ಬಿದ್ದರೆ ಸಾಕು, ಗಾರ್ಡನ್ ಸ್ಟೇಟ್ ಪಾರ್ಕ್ ವೇಯ ಒಂದಿಲ್ಲೊಂದು ಕಡೆ ಯಾರೋ ಒಬ್ಬ ತಲೆಕೆಟ್ಟವನು ಯದ್ವಾತದ್ವ ಗಾಡಿ ಓಡಿಸಿ, ಫೆಂಡರ್ ಬೆಂಡರ್ ಮಾಡಿ, ಬ್ಯಾಕ್ ಅಪ್ ಸೃಷ್ಟಿಸಿಯೇ ಬಿಟ್ಟಿರುತ್ತಾನೆ. ಸಂದೀಪನ ಆತಂಕ ಸುಳ್ಳಾಗಲಿಲ್ಲ. ಯೂನಿಯನ್ ಟೋಲ್ಸ್ ಹತ್ತಿರವಾಗುತ್ತಿದ್ದಂತೆ ಕಾರುಗಳ ಟೇಲ್ ಲ್ಯಾಂಪ್ ಗಳ ಕೆಂಪು ದೀಪಗಳ ಮೈಲುದ್ದದ ಸಾಲು ಅವನನ್ನು ಸ್ವಾಗತಿಸಿತು. ಇನ್ನು ಮನೆ ಸೇರುವುದೇ ಹತ್ತೋ, ಹತ್ತೂವರೆಯೋ ಎಂದು ಹತಾಶನಾಗಿ ಕೂತಿದ್ದರೆ, ಮನೆಯಿಂದ ಕಾಲ್ ಮಾಡಿ, "ಎಲ್ಲಿದ್ದೀಯಾ?" "ರಸ್ತೆಯಲ್ಲಿ ಏನಾಗಿದೆ?" "ಬರುವುದು ಎಷ್ಟೊತ್ತಾಗಬಹುದು?" ಎಂಬ ಪ್ರಶ್ನೆಗಳ ಸುರಿಮಳೆ ಬೇರೆ. ಅದೆಲ್ಲಾ ಗೊತ್ತಿದ್ದರೆ ನಾನು ಕಾರಿನಲ್ಲಿ ಕುಳಿತುಕೊಂಡು ಇದ್ದಬದ್ದವರಿಗೆಲ್ಲಾ ಶಾಪ ಯಾಕೆ ಹಾಕುತ್ತಿದ್ದೆ. ನಾಳೆ ಸ್ವಲ್ಪ ಲೇಟಾಗಿ ಬರೋಣವೆಂದರೆ, ೯ ಗಂಟೆಯ ವಾರದ ಸ್ಟೇಟಸ್ ಮೀಟಿಂಗ್ ಗೆ ಸರಿಯಾದ ಸಮಯಕ್ಕೆ ಹಾಜರಾಗಲೇ ಬೇಕು. ಇಲ್ಲದಿದ್ದರೆ, ವಾರಕ್ಕೊಂದು ದಿನ ಕೂಡಾ ಸರಿಯಾದ ಸಮಯಕ್ಕೆ ಬರಲಾಗುವುದಿಲ್ಲವೇ ಎಂದು ಎಲ್ಲರ ಕಣ್ಣೂ ಕೆಂಪು. ಅಂತೂ ಮನೆ ಸೇರಿ, ಒಂದಷ್ಟು ಊಟ ಹೊಟ್ಟೆಗೆ ತುರುಕಿಕೊಂಡು ಮಲಗುವಷ್ಟರಲ್ಲಿ ಮಧ್ಯ ರಾತ್ರಿ ೧೨:೦೦ ಹೊಡೆಯಿತು.

ಬೆಳಿಗ್ಗೆ ದಡಬಡಿಸಿಕೊಂಡೆದ್ದು, ರೆಡಿಯಾಗಿ ಏಳೂವರೆಗೆ ಕಾರ್ ಸ್ಟಾರ್ಟ್ ಮಾಡಿದರೆ, ಸಂದೀಪನಿಗೆ ಮೊದಲು ಕಂಡಿದ್ದೇ ಗ್ಯಾಸ್ ರಿಸರ್ವ್ ಗೆ ಬಂದಿರುವ ಇಂಡಿಕೇಟರ್. ಓ, ನಿನ್ನೆ ಮನೆ ಇನ್ನೂ ಇಪ್ಪತ್ತು ಮೈಲಿ ಇರುವಾಗ್ಗೆ ರಿಸರ್ವ್ ಗೆ ಬಂದಿದ್ದು ಆಗ ಜ್ಞಾಪಕಕ್ಕೆ ಬಂತು. ದಾರಿಯಲ್ಲಿ ಗ್ಯಾಸ್ ಹಾಕಿಸಿಕೊಂಡು ಹೋಗದಿದ್ದರೆ ರಸ್ತೆಯ ಮಧ್ಯೆ ಕಾರು ನಿಂತುಹೋಗುವುದು ಗ್ಯಾರಂಟಿ. ಇಂಥದಕ್ಕೇ ಇರಬೇಕು "ಬರಗಾಲದಲ್ಲಿ ಅಧಿಕ ಮಾಸ" ಅನ್ನೋದು!

(ಮುಂದಿನ ಪುಟಕ್ಕೆ)

## ಸಣ್ಣ ಕತೆಗಳು

### ಕ್ಷೋಭೆಯ ದಿನಗಳಲ್ಲೊಂದು ಮಧುರ ಮುಂಜಾವು

**(ಮುಂದುವರೆದುದು)**

ಮೆಟ್ರೋಪಾರ್ಕಿಗೆ ಮುಂಚಿನ ಗ್ಯಾಸ್ ಸ್ಟೇಷನ್ ನಲ್ಲಿ ನಿಲ್ಲಿಸಿ ಗ್ಯಾಸ್ ಹಾಕಿಸಿ, ಅಲ್ಲಿ ಗ್ಯಾಸ್ ಹಾಕುವ ಪಾಕಿಸ್ತಾನ್-ಪಂಜಾಬಿ ಹುಡುಗನ ಕಥೆಗಳಿಂದ ಬೇಗ ತಪ್ಪಿಸಿಕೊಂಡು, ಜಿ ಎಸ್ ಪಿ ಇನ್ನೇನು ಅರ್ಧ ಮೈಲಿ ಎನ್ನುವಷ್ಟರಲ್ಲಿ, ಮೆಟ್ರೋ ಪಾರ್ಕ್ ಸ್ಟೇಷನ್ ಹತ್ತಿರ ಕಾರುಗಳು ತಟಸ್ಥವಾಗಿ ನಿಂತು ಹೋಗಿವೆ. ಸಂದೀಪನೂ ನೂರನೆಯವನ ಹಿಂದೆ ನೂರೊಂದನವನಾದ. ನೋಡಿದರೆ ಸಿಗ್ನಲ್ ಹಸಿರು ಬಣ್ಣವನ್ನೇ ತೋರುತ್ತಿದೆ. ಯಾಕೆ ಯಾರೂ ಒಂದಿಂಚೂ ಕದಲುತ್ತಿಲ್ಲ? ಯಾವನೋ ಕಾರಿನವನು ಯಾರಿಗಾದರೂ ಗುದ್ದಿದ್ದಾನಾ? ಇನ್ನೇನಪ್ಪಾ ಗತಿ? ಅವನಿಗೆ ಮೈಯೆಲ್ಲಾ ಪರಚಿಕೊಂಡು, ತಲೆ ಕೂದಲು ಕಿತ್ತುಕೊಳ್ಳುವಂತಾಯಿತು. ಯಾವನೂ ಹಾಂಕ್ ಕೂಡಾ ಮಾಡದೇ ನಿಶ್ಚಲವಾಗಿ ನಿಂತಿರುವುದು ನೋಡಿದರೆ, ಇವರಿಗೆಲ್ಲಾ ಏನು ತಲೆ-ಗಿಲೆ ಕೆಟ್ಟಿದೆಯಾ? ಅಷ್ಟರಲ್ಲಿ ಕೆಂಪು ದೀಪ ಬಂದೂ ಆಯಿತು. ಹಸಿರು ದೀಪ ಇರುವ ರಸ್ತೆಯಲ್ಲೂ ಯಾರೂ ಚಲಿಸುತ್ತಿಲ್ಲ. ಹೀಗೆ ನಾಲ್ಕು ದಿಕ್ಕುಗಳಲ್ಲೂ ತಟಸ್ಥವಾಗಿ ಮೂರು ಸಿಗ್ನಲ್ ಬಂದು ಹೋಯಿತು. ಅವನಿಗೆ ಹುಚ್ಚು ಹಿಡಿದು ಕಿರಿಚುವುದೊಂದು ಬಾಕಿ.

ಅಷ್ಟರಲ್ಲಿ ಒಂದು ಬಾತುಕೋಳಿ ಬುದ್ಧನ ಪ್ರಶಾಂತತೆಯಿಂದ ನಿಧಾನವಾಗಿ ಬಲಗಡೆಯಿಂದ ರಸ್ತೆ ಹಾದು ಎಡಕ್ಕೆ ಹೋಗುವುದು ಕಾಣಿಸಿತು. ಅದರ ಹಿಂದೆ ಇನ್ನೊಂದು.. ಮತ್ತೊಂದು... ಹೀಗೆ ಇಪ್ಪತ್ತರಿಂದ ಇಪ್ಪತ್ತೆರಡು ದೊಡ್ಡ, ಸಣ್ಣ, ಪುಟ್ಟ ಬಾತು ಕೋಳಿಗಳು, ಇಡೀ ಪ್ರಪಂಚದಲ್ಲಿ ತಾವು ಮಾತ್ರ ಇದ್ದೇವೆ ಎನ್ನುವಂತೆ ಗಜ ಗಮನದಿಂದ ಚಲಿಸಿದವು. ಆತ್ಮ ಸಾಕ್ಷಾತ್ಕರಿಸಿಕೊಂಡ ಸಂತನ ಪ್ರಶಾಂತತೆ ಅವುಗಳ ಚಲನೆಯಲ್ಲಿತ್ತು. ಮಾನವ ಜೀವಿಗಳ ಯಾಂತ್ರಿಕ ಚಕ್ರ ಕೆಲವು ಘಳಿಗೆ ಏಕೆ ತಟಸ್ಥವಾಯಿತೆಂದು ಸಂದೀಪನಿಗೆ ಆಗ ತಿಳಿಯಿತು. ಮುಂಜಾವಿನ ಎಳೆ ಬಿಸಿಲ ಪ್ರಕಾಶದಲ್ಲಿ, ಹೊಳೆ ಹೊಳೆಯುತ್ತಾ ಸಾಗುತ್ತಿದ್ದ ಈ ಬಾತುಕೋಳಿಗಳ ಸಾಲು, ಆ ಕಪ್ಪು ರಸ್ತೆಗೆ ಹಾಕಿದ ಮಲ್ಲಿಗೆ ಮಾಲೆಯಂತೆ ತೋರುತ್ತಿತ್ತು. ಆ ಘಳಿಗೆಯಲ್ಲಿ ಎಲ್ಲಾ ಮರೆತು, ಆರ್ದ್ರ ಅನುಭೂತಿಯೊಂದು ಸಂದೀಪನ ಮನಸ್ಸಿನ ತುಂಬಾ ತುಂಬಿಕೊಂಡು, ತುಟಿಯ ಮೇಲೆ ಮುಗುಳು ನಗೆ ಮಿಂಚಿತು. ■

## ಮಿನಿ ಮಿನಿ ಕಥೆಗಳು

### ಅನುವಾದ: ದಾಶರಥಿ ಘಟ್ಟು

**(ವಾಟ್ಸಾಪ್ ಕೃಪೆ)**

೧) ಬೇಸಿಗೆ ರಜಾ ಮುಗಿದು, ಇಂದಿನಿಂದ ಶಾಲೆ ಮತ್ತೆ ಪ್ರಾರಂಭವಾಗುತ್ತದೆಂದು ಆ ಪುಟ್ಟ ಹುಡುಗಿ ತುಂಬಾ ಸಂತೋಷದಿಂದಳು. ತನ್ನ ಕುಟುಂಬಕ್ಕೆ ನೆರವಾಗಲು ಅವಳು ಮತ್ತೆ ಪೆನ್ನು, ನೋಟ್ಬುಕ್ ಮುಂತಾದ ಬರೆಯುವ ಸಾಮಗ್ರಿಗಳನ್ನು ಟ್ರಾಫಿಕ್ ಸಿಗ್ನಲ್ ನಲ್ಲಿ ಇಂದು ಮಾರಲು ಪ್ರಾರಂಭಿಸಬಹುದು. ■

೨) ಹೆಸರಾಂತ ಚಿತ್ರ ಕಲಾವಿದೆಯೂ, ಕಟ್ಟುನಿಟ್ಟಾದ ತಾಯಿಯೂ ಆದ ಅವಳು ತನ್ನ ೬ ವರ್ಷದ ಮಗ ಸರಿಯಾಗಿ ಒಂದು ನೇರ ಗೆರೆ ಎಳೆಯಲು ಸಮರ್ಥನಿಲ್ಲವೆಂದು ಪದೇ ಪದೇ ನಿಂದಿಸುತ್ತಿದ್ದಳು. ಅದೇ ಮಗು ಇಂದು ವೆಂಟಿಲೇಟರ್ ಸಹಾಯದಿಂದ ಉಸಿರಾಡಲು ಪ್ರಯತ್ನಿಸುತ್ತಿರುವಾಗ, ECG ಉಪಕರಣದ ಮೇಲೆ ವಕ್ರ ಗೆರೆಗಳನ್ನು ಮೂಡಿಸೆಂದು ಅವನನ್ನು ಬೇಡಿಕೊಳ್ಳುತ್ತಿದ್ದಾಳೆ. ■

೩) "ಶ್ರೀಮಂತ ತಂದೆ ತಾಯಿಗಳ ಒಬ್ಬನೇ ಮಗನಾದ ಈ ಹುಡುಗ ಬಹಳ ಅದೃಷ್ಟವಂತ" ಅಕ್ಕ ಪಕ್ಕದ ಜನ ಆ ಹುಡುಗನನ್ನು ನೋಡಿ ಉದ್ಗಾರ ಮಾಡಿದರು. ಇದನ್ನು ಕೇಳಿ ಗರ್ಭಪಾತದಿಂದಾಗಿ ಜನಿಸದ ಅವನ ಮೂರು ಅಕ್ಕಂದಿರು ಸ್ವರ್ಗಲೋಕದ ಯಾವುದೋ ಮೂಲೆಯಲ್ಲಿ ಕುಳಿತು ಕಣ್ಣೀರ್ಗರೆದರು. ■

## ಸಣ್ಣ ಕತೆಗಳು

# ಮೂರು ಝೆನ್ ಕಥೆಗಳು

**ಅನುವಾದ: ದಾಶರಥಿ ಘಟ್ಟು**

### ೧) ಆಹಾ ! ಈ ಹಣ್ಣು ಎಷ್ಟು ಸಿಹಿ !

ಒಂದು ಕಾಡನ್ನು ದಾಟುತ್ತಿರುವ ವೇಳೆಯಲ್ಲಿ ಒಬ್ಬ ದಾರಿಹೋಕ ಹಠಾತ್ತಾಗಿ ಹುಲಿಯನ್ನು ಕಂಡ. ಜೀವ ಭಯದಿಂದ ಅವನು ಓಡತೊಡಗಿದ. ಆದರೆ ಹುಲಿ ಅಟ್ಟಿಸಿಕೊಂಡು ಅವನ ಬೆನ್ನಟ್ಟಿ ಓಡಿತು. ಓಡುತ್ತಾ ಓಡುತ್ತಾ ಆ ಮನುಷ್ಯ ಒಂದು ದೊಡ್ಡ ಕಮರಿಯ ಬಳಿಗೆ ಬಂದ. ಅಲ್ಲಿ ಅವನಿಗೆ ಕಮರಿಯ ತುದಿಯಲ್ಲಿ ಬೆಳೆದ ಬಳ್ಳಿಗಳು ಕಂಡವು. ಹುಲಿಯಿಂದ ತಪ್ಪಿಸಿಕೊಳ್ಳಲು ಅವನು ಆ ಬಳ್ಳಿಗಳನ್ನು ಹಿಡಿದು ಕಮರಿಯ ತುದಿಯಿಂದ ಕಮರಿಯೊಳಗೆ ಹಾರಿ ಬಳ್ಳಿಯಿಂದ ನೇತಾಡತೊಡಗಿದ.

ಅವನನ್ನು ಅಟ್ಟಿಸಿಕೊಂಡು ಬಂದ ಹುಲಿ ಕಮರಿಯ ತುದಿಯಲ್ಲಿ ಕುಳಿತು ಗುರುಗುಟ್ಟುತ್ತಾ ಇವನಿಗೆ ಕಾಯತೊಡಗಿತು. ಆ ದುರ್ಬಲ ಬಳ್ಳಿಯಿಂದ ನೇತಾಡುತ್ತಾ ಅತಂತ್ರನಾಗಿದ್ದ ಅವನು ಕೆಳಗೆ ನೋಡಿದರೆ, ಮತ್ತೊಂದು ಹುಲಿ ಅಲ್ಲಿ ನಿಂತು ಇವನನ್ನು ನೋಡಿ ಗುರುಗುಟ್ಟುತ್ತಿತ್ತು. ಭಯದಿಂದ ನಡುಗುತ್ತಾ ಅವನು ಆ ಬಳ್ಳಿಯನ್ನೇ ಅವಚಿ ಹಿಡಿದು, ತನ್ನ ಪರಿಸ್ಥಿತಿಗೆ ಕಣ್ಣೀರಿಡತೊಡಗಿದ. ಅವನ ಆ ಸ್ಥಿತಿಗಿಂತಾ ಕೆಟ್ಟದ್ದು ಯಾವುದಿದ್ದೀತು?

ಅಷ್ಟರಲ್ಲಿ ಎಲ್ಲಿಂದಲೋ ಎಗರಾಡುತ್ತಾ ಬಂದ ಎರಡು ಇಲಿಗಳು ಅವನು ಹಿಡಿದಿದ್ದ ಬಳ್ಳಿಯನ್ನು ಕುರುಕತೊಡಗಿದವು. ಅವು ಬಳ್ಳಿ ಕುರುಕುತ್ತಿದ್ದಾಗ, ಆ ಮನುಷ್ಯ ತನ್ನ ವಿಧಿ ಇನ್ನೆಷ್ಟು ಹೊತ್ತೋ ಎಂದು ಧ್ಯಾನಿಸತೊಡಗಿದ. ಆಗ ತಟ್ಟನೆ ಅವನಿಗೆ ಆ ಬಳ್ಳಿಯಲ್ಲಿ ಬಿಟ್ಟಿದ್ದ ಒಂದು ರಸ ತುಂಬಿದ ಹಣ್ಣು ಕಂಡಿತು. ಒಂದು ಕೈಯಿಂದ ಬಳ್ಳಿ ಹಿಡಿದುಕೊಂಡು, ಮತ್ತೊಂದು ಕೈಯಿಂದ ಆ ಹಣ್ಣು ಕಿತ್ತು ಅದನ್ನು ಬಾಯಲ್ಲಿಟ್ಟುಕೊಂಡ. "ಆಹಾ ! ಎಂಥ ರುಚಿಯಾದ ಹಣ್ಣು." ■

### ೨) ನಿಜವಾದ ಭಾಗ್ಯ

ಒಬ್ಬ ಶ್ರೀಮಂತ ವ್ಯಕ್ತಿ ಝೆನ್ ಗುರು ಷೆಂಗೈನನ್ನ ತನ್ನ ಕುಟುಂಬದ ಉನ್ನತಿ ಮತ್ತು ಸಮೃದ್ಧಿಗಾಗಿ ಯಾವುದಾದರೂ ಆಶೀರ್ವಚನ ಬರೆದು ಕೊಡಬೇಕೆಂದೂ, ಅದು ಮುಂದಿನ ಅನೇಕ ಪೀಳಿಗೆಗಳು ನಿಧಿಯಂತೆ ಭದ್ರವಾಗಿಟ್ಟುಕೊಳ್ಳುವಂತಿರಬೇಕೆಂದೂ ವಿನಂತಿಸಿಕೊಂಡನು. ಷೆಂಗೈ ಉತ್ತಮ ಗುಣದ ಒಂದು ದೊಡ್ಡ ಕಾಗದವನ್ನು ತರಿಸಿ ಅದರ ಮೇಲೆ "ಅಪ್ಪ ಸಾಯುತ್ತಾನೆ, ನಂತರ ಮಕ್ಕಳು ಸಾಯುತ್ತಾನೆ, ನಂತರ ಮೊಮ್ಮಕ್ಕಳು ಸಾಯುತ್ತಾರೆ" ಎಂದು ಬರೆದುಕೊಟ್ಟ.

ಶ್ರೀಮಂತನಿಗೆ ತಾಳಲಾರದಷ್ಟು ಕೋಪ ಬಂದು, " ನಾನು ನಿಮ್ಮನ್ನು ನಮ್ಮ ಕುಟುಂಬದ ಸಂತೋಷಕ್ಕಾಗಿ ಏನನ್ನಾದರೂ ಬರೆದುಕೊಡಿ ಎಂದರೆ, ಈ ರೀತಿಯ ತಮಾಷೆ ಯಾಕೆ ಮಾಡುತ್ತೀರಿ?" ಎಂದು ಕಿರುಚಿದನು.

"ಇದರಲ್ಲಿ ಪರಿಹಾಸ್ಯ ಏನು ಬಂತು?", ಷೆಂಗೈ ವಿವರಿಸಿದನು. "ನೀನು ಸಾಯುವ ಮುಂಚೆ ನಿನ್ನ ಮಕ್ಕಳು ಸತ್ತರೆ ನಿನಗೆ ತುಂಬಾ ದುಃಖವಾಗುತ್ತದೆ. ನಿನ್ನ ಮೊಮ್ಮಕ್ಕಳು ನಿನ್ನ ಮಕ್ಕಳು ಮತ್ತು ನಿನಗಿಂತ ಮುಂಚೆ ಸತ್ತರೆ, ನಿಮಗೆ ಪ್ರಪಂಚವೇ ಬೇಡವಾಗುತ್ತದೆ. ನಿನ್ನ ಎಲ್ಲಾ ಪೀಳಿಗೆಗಳೂ ನಾನು ಬರೆದುಕೊಟ್ಟ ರೀತಿಯಲ್ಲಿ ಸತ್ತರೆ, ಅದು ಪ್ರಕೃತಿಯ ಸಹಜ ಕ್ರಮವಾಗಿದ್ದು, ನಿಮ್ಮ ಕುಟುಂಬದ ನೆಮ್ಮದಿ ಉಳಿದಿರುತ್ತದೆ. ಅದಕ್ಕಿಂತ ದೊಡ್ಡ ಭಾಗ್ಯ ಇನ್ನೇನಿದೆ? " ■

(ಮುಂದಿನ ಪುಟಕ್ಕೆ)

## ಸಣ್ಣ ಕತೆಗಳು

# ಮೂರು ಝೆನ್ ಕಥೆಗಳು

**ಅನುವಾದ: ದಾಶರಥಿ ಘಟ್ಟು**

## ೩) ಈ ಕ್ಷಣವನ್ನು ಅನುಭವಿಸಿ ಆನಂದಿಸು... ನಿನ್ನ ಕೈಯಲ್ಲಿರುವುದು ಅಷ್ಟೇ

ಝೆನ್ ಪಂಥದ ಶ್ರೇಷ್ಠ ಗುರುವಾದ ಬಾಂಕೈ ತನ್ನ ಪ್ರವಚನಗಳಿಂದ ತುಂಬಾ ಪ್ರಖ್ಯಾತನಾಗಿದ್ದನು. ಅವನು ತನ್ನ ಅನುಭವವನ್ನು ಮಾತ್ರ ಉಪದೇಶಿಸುತ್ತಿದ್ದುದರಿಂದ ಎಲ್ಲಾ ಪಾಠದ, ಎಲ್ಲಾ ಸ್ಥರದ ಜನರೂ ಅವನ ಪ್ರವಚನಗಳನ್ನು ಕೇಳಲು ಬರುತ್ತಿದ್ದರು. ಬಾಂಕೈ ತುಂಬಾ ಗೌರವಾನ್ವಿತನಾಗಿದ್ದು, ಅವನ ಉಪದೇಶಗಳನ್ನು ಎಲ್ಲ ಸ್ಥರದ ಜನರೂ ಒಪ್ಪಿಕೊಂಡಿದ್ದರು.

ಬಾಂಕೈ ನ ಪ್ರಖ್ಯಾತಿಯನ್ನು ನೋಡಿ ಇನ್ನೊಂದು ಪಂಥದ ಗುರುವಿಗೆ ಕ್ರೋಧ ಬಂತು. ಮೇಲಾಗಿ ಅವನ ಅನುಯಾಯಿಗಳು, ಅವನನ್ನು ಬಿಟ್ಟು ಬಾಂಕೈ ಪ್ರವಚನ ಕೇಳಲು ಹೋಗುತ್ತಿದ್ದರು. ಈ ಬಾಂಕೈ ಶಾಸ್ತ್ರಗಳ ವಿದ್ವಾಂಸನಾಗಿಲ್ಲದಿದ್ದರೂ, ಅಷ್ಟು ಜನ ಅವನ ಅನುಯಾಯಿಗಳಾಗುತ್ತಿದ್ದಾರೆ ಎಂಬುದೇ ಈ ಪಂಡಿತೋತ್ತಮ ಗುರುವಿಗೆ ಅರ್ಥವಾಗಲಿಲ್ಲ. ಬಾಂಕೈನ ಪ್ರಸಿದ್ಧಿಯ ಬಗ್ಗೆ ಹೆಚ್ಚು ಯೋಚಿಸಿದಷ್ಟೂ, ಪಂಡಿತನ ಈರ್ಷ್ಯೆ ಹೆಚ್ಚುತ್ತಿತ್ತು. ಬಾಂಕೈನನ್ನು ವಾದಕ್ಕೆ ಕರೆದು, ಅವನನ್ನು ಸೋಲಿಸಿ, ಅವನ ಗರಿಮೆಗೆ ಇತಿಶ್ರೀ ಹಾಡಿಯೇ ಬಿಡುತ್ತೇನೆಂದು ಈ ಪಂಡಿತ ಒಂದು ದಿನ, ಬಾಂಕೈ ಪ್ರವಚನ ಕೊಡುತ್ತಿದ್ದ ದೇವಾಲಯದೊಳಕ್ಕೆ ಬಿರುಗಾಳಿಯಂತೆ ನುಗ್ಗಿದ.

ಪ್ರವಚನ ನಡೆಯುತ್ತಿದ್ದ ಜಾಗಕ್ಕೆ ಹೋಗಿ "ಏ ಝೆನ್ ಗುರುವೇ! ಇಲ್ಲಿ ಸೇರಿರುವ ಜನರೆಲ್ಲಾ ನಿನ್ನ ಪ್ರವಚನ ಕೇಳಲು ಬಂದ ಮಾತ್ರಕ್ಕೆ, ನಿನಗೆ ಅವರ ಮೇಲೆ ಹಿಡಿತ ಇದೆ ಎಂದು ಭಾವಿಸಿರುವೆ. ಅವರು ನಿನ್ನನ್ನು ಗೌರವಿಸುವುದರಿಂದ ನಿನಗೆ ವಿಧೇಯರಾಗಿದ್ದರಷ್ಟೇ. ಆದರೆ ನನಗೆ ನಿನ್ನ ಬಗ್ಗೆ ಎಳ್ಳಷ್ಟೂ ಗೌರವವಿಲ್ಲ. ನಾನು ನಿನಗೆ ವಿಧೇಯತೆ ತೋರುವಂತೆ ಮಾಡಬಲ್ಲೆಯಾ?" ಎಂದು ಕಿರುಚಿ ಕೇಳಿದನು.

ಪಂಡಿತನ ಕ್ರೋಧ ಬಾಂಕೈಗೆ ಅಚ್ಚರಿ ತರಿಸಿ ತಮಾಷೆಯೆನಿಸಿತು. ಬಾಂಕೈ ಮೃದುವಾಗಿ ಹೇಳಿದ "ಸ್ವಾಮಿ, ನಿಮ್ಮೊಡನೆ ನಾನು ಸಂವಾದಿಸಬೇಕಾದರೆ, ತಾವು ದಯವಿಟ್ಟು ನನ್ನ ಹತ್ತಿರಕ್ಕೆ ಬರಬೇಕು."

ದುರಹಂಕಾರದಿಂದ ಬೀಗುತ್ತಾ ಆ ಪಂಡಿತ ಜನರ ಗುಂಪಿನಲ್ಲಿ ದಾರಿ ಮಾಡಿಕೊಂಡು, ಬಾಂಕೈ ಕುಳಿತಿದ್ದ ಜಾಗಕ್ಕೆ ಹೋದ.

ಬಾಂಕೈ ಹೇಳಿದ "ದಯವಿಟ್ಟು ನನ್ನ ಎಡಕ್ಕೆ ಬನ್ನಿ, ನಾನು ನಿಮ್ಮನ್ನು ಚೆನ್ನಾಗಿ ನೋಡಲು ಸಾಧ್ಯ."

ಪಂಡಿತ ಬಾಂಕೈನ ಎಡ ಭಾಗಕ್ಕೆ ಹೋಗಿ ನಿಂತ.

"ಓ, ಅದೇಕೋ ಸರಿಹೋಗುತ್ತಿಲ್ಲ. ತಾವು ನನ್ನ ಬಲ ಭಾಗಕ್ಕೆ ಬಂದರೆ ಸೂಕ್ತ ಎನ್ನಿಸುತ್ತದೆ."ಬಾಂಕೈ ಮತ್ತೆ ಹೇಳಿದ.

ಈಗ ಪಂಡಿತ ಝೆನ್ ಗುರುವಿನ ಬಲ ಭಾಗಕ್ಕೆ ಹೋಗಿ ಅವನ ಮುಖ ನೋಡುತ್ತಾ ನಿಂತ.

ಬಾಂಕೈ ಮುಗುಳು ನಗುತ್ತಾ ಹೇಳಿದ, "ನೋಡಿ, ನೀವು ನಾನು ಹೇಳಿದಂತೆ ಇಲ್ಲಿಗೆ ಬಂದಾಗಿನಿಂದಲೂ ಮಾಡುತ್ತಿದ್ದೀರಿ. ಇದರಿಂದ ನೀವು ಒಬ್ಬ ಒಳ್ಳೆಯ ಸ್ವಭಾವದ ಉದಾರ ಮಹನೀಯರೆಂದು ನಾನು ನಂಬುತ್ತೇನೆ."

ಆ ಪಂಡಿತನಿಗೆ ತನ್ನಕೆಟ್ಟ ನಡವಳಿಕೆಯ ಬಗ್ಗೆ ನಾಚಿಕೆಯಾಯಿತು. ಅವನು ಬಾಂಕೈ ಗುರುವಿನ ಕ್ಷಮೆ ಯಾಚಿಸಿ, ಪ್ರವಚನ ಕೇಳಲು ಕುಳಿತ. ■

## ಸಣ್ಣ ಕತೆಗಳು



*ಶ್ರೀವಿದ್ಯಾ ಪ್ರಶಾಂತ್*

# ಕಡಲಾಚೆಯ ಕನಸು

ಮನುಷ್ಯ ಜೀವನ ಒಂದು ಜಟಕಾ ಬಂಡಿಯಂತೆ, ಏರು ಪೇರುಗಳು ಸರ್ವೇ ಸಾಮಾನ್ಯ. ಆದಾಗ್ಯೂ ಗುರಿ ಮುಟ್ಟುವ ತನಕ ಧೃತಿಗೆಡದೆ ಮುಂದೆ ನಡೆದರೆ ವಿಜಯವು ನಮ್ಮದೇ. ಆಗಲೇ ಜೀವನಕ್ಕೊಂದು ಸಾರ್ಥಕತೆ.

ಅಂದು ಸೋಮವಾರ, ವಾರದ ಮೊದಲ ವರ್ಕಿಂಗ್ ಡೇ. ವೀಕೆಂಡಿನ ರೆಲಾಕ್ಸಿಂಗ್ ಮೂಡಿನಿಂದ ಮತ್ತೆ ಬದುಕಿನ ಜಂಜಾಟವನ್ನು ಎದುರಿಸಲು ಉದ್ಯೋಗಕ್ಕೆ ತೆರಳಬೇಕಾದಂತಹ ದಿನ. ಎಂದಿನಂತೆ ವಾಹನಗಳಿಂದ ತುಂಬಿ-ತುಳುಕುವ ಬೆಂಗಳೂರಿನ ಬಿಜ್ಜೀ ರಸ್ತೆಗಳು, ನಿಲ್ಲದ ಸಿಗ್ನಲ್ಗಳು ಅದರೊಂದಿಗೆ ಮುಗಿಯದ ಟ್ರಾಫಿಕ್ ಜಾಮ್ಗಳು ಹೀಗೆ ಎಲ್ಲವನ್ನೂ ಮ್ಯಾನೇಜ್ ಮಾಡಿಕೊಂಡು ಅಫೀಸ್ ತಲಪುವ ಹೊತ್ತಿಗೆ ಆಗಲೇ ಗಂಟೆ ೧೦ ಆಗಿತ್ತು. ರಾಜೇಶ ಆಗಿನ್ನು ಆ ದಿನದ ಮೊದಲ ಇ-ಮೈಲನ್ನು ಪರಿಶೀಲಿಸುತ್ತಿದಂತೆ, ಬಾಸ್ ನಿಂದ ಕರೆ ಬಂತು.  ತನ್ನ ಆಫೀಸಿನ ದಿನಚರಿಯನ್ನು ಆರಂಭಿಸುತ್ತಿದ್ದ ರಾಜೇಶನಿಗೆ ಅಂದು ಅಚ್ಚರಿಯೊಂದು ಕಾದಿತ್ತು. ದಿನ ಶುರುವಾಗುತ್ತಿದ್ದಂತೆ ತನ್ನ ಬಾಸ್ ನ ಕರೆಯಿಂದ ಸ್ವಲ್ಪ ಆತಂಕಗೊಂಡರೂ, ಬಂದದ್ದೆಲ್ಲಾ ಬರಲಿ ಭಗವಂತನ ದಯೆಯೊಂದಿರಲಿ ಎಂದುಕೊಳ್ಳುತ್ತಾ ಚೆಂಬರೊಳಗೆ ನಡೆದ. ಬಾಸ್ ರಾಜೇಶನನ್ನು ನೋಡುತ್ತಿದ್ದಂತೆ, "ಕಂಗ್ರಾಜುಲೇಷನ್ಸ್! ನಿಮ್ಮನ್ನು ನಮ್ಮ ಅಮೇರಿಕಾದ-ಚಿಕಾಗೂ ನಗರಿಯ ಹೊಸ ಪ್ರಾಜೆಕ್ಟ್ ಗೆ ಪ್ರಾಜೆಕ್ಟ್ ಮ್ಯಾನೆಜರ್ ಆಗಿ ಕಳಿಸಬೇಕೆಂದಿದ್ದೇವೆ..ಮುಂದಿನ ಹದಿನೈದು ದಿನಗಳೊಳಗೆ ನೀವು ತಮ್ಮ ಪ್ರಯಾಣ ಬೆಳೆಸಬೇಕು" ಎಂದಾಗ ರಾಜೇಶ ನ ಮನದಲ್ಲಿ ಮೂಡಿದ್ದ ಹಲವು ಪ್ರಶ್ನೆಗಳಿಗೆ ಸಾಂತ್ವನ ದೊರೆತಂತಾಯಿತು..ಕೊನೆಗೂ ವರುಷಗಳ ಕಡಲಾಚೆಯ ವಿದೇಶ ಭೇಟಿಯ ಕನಸು ನನಸಾಗುವ ಸಮಯ  ಬಂದೇ ಬಿಟ್ಟಿತು  ಎಂದುಕೊಳ್ಳುತ್ತಾ..ಬಾಸ್ ಗೆ ತನ್ನನ್ನು ಈ ಹುದ್ದೆಗೆ ಆಯ್ಕೆ ಮಾಡಿದಕ್ಕಾಗಿ ಧನ್ಯತೆಯನ್ನು ಸೂಚಿಸಿ ತನ್ನ ಕ್ಯೂಬಿಕಲ್ ಕಡೆ ನಡೆದ..

ರಾಜೇಶ ಎಮ್ ಟೆಕ್ ಮುಗಿಸಿ ಕಳೆದ ಮೂರು ವರುಷಗಳಿಂದ ಈ ಬೆಂಗಳೂರಿನ ಬಹುರಾಷ್ಟ್ರೀಯ ಸಂಸ್ಥೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದ. ಯಾವಾಗಲೂ ಏನನ್ನಾದರೂ ಸಾಧಿಸಬೇಕೆನ್ನುವ ಛಲ ಹಾಗೂ ಉತ್ತಮ ಆತ್ಮವಿಶ್ವಾಸ ಹೊಂದಿರುವ ವ್ಯಕ್ತಿತ್ವ. ಮನೆಯಲ್ಲಿ ಹಿರಿಮಗನಾಗಿದ್ದರಿಂದ ಯಾವುದೇ ವಿಚಾರವಿದ್ದರೂ ಬಹು ಜಾಣ್ಮೆಯಿಂದ ಯೋಚಿಸಿ ಕಾರ್ಯ ಪೂರೈಸುವ ಕಲೆ ಬಾಲ್ಯದಿಂದಲೇ ಕರಗತವಾಗಿತ್ತು.ಈ ಉತ್ತಮ ಪ್ರತಿಭೆ ಹಾಗೂ ಪರಿಶ್ರಮದ ಗುಣ ರಾಜೇಶನಿಗಿಂದು ಪ್ರತಿಷ್ಟಿತ ಅಮೇರಿಕಾ ದೇಶಕ್ಕೆ ಹೋಗುವ ಅವಕಾಶವನ್ನು ಕಲ್ಪಿಸಿ ಕೊಟ್ಟಿತ್ತು.

ಅಮೇರಿಕಾ ಎಂದರೆ ಎಲ್ಲರ ಮನದಲ್ಲೂ ಒಂದು ಅಮೋಘ ಕಲ್ಪನೆ..ಗಗನ ಚುಂಬಿ ಕಟ್ಟಡಗಳು, ವಿನೋದಭರಿತ, ಐಷಾರಾಮಿ ಜೀವನ ಎಂಬಿತ್ಯಾದಿ. ಅದಕ್ಕೆ ಸರಿಯಾಗಿ ಸಿದ್ಧಪಡಿಸಬೇಕಾದ ಪಾಸ್ಪೋರ್ಟ್,  ವೀಸಾ, ಸರ್ಟಿಫಿಕೇಟ್ ಎಂದು ಹತ್ತು ಹಲವು ದಾಖಲೆ ಪತ್ರಗಳು ಏನೋ ಚಂದ್ರಲೋಕವನ್ನೇ ಸೇರಲು ಪಡಬೇಕಾದ ಹರಸಾಹಸದಂತೆ. ತನ್ನ ಸೀಟಿಗೆ ಬಂದು ಕುಳಿತ ರಾಜೇಶನ ಮನದಲ್ಲಿ ಹಲವಾರು ಪ್ರಶ್ನೆಗಳು ಕಾಡಲಾರಂಭಿಸಿದುವು. ಮುಂದಿನ ಎರಡು ವಾರಗಳಲ್ಲಿ ಪೂರೈಸಬೇಕಾದ ಕಾರ್ಯಗಳ ಬಗ್ಗೆ ಯೋಚಿಸಲಾರಂಭಿಸಿದನು. ಮೊದಲು ತನ್ನ ಮನೆಗೆ ಫೋನಾಯಿಸಿ ಅಮ್ಮನ ಬಳಿ ತನಗೆ ದೊರೆತ ಅವಕಾಶದ ಬಗೆಗಿನ ವಿಚಾರವನ್ನು ತಿಳಿಸಿದನು.

**(ಮುಂದಿನ ಪುಟಕ್ಕೆ)**

## ಕಡಲಾಚೆಯ ಕನಸು (ಮುಂದುವರೆದುದು)

ವಿಷಯ ತಿಳಿದ ರಾಜೇಶನ ತಾಯಿ ಸರೋಜಮ್ಮನ ಸಂತೊಷಕ್ಕೆ ಪಾರವೇ ಇಲ್ಲದಂತಾಯಿತು. ಹಿರಿಮಗನ ಹಲವು ವರುಷಗಳ ವಿದೇಶ ಭೇಟಿಯ ಕನಸು ಇಂದಾದರೂ ನನಸಾಯಿತಲ್ಲಾ ಎಂಬ ಆನಂದ ಹಾಗೂ ಹೆಮ್ಮೆಯ ಮನೋಭಾವ. ಮನೆಯಲ್ಲೆಲ್ಲರಿಗೂ ಈ ವಿಷಯವನ್ನು ತಿಳಿಸಿ ಭಗವಂತನಿಗೆ ತುಪ್ಪದ ದೀಪವನ್ನು ಹಚ್ಚಿ ಕೃತಜ್ಞತೆಯನ್ನು ಸಲ್ಲಿಸಿ, ಮಗನ ಮುಂದಿನ ಪ್ರಯಾಣಕ್ಕೆ ತಯಾರಿ ನಡೆಸಲಾರಂಭಿಸಿದರು ಸರೋಜಮ್ಮ.

ಅಂತೂ-ಇಂತೂ ಪ್ರಯಾಣದ ದಿನ ಬಂದೇ ಬಿಟ್ಟಿತು. ತಾನು ನಂಬಿದ ಭಗವಂತ ಹಾಗೂ ಹಿರಿಯರ ಆಶೀರ್ವಾದ ಮತ್ತು ಸಹೋದರರ ಶುಭಹಾರೈಕೆಗಳೊಂದಿಗೆ ರಾಜೇಶ ತನ್ನ ಕಡಲಾಚೆಯ ಕನಸಿನ ದೇಶದೆಡೆ ಪಯಣ ಆರಂಭಿಸಿದ. ಬೆಳಗಿನ ಜಾವ ೨.೩೦ ರ ಸುಮಾರಿಗೆ ಬೆಂಗಳೂರಿನಿಂದ ಮೊದಲು ಫ್ರಾಂಕ್ಫರ್ಟ್ ಮತ್ತೆ ಅಲ್ಲಿಂದ ಚಿಕಾಗೋ, ಒಟ್ಟು ೨೧ ಘಂಟೆಗಳ ವಿಮಾನಯಾನ. ಅಮ್ಮ ಮಾಡಿಕೊಟ್ಟ ಚಕ್ಕುಲಿ-ಉಂಡೆ-ಸಾರಿನಪುಡಿ ಹಾಗೂ ಉಪ್ಪಿನ ಕಾಯಿ ಮತ್ತು ಸ್ವಲ್ಪ ಪಾತ್ರ-ಪರಡಿಗಳು ಹಾಗೆಯೇ ಅಲ್ಲಿನ ಹವಾಮಾನ ಮತ್ತು ಅಫೀಸ್ ಲೈಫಿಗೆ ತಕ್ಕಂತೆ ಬೇಕಾದ ಜಾಕೆಟ್-ಬ್ಲೇಜ಼ರ್ ಇತ್ಯಾದಿಗಳನ್ನು ನಿರ್ಧಿಷ್ಟ ಮಿತಿಯೊಳಗಿನ ಭಾರದ ಬ್ಯಾಗುಗಳಲ್ಲಿ ತುಂಬಿಕೊಂಡು ಮೊದಲ ಬಾರಿಗೆ ಸಪ್ತಸಾಗರದಾಚಿನ ಅಮೇರಿಕಾ ದೇಶಕ್ಕೆ ರಾಜೇಶ ನಿರ್ಗಮಿಸಿದ.

ಬೆಂಗಳೂರಿನಿಂದ ಹೊರಟ ಡೆಲ್ಟಾ ವಿಮಾನವು ೮ ಗಂಟೆಗಳ ಪಯಣದ ಬಳಿಕ ಫ್ರಾಂಕ್ಫರ್ಟ್ ನಗರವನ್ನು ತಲುಪಿತು. ಮತ್ತೆ ಮುಂದಿನ ಫ್ಲೈಟ್ ಗಾಗಿ ೩ ತಾಸುಗಳ ಕಾಲ ಕಾಯಬೇಕಾಗಿತ್ತು. ಅಷ್ಟು ಹೊತ್ತಿಗೆ ಆಗಲೇ ಭಾರತದಲ್ಲಿ ಮರುದಿನ ಮಧ್ಯಾಹ್ನವಾಗಿತ್ತು. ಮನೆಯವರೊಂದಿಗೆ ಮಾತನಾಡುವ ಹಂಬಲದಿಂದ ರಾಜೇಶ ಫೋನಾಯಿಸಿ ತಾನು ಆರಾಮವಾಗಿ ತನ್ನ ಪಯಣದ ಅರ್ಧ ದಾರಿಯನ್ನು ಸೇರಿರುವ ಬಗ್ಗೆ ಅಮ್ಮನಿಗೆ ತಿಳಿಸುತ್ತಾನೆ. ಸಂತೋಷಗೊಂಡ ಸರೋಜಮ್ಮ ಮಗನ ಮುಂದಿನ ಪಯಣಕ್ಕೆ ಶುಭ ಹಾರೈಸುತ್ತಾರೆ.

ಇತ್ತ ಫೋನಿಡುತ್ತಿದ್ದಂತೆಯೇ ರಾಜೇಶನಿಗೆ ಮುಂದಿನ ವಿಮಾನವನ್ನು ಹತ್ತಲು ಕರೆಬರಲಾರಂಭಿಸಿತು. ತಡಮಾಡದೆ ಫ್ಲೈಟ್ ಹತ್ತಿದ ರಾಜೇಶ ಜನರಿಂದ ತುಂಬಿಕೊಂಡ ಸೀಟುಗಳನ್ನು ನೋಡಿ ಆಶ್ಚರ್ಯಪಟ್ಟನು. ಹೇಗಾದರೂ ಇನ್ನುಳಿದ ೧೩ ಗಂಟೆಗಳನ್ನು ಕಳೆದರಾಯಿತು ಎಂದುಕೊಂಡು ಕಣ್ಮುಚ್ಚಿ ತನ್ನ ಸೀಟಿನಲ್ಲಿ ಕುಳಿತು ನಿದ್ರಿಸಲಾರಂಭಿಸಿದ. ಅದು ಅಕ್ಟೋಬರ್ ತಿಂಗಳ ಮೊದಲ ವಾರ, ಹವಾಮಾನವು ಸ್ವಲ್ಪ ಚಳಿ ಹಾಗೂ ತುಸು ಮೋಡ ಕವಿದು ಮಳೆ ಬರುವಂತಿತ್ತು. ಫ್ರಾಂಕ್ಫರ್ಟ್ ನಿಂದ ಹೊರಟ ವಿಮಾನವು ೬ ತಾಸುಗಳ ಬಳಿಕ ಏಕೋ ಸ್ವಲ್ಪ ನಿಧಾನ ಗತಿಯಲ್ಲಿ ಚಲಿಸುತ್ತಿರುವಂತೆ ಭಾಸವಾಯಿತು. ನಿದ್ರೆಯಿಂದ ಎಚ್ಚರ ಗೊಂಡ ರಾಜೇಶ ತನ್ನ ಸೀಟಿನ ಮುಂದಿರುವ ಟಿ.ವಿ ಓನ್ ಮಾಡಿ ಪ್ರಸ್ತುತ ಹವಾಮಾನದ ಸ್ಥಿತಿ-ಗತಿಯನ್ನು ಪರಿಶೀಲಿಸುತ್ತಿದ್ದಂತೆ ಧ್ವನಿ ವರ್ಧಕದ ಮೂಲಕ ಪೈಲೆಟ್ ಪ್ರಯಾಣಿಕರಿರೆಲ್ಲರಿಗೂ ಹವಾಮಾನ ವೈಪರೀತ್ಯದಿಂದ ವಿಮಾನ ಚಲಾಯಿಸಲು ಅಗುತ್ತಿರುವ ಅಡಚಣೆಯ ಬಗ್ಗೆ ವಿವರಿಸಿ ಎಲ್ಲರಗೂ ಶಾಂತವಾಗಿರುವಂತೆ ವಿನಂತಿಸಿದ. ಗಗನ ಸಖಿಯರು ಮತ್ತೆ ಎಲ್ಲಾ ಪ್ರಯಾಣಿಕರಿಗೂ ಉಪಹಾರಗಳನ್ನು ನೀಡಲಾರಂಭಿಸಿದರು. ಅಷ್ಟರಲ್ಲಿ ಮತ್ತೆ ಪೈಲೆಟ್ ವಿಮಾನದಲ್ಲಿ ಎನೋ ತಾಂತ್ರಿಕ ತೊಂದರೆ ಕಾಣುತ್ತಿದೆ ಹಾಗೂ ಪೆಟ್ರೋಲ್ ತುಂಬಿಸಬೇಕಿದೆ ಹಾಗಾಗಿ ಸಿಗ್ನಲ್ ಸಿಕ್ಕ ತಕ್ಷಣ ಯಾವುದಾದರೊಂದು ಏರ್ಪೋರ್ಟ್ನಲ್ಲಿ ಲ್ಯಾಂಡ್ ಆಗಲೇ ಬೇಕಿದೆ ಎಂದಾಗ ಎಲ್ಲರ ಮನದಲ್ಲೂ ಆತಂಕ, ದುಗುಡ..ಜೀವನ ಎಂಬುವುದು ಒಂದು ನೀರ ಮೇಲಣ ಗುಳ್ಳೆಯಂತೆ ಎಂದು ಹೇಳುತ್ತಿದ್ದ ಅಪ್ಪನ ಮಾತು ರಾಜೇಶನ ಕಿವಿ ಚುಚ್ಚುತ್ತಿತ್ತು. ಸುಮಾರು ೨೫೦ ಪ್ರಯಾನಿಕರಿಂದ ತುಂಬಿದ್ದ ವಿಮಾನದೊಳಗೆ ಮತ್ತೆ ೪೦ನಿ. ಕಳೆದರೂ ಯಾವುದೇ ಸೂಚನೆ ಪೈಲೆಟ್ ನಿಂದ ಬಾರದಿದ್ದಾಗ ಮತ್ತಷ್ಟು ಮನವು ದಿಗ್ಭ್ರಾಂತಗೂಳ್ಳಲಾರಂಭಿಸಿತು. ಮೊದಲೇ ತಾಂತ್ರಿಕ ತೊಂದರೆ ಮತ್ತೆ ಅದರ ಜೊತೆ ಬರಿದಾಗುತ್ತಿರುವ ಇಂಧನ ಹೀಗೆ ಲ್ಯಾಂಡಿಗ್ ಸಿಗ್ನಲ್ ಬೇಗನೆ ದೊರೆಯದೆ ಹೋದಲ್ಲಿ ಎಲ್ಲರ ಜೀವಕ್ಕೂ ಅಪಾಯ ತಪ್ಪಿದ್ದಲ್ಲ..ಒಮ್ಮೆಗೆ ಸಾವಿನ ಮನೆಯ ಬಾಗಿಲು ಬಡಿದಂತೆ ರಾಜೇಶನ ಮನವು ಕಳವಳಗೂಂಡಿತ್ತು. **(ಮುಂದಿನ ಪುಟಕ್ಕೆ)**

**ಕಡಲಾಚೆಯ ಕನಸು (ಮುಂದುವರೆದುದು)**

ಇಷ್ಟರಲ್ಲಿ ಪೈಲೆಟ್ ಧ್ವನಿವರ್ಧಕದ ಮೂಲಕ ಕೂನೆಗೂ ಫ್ಲಯಿಟ್ ಲ್ಯಾಂಡ್ ಆಗಲು ಸಿಗ್ನಲ್ ದೊರೆತಿದೆ, ಶಾಂತತೆಯಿಂದ ಸಹಕರಿಸಿದ ಪ್ರಯಾಣಿಕರೆಲ್ಲರಿಗೂ ಧನ್ಯವಾದ ಎಂದಾಗ ಎಲ್ಲರ ಮೊಗದಲ್ಲೂ ಹರುಷ ಎದ್ದು ಕಾಣುತ್ತಿತ್ತು. ಅಂತೂ-ಇಂತೂ ೨ ಗಂಟೆಗಳ ತಾಂತ್ರಿಕ ದೋಷದ ಸರಿಪಡಿಕೆಯ ಬಳಿಕ ಪೆಟ್ರೋಲ್ ತುಂಬಿಸಿ ಮತ್ತೆ ವಿಮಾನವು ಗಗನದಲ್ಲಿ ಪಯಣಿಸಲು ರಾಜೇಶನಿಗೆ ತನ್ನ ಜೀವನ ಮರುಜನ್ಮ ಪಡೆದಂತೆ- ವಿಧಿಯಾಟದ ಮುಂದೆ ಏನಿಲ್ಲ ಎಂಬ ಅನುಭವ. ಜನ್ಮ ನೀಡಿದ ತಂದೆ-ತಾಯಿ, ಪ್ರೀತಿಯ ಸಹೋದರ ಹಾಗೂ ಒಳ್ಳೆಯ ಸ್ನೇಹಿತರನ್ನು ನೆನೆದು ರಾಜೇಶನ ಕಣ್ಣು ತುಂಬಿ ಬಂತು..ಬದುಕಿನ ಮೌಲ್ಯತೆಯ ಅರಿವು ಆತನಿಗೆ ಈ ವಿಮಾನಯಾನವು ಮಾಡಿಕೊಟ್ಟಿತ್ತು. ಆನಂದಭಾಷ್ಪದಿಂದ ತುಂಬಿಕೊಂಡ ಕಣ್ಣುಗಳೊಂದಿಗೆ ಮುಂದಿನ ೭ ಗಂಟೆಗಳ ವಿಮಾನಪಯಣದ ಬಳಿಕ ತಲುಪಿದನು ರಾಜೇಶ ತನ್ನ ಕಡಲಾಚೆಯ ಕನಸಿನ ದೇಶ- ಅಮೇರಿಕಾ. ■

---



*ಸರಿತಾ ನವಲಿ*

## ತಕ್ಕಡಿ

ಆತ ದೊಡ್ಡ ಶ್ರೀಮಂತ. ವ್ಯಾಪಾರ-ವ್ಯವಹಾರಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ. ಪೂರ್ವಜರಿಂದ ಬಂದಿದ್ದ ಆಸ್ತಿಗೆ ತಾನು ಗಳಿಸಿಕೊಂಡಿದ್ದ ಆಸ್ತಿ ಸೇರಿ ಕೋಟ್ಯಂತರ ರೂಪಾಯಿಯ ಮಾಲೀಕನಾಗಿದ್ದ. ನೂರೆಂಟು ದೇವಸ್ಥಾನಗಳಿಗೆ ಹಣಸಹಾಯ ಮಾಡಿ 'ಮಹಾದಾನಿ', 'ಧರ್ಮಾತ್ಮ' ಎಂದು ಕರೆಯಿಸಿಕೊಳ್ಳುತ್ತಿದ್ದ.

ಈತನೊಬ್ಬ ಹಿರಿಯ ನಾಗರಿಕ. ಶಾಲಾ ಶಿಕ್ಷಕನಾಗಿ ಪ್ರಾಮಾಣಿಕತೆಯಿಂದ ದುಡಿದು ನಿವೃತ್ತಿ ಹೊಂದಿದ್ದರು. ದೇವರಲ್ಲಿ ಅದೇನೋ ಭಕ್ತಿ, ಶರಣಾಗತಿ. ತನ್ನ ಜೀವನಪೂರ್ತಿ ವಿದ್ಯಾದಾನ ಮಾಡಿ, ಸಾವಿರಾರು ಮಕ್ಕಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಸಹಾಯ ಮಾಡಿದ್ದವರು. ಜಾತ್ರಾ ಮಹೋತ್ಸವದ ಆ ದಿನ ನಿರ್ಜಲ ಉಪವಾಸವಿದ್ದು, ದೇವರ ದರ್ಶನದ ನಂತರವೇ ಪ್ರಸಾದ ಸ್ವೀಕರಿಸುವುದೆಂದು ನಿರ್ಧರಿಸಿ, ದೇವಸ್ಥಾನಕ್ಕೆ ಬಂದು ಭಕ್ತರ ಗುಂಪಿನಲ್ಲಿ ಗಂಟೆಗಟ್ಟಲೆ ಕಾದು ನಿಂತಿದ್ದರು.

ದೇವಸ್ಥಾನದಲ್ಲಿ ಇದ್ದಕ್ಕಿದ್ದಂತೆ ಎಲ್ಲರೂ ಚುರುಕಾಗಿ ಓಡಲಾರಂಭಿಸಿದರು. ದೇವರ ದರ್ಶನಕ್ಕೆಂದು ಅದೆಷ್ಟೋ ಸಮಯದಿಂದ ಕಾದುಕೊಂಡಿದ್ದ ಭಕ್ತರನ್ನೆಲ್ಲ ಹಿಂದಕ್ಕೆ ತಳ್ಳಿ ದಾರಿ ಮಾಡಿ, ಮಹಾದಾನಿಯನ್ನು ಸ್ವಾಗತಿಸಿದರು. ಅನೇಕರು ಆ ಕ್ಷಣ ದೇವರನ್ನು ಮರೆತು ದಾನಿಯ ಮುಂದೆ ಕೈಮುಗಿದಿದ್ದರು. ಸುತ್ತು-ಮುತ್ತ ನಿಂತಿದ್ದ ಭಕ್ತರನ್ನು ನೋಡಿಯೂ ನೋಡದಂತೆ ಗತ್ತಿನಿಂದ ನಡೆದುಬಂದ 'ಧರ್ಮಾತ್ಮ'ನನ್ನು ಮೊದಲಿಗೆ ಸತ್ಕರಿಸಲು ಯೋಚಿಸಿದರು. ದೇವರಿಗೆ ಅರ್ಪಿಸಿದ್ದ ಭಾರೀ ಅಂಚಿನ ರೇಷ್ಮೆವಸ್ತ್ರವನ್ನು ಮಹಾದಾನಿಗೆ ಪ್ರಸಾದವಾಗಿ ನೀಡಬೇಕೆಂದು ಅರ್ಚಕರು ಮುಂದಾದಾಗ, ಗರ್ಭಗುಡಿಯ ಹೊಸ್ತಿಲನ್ನು ಎಡವಿದ ಅರ್ಚಕರ ಕೈಯಿಂದ ಜಾರಿದ ರೇಷ್ಮೆವಸ್ತ್ರ ಹಾರಿಬಂದು ಗುಂಪಿನಲ್ಲಿ ಕೈಮುಗಿದು, ತಲೆತಗ್ಗಿಸಿ ನಿಂತಿದ್ದ ಈ ಹಿರಿಯ ನಾಗರಿಕನ ಕೊರಳನ್ನು ಅಲಂಕರಿಸಿತ್ತು. ಕಣ್ಣುಬಿಟ್ಟು ನೋಡಿದ ಆತ ಭಕ್ತಿಯಿಂದ ದೇವರಿಗೆ ಕೈಮುಗಿದರು. ಅವರ ಕಣ್ಣುಗಳಿಂದ ಆನಂದಭಾಷ್ಪ ಸುರಿಯಿತು. ಜಗತ್ತಿನ ಅತಿ ಚಾಣಾಕ್ಷ ವ್ಯಾಪಾರಿ, ದಾನಿ ಮತ್ತು ಭಕ್ತನ ಕರ್ಮಗಳ ಗಳಿಕೆಯನ್ನು ತನ್ನ ತಕ್ಕಡಿಯಲ್ಲಿ ತೂಗಿನೋಡಿದ್ದ ! ■

## ಸಣ್ಣ ಕತೆಗಳು



*ಲಕ್ಷ್ಮಿ ಕೊಲಾಲ್*

# ತುಪ್ಪದ ದೀಪ

ಒಂದು ಚಳಿಗಾಲದ ಸಂಜೆ, ಅಮೆರಿಕಾದ ನನ್ನ ಮನೆಯಲ್ಲಿ ದೇವರಿಗೆ ತುಪ್ಪದ ದೀಪ ಹಚ್ಚುತ್ತಾ ನನ್ನ ಹೆಸರಾದ 'ಇಂದು'ವಿನಂತೆ ನನ್ನ ಜೀವನವೂ ಇಂಧನದಂತೆ ಉರಿಯುತ್ತಿದೆ ಎಂದು ಭಾವಿಸುತ್ತಾ ನನ್ನ ಬಾಲ್ಯದ ದಿನಗಳನ್ನು ಮೆಲುಕುಹಾಕತೊಡಗಿದೆ. ಆ ದಿನಗಳು ನನ್ನ ಜೀವನದ ಸುಂದರ ಭಾಗ, ತುಂಬಿದ ಸೊಗಸಾದ ಸಂಸಾರ ನಮ್ಮದು. ತಂದೆ ಉನ್ನತ ಅಧಿಕಾರಿಯಾಗಿ ಬೆಳೆದವರು ಮತ್ತು ತಾಯಿ ಚೆಲುವಾದ ಬಹಳ ಎತ್ತರ ನಿಲುವಿನ ಸುಂದರ ಮಹಿಳೆ. ಮನೆಯೇ ಒಂದು ನಂದನವನದಂತೆ ಇದ್ದ ಅನುಭವ ನನಗೆ. ಬಂದು ಹೋಗುವರು, ನೆಂಟರಿಷ್ಟರಿಷ್ಟರು ಅಧಿಕವಾಗಿಯೇ ಇರುತ್ತಿದ್ದರು. ಕೊಂಚವೂ ವಿರಮಿಸದೇ ಎಲ್ಲರ ಬೇಕು ಬೇಡಗಳನ್ನೂ ಅನುಸರಿಸುತ್ತಾ ನಡೆಸಿದ ನನ್ನ ಬಾಲ್ಯದಿಂದ ಯೌವ್ವನದವರೆಗಿನ ಜೀವನವು ಜವಾಬ್ದಾರಿಯುತ ಕಾಯಕವೇ ಆಗಿತ್ತು.

ಕಾಲೇಜಿನ ದಿನಗಳಲ್ಲಿ ಬಹಳ ರೋಮಾಂಚನ ತರುವ ಅನುಭವಗಳು ಹಲವಾರು ಬಂದು ಹೋದವು. ನನ್ನ ಹವ್ಯಾಸಗಳು ಬ್ಯಾಡ್ಮಿಂಟನ್ ಮತ್ತು ಖೋ-ಖೋ. ಇದಲ್ಲದೆ ಫ್ಯಾಶನ್ ಹಾಗೂ ಮಾಡೆಲ್ಲಿಂಗ್ ಎನ್ನುವ ಆಧುನಿಕ ಪ್ರಪಂಚವೂ ನನಗೆ ಚಿರಪರಿಚಿತವಾಗಿತ್ತು. ಕಾಲೇಜು ದಿನಗಳಲ್ಲಿ ಹುಡುಗ ಹುಡುಗಿಯರ ಗೆಳೆತನ, ಮೋಜು, ಇವೆಲ್ಲಾ ಸಾಮಾನ್ಯ. ನನಗೆ ಗೆಳೆಯ ಗೆಳತಿಯರೆಲ್ಲ ಇದ್ದರೂ ಪ್ರೀತಿಸುವ ಪ್ರೇಮಿ ದೊರಕಲಿಲ್ಲ. ಆದರೂ ನನ್ನ ಸುತ್ತಮುತ್ತಲಿದ್ದ ಜೋಡಿಗಳಿಗೆ ಸಹಾಯ ನೀಡುತ್ತಾ, ಎಲ್ಲರ ಸುಂದರ ಭವಿಷ್ಯಕ್ಕೂ ಆಸರೆಯಾಗಿದ್ದೆ ಎಂದು ಹೇಳಬಹುದು.

ಓ! ನನ್ನ ಒಡಹುಟ್ಟಿದವರ ಬಗ್ಗೆಯೂ ಕೊಂಚ ಹೇಳಬಯಸುತ್ತಿದೆ ಈ ಮನಸು. ನನಗೆ ಇಬ್ಬರು ತಂಗಿಯರು ಹಾಗೂ ಒಬ್ಬ ತಮ್ಮ. ನನ್ನ ತಂದೆಗೆ ನಾನು ಎಂದರೆ ಅಚ್ಚು ಮೆಚ್ಚು, ಕಾರಣ ನನ್ನಲ್ಲಿದ್ದ, ರಕ್ತಗತವಾಗಿ ಬಂದ ವಯಸ್ಸಿಗೆ ಮೀರಿದ ಜವಾಬ್ದಾರಿಯುತ ನಡವಳಿಕೆ. ಸ್ವಲ್ಪ ಸಮಯದ ನಂತರ ನನಗೂ ಕಂಕಣಭಾಗ್ಯ ಕೈಗೂಡಿ ಬಂದಿತು. ನೋಡುತ್ತಿದ್ದಂತೆ ಮದುವೆಯ ಎಲ್ಲ ಸಂಭ್ರಮಗಳೂ ವಿಜೃಂಭಣೆಯಿಂದ ನಡೆದು ಹೋದವು. ನನ್ನ ಪ್ರಯಾಣ ದೂರದ ಅಮೆರಿಕಾ ದೇಶಕ್ಕೆ ಸುಗಮವಾಗಿ ಸಾಗಿತು. ನನ್ನ ತಂದೆಯವರಿಗೆ ಬಹಳ ಸಂತೋಷ ಹಾಗೂ ಒಂದು ವಿಧದ ವೇದನೆ ಕೂಡ. ಕಾಲವು ಎಂದೂ ನಿಲ್ಲದು. ಕೆಲವು ವರ್ಷಗಳ ನಂತರ ತಂದೆಯು ಕಾಲವಾದರು. ನನ್ನ ಮನೆಯಲ್ಲಿ ಪುತ್ರರತ್ನನ ಆಗಮನವಾಯಿತು. ನನ್ನ ತಮ್ಮ ತಂಗಿಯರೂ ಕೂಡ ಜೀವನದಲ್ಲಿ ಅಭಿವೃದ್ಧಿ ಹೊಂದಿ ಸುಖವಾಗಿದ್ದರು.

ಆದರೆ ನನ್ನ ವೈವಾಹಿಕ ಜೀವನದಲ್ಲಿ ಬಿರುಕುಗಳು ಹೆಡೆಯೆತ್ತಿ ಆಡತೊಡಗಿದವು. ಪತಿಯ ಕೆಟ್ಟ ಹವ್ಯಾಸಗಳು, ಕಿರುಕುಳ ಕೊನೆಗೊಂದು ದಿನ ವಿಚ್ಛೇದನವೆಂಬ ಕಪ್ಪು ಫಲಕ ನನ್ನ ಜೀವನದ ಅಂಗವಾಗಿಯೇ ಹೋಯ್ತು. ಇನ್ನೂ ಬದುಕು ನಡೆಯಬೇಕಲ್ಲವೇ? ಬೆಳೆಯುತ್ತಿರುವ ಮಗ ಅವನ ಅಗತ್ಯಗಳು, ಅವನ ನಡವಳಿಕೆಯಲ್ಲೂ ಹಲವಾರು ಬದಲಾವಣೆಗಳು, ಕೋಪ, ಹತಾಶೆ ಹಾಗೂ ದುಗುಡ. ಇವನ್ನೆಲ್ಲಾ ಸರಿತೂಗಿಸಲು ನನಗೊಂದು ಆರ್ಥಿಕ ಭದ್ರತೆ ಬೇಕಿದೆ. ಆದರೆ ನನಗಿರುವ ವಿದ್ಯಾರ್ಹತೆ ಹಾಗೂ ಇಲ್ಲದಿರುವ ಅನುಭವಕ್ಕೆ ಒಳ್ಳೆಯ ಆದಾಯವಿರುವ ಕೆಲಸ ಹೇಗೆ ತಾನೇ ದೊರಕೀತು?
"ಅಯ್ಯೋ! ಯೋಚಿಸುತ್ತಾ ನಾನು ದೀಪವನ್ನೇ ಹಚ್ಚಿಲ್ಲವಲ್ಲಾ! ತುಪ್ಪದ ಬಟ್ಟಲು ಎಲ್ಲೀ?" **(ಪುಟ ೫೦ ಕ್ಕೆ)**

## ಸಣ್ಣ ಕತೆಗಳು



*ಅಹೀಶ್ ಭಾರದ್ವಾಜ*

# ಕರ್ಮ (ನೈಜ ಘಟನೆಯಿಂದ ಪ್ರೇರಿತ)

"ಹೆತ್ತ ಅಪ್ಪ-ಅಮ್ಮನ್ನ ಈ ಚಿಕ್ಕ ರೂಮಲ್ಲಿ ಕಟ್ಟಿಹಾಕಿ ಇಲಿ, ಹೆಗ್ಗಣಗಳ ಮಧ್ಯೆ ಸಾಯಿಸಬೇಕು ಅನ್ನೋ ವಿಕೃತ ಮನಸ್ಸು ಹೇಗೋ ಬಂತು ನಿನಗೆ ಶಿವು?" ದುಃಖಿತರಾಗಿ ಕೇಳಿದ್ರು ರೇಣುಕಮ್ಮ. "ಈ ತರ ನರಳಿ ಸಾಯೋಕ್ಕಿಂತ ಒಂದು ತೊಟ್ಟು ವಿಷ ಕೊಟ್ಟಿಬಿಡು ಸ್ವಲ್ಪ ನೆಮ್ಮದಿಯಿಂದನಾದ್ರು ಸಾಯ್ತೀವಿ." ಅಂದ್ರು ಪರಮೇಶ್ವರಪ್ಪ.

"ಹೌದು ನಾನು ಹುಚ್ಚನೆ ಅಂತ ತಿಳ್ಕೊಳಿ. ನನಗೆ ನಿಮ್ಮ ಜೊತೆ ಸಾಕಾಗಿಹೋಗಿದೆ, ಕೆಲಸದ ಮೇಲೆ ಅಮೆರಿಕಾಗೆ ಹೋಗಿ ಸೆಟ್ಲ್ ಆಗ್ತೀನಿ. ನಿಮ್ಮ ಮನೆ, ಆಸ್ತಿ ಅದಕ್ಕೆ ನನ್ನ ಹೆಸರಿಗೆ ಬರೆಸಿಕೊಂಡಿದ್ದು. ಮನೆ ಮಾರಾಯ್ತು. ನಾಳೆನೆ ಅಮೆರಿಕಾಕ್ಕೆ ಹೊಗ್ತಾ ಇದೀನಿ" ಅಂತ ಹೇಳಿ ರೂಮಿನ ಬೀಗ ಹಾಕಿ ಹೊರಟಿದ್ದ ಶಿವು.

"ರೀ, ಯಾವ ಜನಾನೂ ಓಡಾಡದೇ ಇರೋ ಜಾಗದಲ್ಲಿ ಈ ಸಣ್ಣ ರೂಮಲ್ಲಿ ನಮ್ಮ ಕೈಗಳನ್ನು ಕಟ್ಟಿ ಕೂಡಿಹಾಕಿ, ಇಲಿ-ಹೆಗ್ಗಣಗಳ ಕೈಲಿ ಕಚ್ಚಿಸಿಕೊಂಡು ನಾವು ಸಾಯಬೇಕು ಅಂದ್ರೆ, ಯಾವ ಜನ್ಮದ ಕರ್ಮ ಅನುಭವಿಸುತ್ತಿದ್ದೇವೋ ಏನೋ? ದೇವರು ಇವನಿಗೆ ಯಾಕೆ ಇಂತಹ ದುರ್ಬುದ್ಧಿ ಕೊಟ್ಟನೋ ಗೊತ್ತಿಲ್ಲ. ವಿಷ ಕೊಟ್ಟಿ ಸಾಯ್ಸಿದ್ದರೆ ಎಷ್ಟೋ ಚೆನ್ನಾಗಿತ್ತು, ಈ ನರಕ ಯಾತನೆ ಇರ್ತಾ‌ರ್ಲಿಲ್ಲ" ಅಂದ್ರು ರೇಣುಕಮ್ಮ.
ಸಂಜೆಯಾಗುವಷ್ಟರಲ್ಲಿ ಇಲಿ, ಹೆಗ್ಗಣಗಳಿಂದ ಕಚ್ಚಿಸಿಕೊಂಡು ಇಬ್ಬರ ದೇಹವೂ ರಕ್ತಸಿಕ್ತವಾಗಿತ್ತು, ಸಹಾಯಕ್ಕಾಗಿ ಕೂಗಿ, ಕೂಗಿ ಇಬ್ಬರೂ ನಿತ್ರಾಣವಾಗಿ ಹೋಗಿದ್ದರು. ಹೆಚ್ಚಾಗಿ ಜನವೇ ಬಾರದ ಜಾಗದಲ್ಲಿ ಇವರ ಕೂಗು ಯಾರಿಗೆ ತಾನೆ ಕೇಳಬೇಕು? ಹಸಿವು, ಸಂಕಟ, ನೋವಿನ ಯಾತನೆ, ರಕ್ತ ಸುರಿಸುತ್ತಿದ್ದ ದೇಹ, ನಿದ್ದೆಯ ಮಂಪರು, ಗಾಢಾಂಧಕಾರ ಒಟ್ಟಿನಲ್ಲಿ ನರಕವೇ ಸೃಷ್ಟಿಯಾಗಿತ್ತು ಆ ರೂಮಿನಲ್ಲಿ.

"ಬೆಳಕಾಗಿ ಸುಮಾರು ಹೊತ್ತಾಗಿದೆ. ಶಕ್ತಿ, ತ್ರಾಣ ಇರೋವರೆಗೂ ಇಬ್ಬರೂ ಒಟ್ಟಿಗೆ ಕೂಗಿಕೊಳ್ಳೋಣ, ದೇವರ ದಯೆಯಿಂದ ಯಾರಿಗಾದ್ರೂ ಕೇಳಿಸಿ ಬಂದು ಬಿಡಿಸಿದರೆ ನಮ್ಮ ಅದೃಷ್ಟ" ಅಂದ್ರು ಪರಮೇಶ್ವರಪ್ಪ. ಗಂಟೆಗಟ್ಟಲೆ ಕೂಗಿ ಕೂಗಿ ದೇಹ ನಿತ್ರಾಣವಾಗಿತ್ತೇ ಹೊರತು ಇವರ ಕೂಗಿನ ದನಿ ಕೇಳಲು ಯಾರೂ ಇರಲಿಲ್ಲ. ಸೂರ್ಯ ನೆತ್ತಿಗೇರಿದ್ದ, ಆದರೂ ಧೃತಿಗೆಡದೆ ಇಬ್ಬರೂ ಕೂಗುತ್ತಲೇ ಇದ್ದರು.

ಹೇಳಿ ಕೇಳಿ ನಿರ್ಜನ ಪ್ರದೇಶದಲ್ಲಿದ್ದ ಈ ರೂಮಿನ ಬಳಿಯೇ ರದ್ದಿ ಆಯುವ ಹುಡುಗರು ಮಾದಕ ವಸ್ತು ಸೇವಿಸುವ ತಾಣವೊಂದಿತ್ತು. ಎಂದಿನಂತೆ ಹುಡುಗರು ರೂಮಿನ ಮುಂದೆ ಹಾದುಹೋದಾಗ ಜೋರಾಗಿ ಕೂಗುವ ಶಬ್ದ ಕೇಳಿ ಆಶ್ಚರ್ಯಗೊಂಡು ಬಾಗಿಲ ಬಳಿ ಹೋದಾಗ, "ಯಾರಾದ್ರು ಕಾಪಾಡಿ, ಯಾರಾದ್ರು ಕಾಪಾಡಿ" ಎನ್ನುವ ಕೂಗು ಕೇಳಿ ತಡಮಾಡದೆ ಹತ್ತಿರದಲ್ಲೇ ಇದ್ದ ಕಲ್ಲಿನಿಂದ ಬೀಗ ಮುರಿದು ಒಳಗಿನ ಭಯಾನಕ ದೃಶ್ಯವನ್ನು ನೋಡಿ ಗಾಬರಿಯಾದರು. ಅಷ್ಟರಲ್ಲೇ ಅವರೊಲ್ಲೊಬ್ಬ ಹತ್ತಿರದ ಪೋಲಿಸ್ ಸ್ಟೇಷನ್ನಿಗೆ ಹೋಗಿ ಸುದ್ದಿ ಮುಟ್ಟಿಸಿದ್ದ.

ಮಗನ ಮೇಲೆ ಯಾವ ಕಂಪ್ಲೈಂಟೂ ಕೊಡದೆ ಪೋಲಿಸರ ಸಹಾಯದಿಂದ ವೃದ್ಧಾಶ್ರಮವೊಂದಕ್ಕೆ ಸೇರಿಕೊಂಡರು. ಮೊದಮೊದಲು ಹೊಂದಿಕೊಳ್ಳಲು ಕಷ್ಟವಾದರೂ ಪರಿಸ್ಥಿತಿ ಅವರನ್ನು ಹೊಂದಿಕೊಳ್ಳುವಂತೆ ಮಾಡಿತ್ತು. ಜೊತೆಗೆ ಮ್ಯಾನೇಜರ್ ನರಸಿಂಗರಾಯರು ಪೋಷಿಸುತ್ತಿದ್ದ ರೀತಿಯಲ್ಲಿ ಅದೇನೂ ಪ್ರೀತಿ, ಗೌರವವಿದ್ದು, ವೃದ್ಧಾಶ್ರಮದಲ್ಲೇ ನೆಮ್ಮದಿ ಸಿಕ್ಕಿತ್ತು. ಅದೇ ಕಾರಣಕ್ಕೇನೋ ವೃದ್ಧಾಶ್ರಮದಲ್ಲಿ ಮೂರು ವರುಷಗಳು ಕಳೆದದ್ದು ಗೊತ್ತಾಗಲೇ ಇಲ್ಲ.

* * * *

# ಸಣ್ಣ ಕತೆಗಳು

**ಕರ್ಮ (ಮುಂದುವರೆದುದು)**

"ನಾನು ಮಹೇಶ್ವರಪ್ಪ ಅಂತ ಕೋಣನಕುಂಟೆ ಸಬ್ ಇನ್ಸ್ಪೆಕ್ಟರ್, ನೀವೇನ ಈ ವೃದ್ಧಾಶ್ರಮದ ಮ್ಯಾನೇಜರ್?"

"ಹೌದು, ಏನಾಗ್ಬೇಕಿತ್ತು? ಏನಾದರೂ ತೊಂದರೇನೆ?" ಅಂದ್ರು ನರಸಿಂಗರಾಯರು.

"ಏನಿಲ್ಲ, ರೇಣುಕಮ್ಮ ಮತ್ತೆ ಪರಮೇಶ್ವರಪ್ಪ ಅನ್ನೋ ಇಬ್ಬರು ವಯಸ್ಸಾಗಿರುವ ದಂಪತಿಗಳನ್ನ ಹುಡುಕಿಕೊಂಡು ಅವರ ಮನೆ ಹತ್ರ ಹೋಗಿದ್ವಿ, ಅವರು ಈಗ ಈ ಮನೇಲಿ ಇಲ್ಲ, ನಿಮ್ಮ ವೃದ್ಧಾಶ್ರಮದಲ್ಲಿದ್ದಾರೆ ಅಂತ ಪಕ್ಕದ ಮನೇಲಿದ್ದವರು ಹೇಳಿದ್ರು ಅದಕ್ಕೆ ಇಲ್ಲಿಗೆ ಹುಡುಕಿಕೊಂಡು ಬಂದ್ವಿ" ಅಂದ್ರು ಸಬ್ ಇನ್ಸ್ಪೆಕ್ಟರ್. "ಹೌದು, ಇಲ್ಲೇ ಇದ್ದಾರೆ ಕರೀತಿನಿ ಇರಿ" ಅಂದ್ರು ನರಸಿಂಗರಾಯರು.

ತನ್ನ ತಪ್ಪಿನ ಅರಿವಾಗಿ ಅಮ್ಮ-ಅಪ್ಪನನ್ನು ಮನೆಗೆ ಕರೆದೊಯ್ಯಲು ಮಗ ಬಂದನೇನೂ ಎಂದು ಆಫೀಸ್ ರೂಮಿನೊಳಗೆ ಬಂದು ಕೂತ ರೇಣುಕಮ್ಮ ಮತ್ತು ಪರಮೇಶ್ವರಪ್ಪರನ್ನು ನೋಡಿ, "ನಿಮಗೆ ಶಿವರಾಜ್ ಅಂತ ಮಗ ಇದಾನ?" ಅಂತ ಕೇಳಿದ ಇನ್ಸ್ಪೆಕ್ಟರ್ಗೆ, "ಹೌದು, ಇದ್ದ" ಅಂತ ನರಸಿಂಗರಾಯರೇ ಉತ್ತರಿಸಿದರು.

"ನಾನು ಹೇಳೋದು ಕೇಳಿ ಗಾಬರಿಯಾಗಬೇಡಿ. ನಮಗೆ ಇಂಡಿಯನ್ ಎಂಬೆಸ್ಸಿಯಿಂದ ಫೋನ್ ಬಂದಿತ್ತು. ಅಮೆರಿಕಾದಲ್ಲಿರುವ ನಿಮ್ಮ ಮಗ ದುರದೃಷ್ಟವತ್ತಾಗಿ ಸಾವನ್ನಪ್ಪಿದ್ದಾರೆ. ಅವರ ಪಾಸ್ ಪೋರ್ಟ್ ನಲ್ಲಿ ನಿಮ್ಮ ಮನೆಯ ಅಡ್ರೆಸ್ಸ್ ಇತ್ತು. ಅಲ್ಲಿಗೆ ಹೋಗಿದ್ವಿ, ನೀವು ಇಲ್ಲಿದ್ದೀರ ಅಂದ್ರು, ವಿಷಯ ತಿಳಿಸೋಣ ಅಂತ ಬಂದ್ವಿ" ಅಂದ ಸಬ್ ಇನ್ಸ್ಪೆಕ್ಟರ್ ಮಾತು ಮುಂದುವರೆಸಿದರು. "ಶಿವರಾಜ್ ಮತ್ತು ಅವನ ಹೆಂಡತಿ ಅಮೆರಿಕಾದಲ್ಲೆಲ್ಲೋ ಗುಹೆಗಳಿರುವ ಜಾಗಕ್ಕೆ ಟ್ರೆಕ್ಕಿಂಗ್ ಹೋಗಿದ್ರಂತೆ. ಗುಹೆಗಳ ಒಳಗೆ ದಾರಿ ತಪ್ಪಿಸಿಕೊಂಡು ಹೊರಗೆ ಬರಕ್ಕಾಗದೆ ಅಲ್ಲೇ ಎರಡು ಮೂರುದಿನ ಇದ್ದಾಗ ಇಲಿ, ಹೆಗ್ಗಣ, ಬಾವಲಿಗಳಿಂದ ಕಚ್ಚಿಸಿಕೊಂಡು ಸತ್ತಿದ್ದಾರೆಂದು ನಮಗೆ ಮಾಹಿತಿ ಬಂತು."

ಸುದ್ದಿ ಕೇಳಿದ ತಂದೆ-ತಾಯಿಯರ ಕಣ್ಣಲ್ಲಿ ನೀರು ತುಂಬಿಕೊಂಡವು. ಪಕ್ಕದಲ್ಲೇ ಕೂತಿದ್ದ ನರಸಿಂಗರಾಯರು, "ಈ ಬದುಕು ಬಹಳ ಬಿರುಸಿನದ್ದು, ಮಾಡಿದ ಕರ್ಮ ಬಹು ಬೇಗ ಶಿವರಾಜನನ್ನು ಬೆಂಬಿಡದೆ ಹಿಂಬಾಲಿಸಿತ್ತು" ಅಂತ ಮನಸ್ಸಿನಲ್ಲೇ ಅಂದುಕೊಂಡು ಇನ್ಸ್ಪೆಕ್ಟರಿಗೆ ಕಾಫಿ ತರಲು ಎದ್ದರು. ■

---

**ತುಪ್ಪದ ದೀಪ ಉರಿಸಲು ಎಣ್ಣೆ ಪುಟದಿಂದ....**

"ಎಣ್ಣೆಯೇ ನನಗೆ ದುಬಾರಿಯೆನಿಸುವಾಗ ಇನ್ನು ತುಪ್ಪದ ದೀಪವೇಕೆ? ದೇವರೇ ನಿನಗೆ ತುಪ್ಪದ ದೀಪ ಬೇಕಿದ್ದರೆ ನೀನೆ ದಾರಿ ತೋರಿಸು" ಎಂದು ಮನದಲ್ಲೇ ಪ್ರಾರ್ಥಿಸುತ್ತಾ, ದೇವರಿಗೆ ಎಣ್ಣೆಯ ದೀಪದ ಸೇವೆ ಮಾಡಿದೆ. ಅಷ್ಟು ಹೊತ್ತಿಗೆ ಕರೆಗಂಟೆಯ ಸದ್ದಾಯಿತು. ಬಾಗಿಲು ತೆರೆದು ನೋಡಿದೆ. ಯಾರು ಎಂದು ಕೇಳುವಷ್ಟರಲ್ಲಿ ಅವರೇ "ನೆನಪಾಗಲಿಲ್ಲವೇ, ನಾನು ಶಿಲ್ಪ, ನಿಮ್ಮ ನೆರೆಮನೆಯವಳು, ನಿಮ್ಮ ಮಗನ ಹುಟ್ಟುಹಬ್ಬಕ್ಕೂ ಬಂದಿದ್ದೆ" ಎಂದಾಗ ಹೌದು ಪರಿಚಿತ ಮುಖ ಎನ್ನಿಸಿತು. ಅವರು ಮಾತು ಮುಂದುವರೆಸಿ "ನೀವು ತಪ್ಪು ತಿಳಿಯದಿದ್ದರೆ ನಿಮ್ಮಿಂದ ಒಂದು ಸಹಾಯ ಬೇಕಿತ್ತು." ಎಂದರು. ಅಯ್ಯೋ ವಿಧಿಯೇ ನಾನು ಯಾರಿಗೆ ತಾನೇ ಏನು ಸಹಾಯ ಮಾಡಬಲ್ಲೆ ಎಂದುಕೊಂಡೆ. ಆದರೂ "ಹೇಳಿ, ನನ್ನ ಕೈಲಾದ ಸಹಾಯ ಮಾಡುವೆ" ಎಂದೆ. ಅವರು "ನಿಮ್ಮ ಮಗನ ಹುಟ್ಟುಹಬ್ಬಕ್ಕೆ ನೀವು ಕೈಯಾರೆ ಮಾಡಿದ ಪ್ರತಿಯೊಂದು ಅಡಿಗೆಯೂ ಎಷ್ಟು ರುಚಿಯಾಗಿ ಅಚ್ಚುಕಟ್ಟಾಗಿತ್ತು. ಮುಂದಿನವಾರ ನನ್ನ ಮಗನ ಹುಟ್ಟುಹಬ್ಬಕ್ಕೆ ನೀವೇ ಅಡುಗೆ ಮಾಡಿಕೊಟ್ಟರೆ ನನಗೆ ಬಹಳ ಉಪಕಾರವಾಗುತ್ತದೆ." ಎಂದರು. "ಆಗಲಿ ಖಂಡಿತ" ಎಂದು ನಾನು ಹೇಳಿದೆ. ಅದಕ್ಕೆ ಅವರು "ತುಂಬಾ ಧನ್ಯವಾದ, ನೀವು ಸಂಕೋಚವಿಲ್ಲದೆ ಅದಕ್ಕೆ ಬೇಕಾದ ಹಣದ ಮೊತ್ತವನ್ನು ವಾಟ್ಸ್ಯಾಪ್ ಮೆಸೇಜ್ ಮಾಡಿದರೆ, ನಾಳೆಯೇ ಆ ಹಣವನ್ನು ನಾನು ನಿಮಗೆ ತಲುಪಿಸುವೆ" ಎಂದ ಶಿಲ್ಪ ತೆರಳಿದರು.

ಆಗ ಗೂಡಿನಲ್ಲಿದ್ದ ದೇವರ ದೀಪವನ್ನು ನೋಡಿ ನಾನು, ಓ ದೇವರೇ "ನಿನಗೆ ತುಪ್ಪದ ದೀಪವನ್ನು ಮತ್ತೆ ಹಚ್ಚುವ ಯೋಗವನ್ನು ಇಷ್ಟು ಬೇಗ ಕೊಟ್ಟೆಯಾ" ಎಂದು ಮನದಲ್ಲೇ ದೇವರಿಗೆ ವಂದಿಸುತ್ತಾ, ಶಿಲ್ಪಾಳ ಮಗನ ಹುಟ್ಟುಹಬ್ಬದ ಅಡುಗೆಯ ಪಟ್ಟಿ ಮಾಡಲು ಮೂಲೆಯಲ್ಲಿದ್ದ ಪುಸ್ತಕ ಹಾಗೂ ಪೆನ್ನನ್ನು ಕೈಯಲ್ಲಿ ಹಿಡಿದೆ. ■


## ಚಿಣ್ಣರ ಲೋಕ



*ಸಾರ್ಥಕ್ ರಾವ್ (೧೧ ವರ್ಷ)*

# ಶ್ರೀ ಪುರಂದರ ದಾಸರು



ಶ್ರೀ ಪುರಂದರ ದಾಸರು
(1480 - 1564)

ಕರ್ನಾಟಕ ಶಾಸ್ತ್ರೀಯ ಸಂಗೀತದ ಪಿತಾಮಹ ಎಂದೇ ಹೆಸರಾದ ಶ್ರೀ ಪುರಂದರ ದಾಸರು, ದಾಸ ಪದ್ಧತಿಯ ಅನೇಕ ಪ್ರಮುಖರಲ್ಲಿ ಮುಖ್ಯವಾಗಿ ಗುರುತಿಸಲ್ಪಡುವವರು.

ಪುರಂದರ ದಾಸರ ಪದಗಳು ಪ್ರಾಸ ಮತ್ತು ಅರ್ಥದಲ್ಲಿ ಬಹು ಶ್ರೀಮಂತವಾಗಿವೆ.

ಉದಾ:- "ಕುದುರೆ ಅಂದಣ ಆನೆ ಬಯಸೋದು ನರಚಿತ್ತ- ಪಾದಚಾರಿ ಆಗೋದು ಹರಿ ಚಿತ್ತವಯ್ಯ".

ಹರಿ ನಾಮಸ್ಮರಣೆಯ ರೂಪದಲ್ಲಿ ರಚಿಸಿದ ಇವರ ಅನೇಕ ಕೃತಿಗಳು ದೇವರ ನಾಮವಾಗಿ ಪ್ರಸಿದ್ಧವಾಗಿದೆ. ಇವರ ಎಲ್ಲಾ ಕೀರ್ತನೆಗಳು ಪುರಂದರ ವಿಠಲನನ್ನು ನಮಿಸುತ್ತಾ ಕೊನೆಗೊಳ್ಳುತ್ತವೆ.



## ಸಿನೆಮಾ

# ಅಂತೂ ಹೋದೆ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ



**ವಿ.ಪ್ರಸನ್ನಕುಮಾರ್**

ನಾನು ಚಿಕ್ಕವನಾಗಿದ್ದಾಗ “ಫಿಲ್ಮ್ ಫೆಸ್ಟಿವಲ್”ಗಳ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದೆನಾದರೂ, ಇಂತಹ ಚಿತ್ರೋತ್ಸವದಲ್ಲಿ ತೋರಿಸುವುದು ಕೇವಲ ಬೋರ್ ಹೊಡೆಸುವ ಕಲಾತ್ಮಕ ಚಿತ್ರಗಳು (Art Films) ಮಾತ್ರ ಅಂತ ಅಂದುಕೊಂಡಿದ್ದೆ. ಸ್ವಲ್ಪ ಬುದ್ಧಿ ಬಂದು ದೊಡ್ಡವನಾದ ಮೇಲೆಯೇ ತಿಳಿದಿದ್ದು, “ನಿಜಕ್ಕೂ ಸಿನೆಮಾ ಎಂದರೆ ಕಲಾತ್ಮಕ ಸಿನೆಮಾಗಳೇ, ವ್ಯಾಪಾರಿ ಚಿತ್ರಗಳಿಗಿಂತಲೂ, ವೀಕ್ಷಿಸಲು ಇವೇ ಹೆಚ್ಚು ಚೆನ್ನ” ಎಂದು. ಪ್ರತಿ ವರ್ಷ ಕಾನ್ (Cannes )ನಲ್ಲಿ ನಡೆಯುವ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಒಮ್ಮೆಯಾದರು ಹೋಗಲು ಆಸೆ ಇಟ್ಟುಕೊಂಡಿರುವ ನನಗೆ, ಇತ್ತೀಚಿಗೆ ನಮ್ಮಬೆಂಗಳೂರಿನಲ್ಲಿ ನಡೆದ ಅಂತರ ರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ (BIFF ) ಹೊಗುವ ಒಂದು ಸದವಕಾಶ ದೊರಕಿತು. ನಮ್ಮ ಸ್ನೇಹಿತರಾದ ನಾಗತಿಹಳ್ಳಿ ಚಂದ್ರಶೇಖರ್ ಅವರು ಒಂದು ವಿ ಐ. ಪಿ ಪಾಸ್ ಕಳಿಸುವುದಾಗಿ ತಿಳಿಸಿದಾಗ ನನ್ನ ಆನಂದಕ್ಕೆ ಪಾರವೆ ಇರಲ್ಲಿಲ್ಲ!!

೨೦೧೯ ಫೆಬ್ರವರಿ ೨೧ ರಿಂದ ೨೮ ರ ವರೆಗೆ ಒಂದು ವಾರ ವಿವಿಧ ದೇಶಗಳ ೨೨೫ ಚಲನ ಚಿತ್ರಗಳನ್ನ ಬೆಂಗಳೂರಿನ ಓರಿಯನ್ ಮಾಲ್ ನಲ್ಲಿನ ೧೧ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಪ್ರದರ್ಶಿಸಲಾಯ್ತು. ಭಾನುವಾರ ಬೆಳಗ್ಗೆ “ನಮ್ಮ ಮೆಟ್ರೊ” ಹಿಡಿದು ಜೆ ಪಿ ನಗರದಿಂದ ಸ್ಯಾಂಡಲವುಡ್ ಸೋಪ್ ಫ್ಯಾಕ್ಟರಿ ಮೆಟ್ರೊ ನಿಲ್ದಾಣಕ್ಕೆ ಕೇವಲ ೩೦ ನಿಮಿಷದಲ್ಲಿ, ಎ ಸಿ ಬೋಗಿಯಲ್ಲಿ ತಲುಪಿದಾಗ ಅದೆನೋ ಅವ್ಯಕ್ತವಾದ ಆನಂದ. ಸುಮಾರು ೨ ಘಂಟೆಗಳ ಕಾಲ ತೆಗೆದುಕೊಳ್ಳುತ್ತಿದ್ದ ಆಟೊ/ಕಾರಿನ ಪ್ರಯಾಣದ ಮುಂದೆ ಈ ೩೦ ನಿಮಿಷದ ವೇಗಪ್ರಯಾಣ ಬಹಳ ಖುಷಿ ಕೊಟ್ಟಿತು.

**(ಮುಂದಿನ ಪುಟಕ್ಕೆ)**




ಸ್ಯಾಂಡಲವುಡ್ ಸೋಪ್ ಫ್ಯಾಕ್ಟರಿ ಮೆಟ್ರೊ ನಿಲ್ದಾಣದಿಂದ ಕೇವಲ ೫ ನಿಮಿಷ ದೂರದಲ್ಲಿ ಒರಿಯನ್ ಮಾಲ್. ಮಾಲ್ ನ ಮುಂದೆ ಅಂತರಾಷ್ಟ್ರೀಯ ಚಲನ ಚಿತ್ರೋತ್ಸವದ ದೊಡ್ಡ ಪೋಸ್ಟರ್ ಕಂಡಾಗ “ನಾನು ಕೂಡ ಒಂದು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಹೋಗ್ತಾ ಇದ್ದೀನಿ” ಎನ್ನುವ ಸಂತೋಷ ಉಕ್ಕಿ ಉಕ್ಕಿ ಬಂದಿತು. ಒಳಗೆ ಪಿ ವಿ ಆರ್ ಸಿನೆಮಾ ತಲುಪಿದಾಗ ಜನವೋ ಜನ. ಅದಾಗಲೇ ಜನರು ಸರತಿಯ ಸಾಲಿನಲ್ಲಿ ನಿಂತಿದ್ದರು. ಟಿಕೆಟ್ ಕೌಂಟರ್ನಲ್ಲಿ ನಾನು ನನ್ನ ವಿ ಐ ಪಿ ಪಾಸ್ ತೋರಿಸಿ, ಚಿತ್ರೋತ್ಸವದಲ್ಲಿ ತೋರ್ಪಡಿಸಲಾಗುವ ಎಲ್ಲ ೨೨೫ ಸಿನೆಮಾಗಳ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡುವ ಒಂದು ಪುಟ್ಟ ಹೊತ್ತಿಗೆ ಹಾಗೂ ಒಂದು ಬ್ಯಾಗನ್ನು ಪಡೆದುಕೊಂಡೆ. ಪ್ರತಿದಿನದ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಪ್ರಿಂಟ್ ಮಾಡಿಸಿದ ಬುಕ್ಲೆಟ್ ಪ್ರೇಕ್ಷಕರಿಗೆ ಅನುಕೂಲವಾಗುವಂತಿತ್ತು. ಇದು ಆನ್ಲೈನ್ ಕೂಡ ಮೊಬೈಲ್ಗಳಲ್ಲಿ ಕಾಣುತ್ತಿತ್ತು. ತುಂಬಾ ಅಚ್ಚುಕಟ್ಟಾದ ವ್ಯವಸ್ತೆ. ೮ ದಿನದ ಅಂತರ - ರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಪ್ರವೇಶ ಧನ ಕೇವಲ ೮೦೦ ರೂಪಾಯಿ(೧೧ ಡಾಲರ್)! ೨೨೫ ಸಿನೆಮಾ ಪ್ರದರ್ಶನಗಳಿದ್ದ ಈ ಚಿತ್ರೋತ್ಸವದಲ್ಲಿ, ಸರಿಯಾಗಿ ಪ್ಲ್ಯಾನ್ ಮಾಡಿಕೊಂಡಲ್ಲಿ, ೮ ದಿನದಲ್ಲಿ ಸುಮರು ೪೦ ಸಿನೆಮಾಗಳನ್ನು ಪಿ ವಿ ಆರ್ ನ ಅತ್ಯಂತ ಸುಸಜ್ಜಿತ ಥಿಯೇಟರ್ ನಲ್ಲಿ ನೋಡುವ ಭಾಗ್ಯ...ಇನ್ನು ಸೀನಿಯರ್ ಸಿಟಿಜನ್ ಆದರೆ ಕೇವಲ ೪೦೦ ರೂಪಾಯಿ. ಸುಮಾರು ೧೦,೦೦೦ ಸೀಸನ್ ಟಿಕೇಟುಗಳಿದ್ದರೂ, ಬೆಲೆ ಇಷ್ಟು ಕಮ್ಮಿ ಇರುವುದರಿಂದಲೋ ಏನೊ, ಒಂದು ತಿಂಗಳ ಮುಂಚೆಯೇ ಚಿತ್ರೊತ್ಸವವು “ಸೋಲ್ಡ್ ಔಟ್” ಆಗಿತ್ತು ಎಂದು ಅಲ್ಲಿ ತಿಳಿಯಿತು..ಹಾಗಾಗಿ ಚಂದ್ರು ನನಗೆ ವಿ ಐ ಪಿ ಪಾಸ್ ಕೊಡದಿದ್ದರೆ ನಾನು ಇಲ್ಲಿಗೆ ಬರಲು ಸಾಧ್ಯವೇ ಆಗುತ್ತಿರಲಿಲ್ಲ ! **(ಮುಂದಿನ ಪುಟಕ್ಕೆ)**



ಪಿ ವಿ ಆರ್ ಒಳಗೆ ಹೋದಾಗ ನನಗೆ ಪರಿಚಿತರು ಯಾರು ಕಾಣಲಿಲ್ಲ. ಯಾವ ಸಿನೆಮಾಗೆ ಹೋಗಬೇಕು ಎಂದು ಹೋಮ್ ವರ್ಕ್ ಮಾಡದ ನಾನು, "ಟ್ರಾನ್ಸಿಟ್" ಎಂಬ ಜೆರ್ಮನ್ ಭಾಷೆಯ ಚಿತ್ರ ವೀಕ್ಷಿಸಿದೆ. ಸಿನೆಮಾ ಪರವಾಗಿರಲಿಲ್ಲ. ಅದಾದ ಮೇಲೆ ಆಚೆ ಬಂದಾಗ ಅಲ್ಲಿ ನನ್ನ ಕೆಲವು ಸ್ನೇಹಿತರ ಭೇಟಿ ಆಯಿತು. ಚಿಕ್ಕವರಾಗಿದ್ದಾಗ ಸುಚಿತ್ರ ಫಿಲ್ಮ್ ಸೊಸೈಟಿಯವರು ಏರ್ಪಡಿಸುತ್ತಿದ್ದ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವವು ಬೆಂಗಳೂರಿನ ವಿವಿಧ ಚಿತ್ರಮಂದಿರಗಳಲ್ಲಿ ನಡೆಸುತ್ತಿದ್ದರಿಂದ, ಅದನ್ನು ನೋಡಲು ಜನಗಳು ಹೇಗೆ ಕಷ್ಟಪಟ್ಟು ಒಂದು ಸಿನೆಮಾಮಂದಿರದಿಂದ ಇನ್ನೊಂದು ಸಿನೆಮಾಮಂದಿರಕ್ಕೆ ಹೋಗುತ್ತಿದ್ದರು ಎಂಬುದನ್ನು ಅಲ್ಲಿ ಸಿಕ್ಕಿದ ನನ್ನ ಸ್ನೇಹಿತರು ಸ್ಮರಿಸಿಕೊಂಡರು. ಅವರೆಲ್ಲರೂ, ಯಾವ ಸಿನಿಮಾಗೆ ಹೋಗಬೇಕು ಎನ್ನುವ ಹೋಮ್ ವರ್ಕ್ ಮಾಡಿದ್ದರಿಂದ ನಾವೆಲ್ಲರೂ ಅರೇಬಿಕ್ ಭಾಷೆಯ "ಕೇಪರ್ ನಾಮ್" ಎನ್ನುವ ಸಿನಿಮಾ ನೋಡಲು ಹೊರಟೆವು. ವಿ ಐ ಪಿ ಪಾಸ್ ಇದ್ದದ್ದರಿಂದ ಸೀಟ್ ಸುಲಭಕ್ಕೆ ಸಿಕ್ಕಿತು..ಆದ್ರೆ ಚಿತ್ರಮಂದಿರ ಹೌಸ್-ಫುಲ್ ಆಯಿತು.

ಬೈರೂತಿನಲ್ಲಿ ೧೨ ವರ್ಷದ ಬಾಲಕ ತನ್ನ ಹೆತ್ತವರ ಮೇಲೆ ನ್ಯಾಯಾಲಯದಲ್ಲಿ ಕೇಸ್ ಹಾಕುತ್ತಾನೆ, ಸಾಕಲು ಶಕ್ತಿಯಿಲ್ಲದ ಮೇಲೆ ನನ್ನನ್ನೇಕೆ ಹುಟ್ಟಿಸಿದಿರಿ ಎಂದು! ಎಂತಹ ಒಳ್ಳೆಯ ಸಿನೆಮಾ ಅಂದರೆ, ಕೊನೆಯಲ್ಲಿ ಎಲ್ಲರೂ ಎದ್ದು ನಿಂತು ೨ ನಿಮಿಷ ಕರತಾಡನ ಮಾಡಿದರು. ಆದರೆ ಅದು ನಿರ್ದೇಶಕರಿಗೆ, ನಟರಿಗೆ ಕಾಣುವುದೆ ಇಲ್ಲವಲ್ಲ ಎಂಬುವುದೇ ಬೇಸರ! ಇದರ ಸಂಕ್ಷಿಪ್ತ ವಿವರಣೆಯ ಪುಟವನ್ನು ಇಲ್ಲಿ ಕೊಡಲಾಗಿದೆ. ದಯವಿಟ್ಟು ಓದಿ, ಆದರೆ ಸಿನೆಮಾ ನೋಡಿ.. ಅದ್ಭುತವಾಗಿದೆ!

ಈ ವರ್ಷ ಫಾರಿನ್ ಚಿತ್ರಗಳ ವಿಭಾಗದಲ್ಲಿ ಆಸ್ಕರ್ ಪ್ರಶಸ್ತಿಗೆ ಆಯ್ಕೆಯಾಗಿದ್ದ ೫ ಚಿತ್ರಗಳಲ್ಲಿ ಈ ಚಿತ್ರವೂ ಒಂದು. ಆಸ್ಕರ್ ಪ್ರಶಸ್ತಿಗೆ ಆಯ್ಕೆ ಆಗಿದ್ದ ಮತ್ತೆರಡು ಚಿತ್ರಗಳಾದ "ರೋಮಾ" ಹಾಗು "ಶಾಪ್ ಲಿಫ್ಟರ್ಸ್" ಚಿತ್ರಗಳನ್ನು ಕೂಡ ಈ ಚಲನ ಚಿತ್ರೋತ್ಸವದಲ್ಲಿ ಪ್ರದರ್ಶಿಸಲಾಯಿತು. (ಆದರೆ ನನಗೆ ನೋಡಲಾಗಲಿಲ್ಲ).

ಈ ವರ್ಷ "ರೋಮಾ" ಚಿತ್ರಕ್ಕೆ ಆಸ್ಕರ್ ಪ್ರಶಸ್ತಿ ದೊರಕಿತು.

ಒಂದು ಅತ್ಯುತ್ತಮವಾದ ಸಿನೆಮಾ ನೋಡಿದ ನಂತರ "ಗೋಲ್ಡ್ ಕ್ಲಾಸ್" ಥಿಯೇಟರಿನ ಸೌಲಭ್ಯಗಳನ್ನು ಅನುಭವಿಸಲು, ಅಲ್ಲಿ ಪ್ರದರ್ಶಿಸಲಾದ ಮೆಕ್ಸಿಕನ್ ಭಾಷೆಯ "ಮಿರಿಯಮ್ ಲೈಸ್" ಎನ್ನುವ ಸಿನೆಮಾ ನೋಡಲು ಹೋದೆ..ಪರವಾಗಿರಲಿಲ್ಲ ಅಷ್ಟೆ. ಆದರೆ ಅಲ್ಲಿಗೆ ಹೋದಾಗ ಕರ್ನಾಟಕ ಚಲನಚಿತ್ರ ಅಕ್ಯಾಡೆಮಿಯ ಚೇರ್ಮನ್ ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಹಾಗೂ ಅವರ ಮಗಳು ಸಿಹಿ ನಾಗತಿಹಳ್ಳಿ ಅವರ ಭೇಟಿಯಾಯಿತು.

**(ಮುಂದಿನ ಪುಟಕ್ಕೆ)**











ಅವರೊಡನೆ ಸ್ವಲ್ಪ ಹೊತ್ತು ಮಾತನಾಡಿ, ಎಷ್ಟು ಅಚ್ಚುಕಟ್ಟಾಗಿ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವವನ್ನ ಮಾಡಿದ್ದೀರ ಎಂದು ತಿಳಿಸಿ, ಅಲ್ಲೇ ಒರಿಯನ್ ಮಾಲಿನ ಫ್ಹುಡ್ ಕೋರ್ಟ್ ನಲ್ಲಿ ಚಪಾತಿ, ಸಾಗು ಹಾಗು ಮೊಸರು ತಿಂದು ಮತ್ತೆ ಮೆಟ್ರೊ ಏರಿ ಮನೆ ತಲುಪಿದಾಗ ರಾತ್ರಿ ೧೧ ಘಂಟೆ...ಸುಮರು ೧೨ ಘಂಟೆಗಳ ಕಾಲದಲ್ಲಿ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ೪ ಸಿನೆಮಾ ನೋಡಿದ ಸಮಾಧಾನದ ಮನಸ್ಸಿನಿಂದ ನಿದ್ದೆ ಮಾಡಿದೆ.

ಮೊದಲನೆಯ ದಿನ ಸ್ವಲ್ಪ ನಿಧಾನಕ್ಕೆ ಹೋಗಿದ್ದ ನನಗೆ, ಎರಡನೆಯ ದಿನ ಆದಷ್ಟು ಬೇಗ ಹೋಗಿ ಸಾಧ್ಯವಾದಷ್ಟು ಚಲನಚಿತ್ರಗಳನ್ನು ನೋಡುವ ತವಕ..ಮತ್ತೆ ಮೆಟ್ರೊ ಹಿಡಿದು, ಮಾಲ್ ಗೆ ಹೋಗಿ, “ಅಲೋನ್ ಅಟ್ ಮೈ ವೆಡ್ಡಿಂಗ್” ಎಂಬ ರುಮೇನಿಯ ದೇಶದ ಚಿತ್ರವನ್ನು ನೋಡಿದೆ. ಚೆನ್ನಾಗಿತ್ತು. ಅಂದು ಮಧ್ಯಾಹ್ನ ನೋಡಿದ “ಸುಪ ಮೊಡೊ” ಎಂಬ ಕೆನ್ಯಾ ದೇಶದ ಚಿತ್ರದ ಬಗ್ಗೆ ಎರಡುಸಾಲು ಬರೆಯಲೇಬೇಕು. ೯ ವರ್ಷದ ಬಾಲಕಿಯೊಬ್ಬಳು ಕ್ಯಾನ್ಸರ್ ನಿಂದಾಗಿ ಇನ್ನೆನು ೬-೭ ತಿಂಗಳಲ್ಲಿ ಕೊನೆಯುಸಿರು ಎಳೆಯುವಳು ಎಂಬುದು ಗೊತ್ತಾದಾಗ, ಅವಳ ಕುಟುಂಬ ಹಾಗು ಇಡಿ ಹಳ್ಳಿಯ ಜನಗಳು ಆ ಹುಡುಗಿಯ “ನಾನು ಸುಪೆರ್ ವುಮನ್ ಆಗಬೇಕು” ಎನ್ನುವ ಕನಸನ್ನು ಹೇಗೆ ನನಸು ಮಾಡುತ್ತಾರೆ ಎಂಬುದನ್ನು ತುಂಬಾ ಅಚ್ಚುಕಟ್ಟಾಗಿ ತೋರಿಸಲಾಗಿದೆ. ಸಾಧ್ಯವಾದರೆ ವೀಕ್ಷಿಸಿ. ಎರಡು ದಿನಗಳಲ್ಲಿ ನಾಲ್ಕು ವಿದೇಶಿ ಭಾಷೆಯ ಚಿತ್ರಗಳನ್ನು ನೋಡಿದ ಮೇಲೆ ನಮ್ಮ ಕಸ್ತೂರಿ ಕನ್ನಡ ಸಿನೆಮಾ ನೋಡದೆ ಇರೋದಕ್ಕೆ ಆಗುತ್ತೈ?

”ಟಗರು”, “ದಿ ವಿಲ್ಲನ್” ಹಾಗು “ಹಂಬಲ್ ಪೊಲಿಟಿಶಿಯನ್ ನೊಗ್ರಾಜ್” ಚಿತ್ರಗಳನ್ನು ನಾನು ನೋಡಿದೆ.

ಎರಡು ದಿನದಲ್ಲಿ ಒಟ್ಟು ೭ ಸಿನೆಮಾಗಳನ್ನ ನೋಡಿದ ಹೊಸ ಅನುಭವ ತುಂಬಾ ಸೊಗಸಾಗಿತ್ತು...೭ ದಿನಗಳ ಅಂತರ ರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ನನಗೆ ಹೋಗಲು ಆಗಿದ್ದು ೨ ದಿನ ಮಾತ್ರ ..ಆದರೂ ಆ ಎರಡು ದಿನದಲ್ಲಿ ೭ ಸಿನೆಮಾ ನೋಡಿ ದಾಖಲೆ ನಿರ್ಮಿಸಿದೆ..ದಿನಕ್ಕೆ ೪ ಪ್ರದರ್ಶನಗಳನ್ನು ನಾನು ಜೀವಮಾನದಲ್ಲಿ ನೋಡಿಯೇ ಇರಲಿಲ್ಲ !

ಇಂತಹ ಒಳ್ಳೆಯ ಅವಕಾಶ ಒದಗಿಸಿದ ನನ್ನ ಮಿತ್ರ ನಾಗತಿಹಳ್ಳಿ ಚಂದ್ರುಗೆ ಕೃತಜ್ಞತೆಗಳನ್ನು ಸಲ್ಲಿಸುವೆನು. ನನಗೆ ಕೊನೆಯಲ್ಲಿ ಅನಿಸಿದ್ದು ಇನ್ನುಮುಂದೆ ನೆಟ್ಫ್ಲಿಕ್ಸ್ ನಲ್ಲಿ ಆದಷ್ಟು ಹೆಚ್ಚು ಅಂತರರಾಷ್ಟ್ರೀಯ ಭಾಷೆಯ ಚಲನಚಿತ್ರಗಳನ್ನು ನೋಡೋಣ ಎಂದು...ನಾನು ಕೂಡ ನಮ್ಮ ಬೆಂಗಳೂರಿನಲ್ಲಿ ಅಂತರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಹೋದ ಅನುಭವ ಪಡೆದ ಮೇಲೆ..ನನ್ನ ಮುಂದಿನ ಗುರಿ ಆದಷ್ಟು ಬೇಗ ಕಾನ್ ಅಂತರ ರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಹೋಗುವುದು ಎಂದು !! ■

**ಛಾಯಾಚಿತ್ರ ಕೃಪೆ: ಲೇಖಕರು ಮತ್ತು ಅಂತರ್ಜಾಲ**

ವನಿತೆಯ ಮನದಾಳ

# ಸ್ವದೇಶ ಪರದೇಶ - ನನ್ನ ಮನಸಿನ ಒಂದು ದ್ವಂದ್ವ



*ವಸುಧಾ ಗಿರೀಶ್*

“ ನಾನು ಸೊಸೆ ಎಂಬ ಭಾವನೆ ಬಿಟ್ಟು ಮಗಳಾದೆ. ಆಗ ಅವರಿಬ್ಬರೂ ಎಷ್ಟು ಒಳ್ಳೆಯವರು ಅಂತ ಗೊತ್ತಾಯ್ತು. ಅವರಿಗೂ ಕೂಡ ನನ್ನ ಮೇಲೆ ವಿಶ್ವಾಸ ಮೂಡಿತು. ”

ನಾವು ವಾಸಿಸಲು ಸ್ವದೇಶ ಒಳ್ಳೆಯದೋ ಇಲ್ಲ ಪರದೇಶವೋ ಎಂಬುದು ನನ್ನ ಮನಸಿನ ಒಂದು ದ್ವಂದ್ವ. ಇದು ನಾವೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ, ಒಂದಲ್ಲ ಒಂದು ಸಮಯದಲ್ಲಿ ಎದುರಿಸಿದ ಅಂತರಂಗ ಸಮರ.

ಮೊದಲಿಗೆ ನಮ್ಮ ಒಂದು ಕಿರು ಪರಿಚಯ. ನಾನು ವಸುಧಾ, ನನ್ನ ಪತಿ ಗಿರೀಶ್ ಮತ್ತು ಮಕ್ಕಳು ಅನನ್ಯ, ಅವ್ನಿ. ನಮ್ಮದು arranged marriage. ನಮ್ಮಿಬ್ಬರ ಮೊದಲ ಭೇಟಿಯಲ್ಲೇ ಅಮೇರಿಕಾದಲ್ಲಿ ಕೆಲಸದಲ್ಲಿದ್ದ ಗಿರೀಶ್ ಹೇಳಿದರು, “ನಾನು ನನ್ನ ತಂದೆ ತಾಯಿಗೆ ಒಬ್ಬನೇ ಮಗ (ಒಂದೇ ಸಂತಾನ). ಹಾಗಾಗಿ ನಾವು ವಾಪಸ್ ಬಂದು ಅವರನ್ನು ನೋಡಿಕೊಳ್ಳ ಬೇಕು”. ಅದನ್ನು ಕೇಳಿ ನನ್ನ ತಂದೆಯ ಸಮಾನನಾದ ಹಿರಿಯ ಅಣ್ಣ ಹೇಳಿದ, “ನೋಡು, ನಿನಗೆ ಜವಾಬ್ದಾರಿ ನಿಭಾಯಿಸಲು ಆಗೋಲ್ಲ ಅಂತ ಇದ್ದರೆ ಬೇಡ ಅಂತ ಹೇಳು ಆದರೆ ಒಂದು ಸಲ ಒಪ್ಪಿದ ಮೇಲೆ ಕೊಟ್ಟ ಮಾತಿಗೆ ಹಿಂದೆ ಹೋಗಬೇಡ.” ಸರಿ ಮದುವೆ ಆಗಿ ಇಲ್ಲಿಗೆ ಬಂದೆವು, ಗ್ರೀನ್ ಕಾರ್ಡ್, citizenship, ಮಕ್ಕಳು, ತಂದೆ ತಾಯಿಯರ ಅಮೇರಿಕಾ ಪ್ರವಾಸ ಎಲ್ಲ ಆಯ್ತು. ಸದಾ ಮನಸ್ಸಿನ ಒಂದು ಮೂಲೆಯಲ್ಲಿ, “ಎಂದು ವಾಪಸ್” ಎಂಬ ಯೋಚನೆ ಇತ್ತೇ ಹೊರತು ಹೋಗಬೇಕೋ ಬೇಡವೋ ಅಂತ ಇರಲಿಲ್ಲ. ನನ್ನ ಈ ರೀತಿಯ ವಿಚಾರಧಾರೆಗೆ ಮುಖ್ಯ ಕಾರಣ ನನ್ನನ್ನು ಬೆಳೆಸಿದ ತಂದೆ-ತಾಯಿ ಮತ್ತು ಅಣ್ಣಂದಿರು. ಅದರಲ್ಲೂ ನನ್ನ ಹಿರಿಯ ಅಣ್ಣ ನನ್ನ ಆದರ್ಶ. ಅವರು ಜೀವನದಲ್ಲಿ ಎಷ್ಟೇ ಕಷ್ಟ ಬಂದರು ಧೈರ್ಯದಿಂದ ಎದುರಿಸಿ ಕರ್ತವ್ಯ ಪಾಲಿಸುವವರು.

ಒಂದು ದಿನ ಅತ್ತೆ ಮಾವರೊಡನೆ ಮಾತನಾಡು- ವಾಗ ಅತ್ತೆ, “ಅಣ್ಣ ಅಂಗಡಿಗೆ ಹೋದಾಗ ದಾರೀಲಿ ತಲೆ ಸುತ್ತು ಬಂದು ಬಿದ್ದಬಿಟ್ಟರು. - ಆಗ ಯಾರೋ ತಮ್ಮ ಮನೆಗೆ ಕರೆದುಕೊಂಡು ಹೋದರು. ಅಣ್ಣನಿಗೆ disorientation ತರ ಆಗಿ ಸುಮಾರು ಹೊತ್ತು ತಾವು ಯಾರು ಎಂಬುದೇ ಹೇಳಲು ಆಗಲಿಲ್ಲ. ಮನೇಲಿ ನಾನು ಒಬ್ಬಳೇ ಹೆದರಿದ್ದೆ.” ಎಂದರು.

ನನಗೆ ಅನಿಸಿತು, “ನನ್ನ ಮಕ್ಕಳನ್ನು ನಾನು ಹಾಗೆ ಒಬ್ಬೊಬ್ಬರನ್ನೇ ಹೊರಗೆ ಕಳುಹಿಸುವುದಿಲ್ಲ ಅಲ್ಲವೇ? ವಯಸ್ಸಾದ ತಂದೆ-ತಾಯಿ ಕೂಡ ಮಕ್ಕಳಂತೆ ಅಲ್ಲವೇ? ಈಗ ನನಗೆ ಎರಡಲ್ಲ, ನಾಲಕ್ಕು ಮಕ್ಕಳು”. ವಾಪಸ್ ಹೊರಡುವುದು ಅಂತ ಆಯಿತು. ಕೆಲ ಹಿತೈಷಿಗಳು ಹೇಳಿದರು, “ನೀವೇನು ಹೋಗಬೇಕಿಲ್ಲ. ಈಗ ದುಡ್ಡು ಕೊಟ್ಟರೆ ನೋಡಿಕೊಳ್ಳುವರು ಸಿಗುತ್ತಾರೆ. ನೀವು ಯಾಕೆ ಆ ಧೂಳು, traffic ಅಂತ ಕಷ್ಟ ಪಡಬೇಕು?” ಆಗ ನನಗೆ ನನ್ನ ತಂದೆ-ತಾಯಿ ದಿನ ರಾತ್ರಿ ಊಟದ ಸಮಯದಲ್ಲಿ ಆಡುತ್ತಿದ್ದ ಜಗಳ ನೆನಪಾಯ್ತು. ನಮ್ಮ ತಾಯಿ ನಮ್ಮೆಲ್ಲರ ಊಟ ಆದಮೇಲೆ ಉಳಿದದ್ದನ್ನು ತಿನ್ನುತ್ತಿದ್ದರು. ಒಂದೊಂದು ದಿನ ಏನೂ ಉಳಿಯುತ್ತಿರಲಿಲ್ಲ. ಇದನ್ನು ತಿಳಿದ ನಮ್ಮ ತಂದೆ, “ಒಂದು ಹಿಡಿ ಹೆಚ್ಚಿಗೆ ಅಡುಗೆ ಯಾಕೆ ಮಾಡೋಲ್ಲ”, ಅಂತ ಅಮ್ಮನನ್ನು ಬೈದಾಗ ಅಮ್ಮ, “ಅಕ್ಕಿ ಬೇಳೆ ತಿಂಗಳ ಕೊನೆ ತನಕ ಬರಬೇಕು”, ಎನ್ನುತ್ತಿದ್ದರು. ನಮ್ಮ ಅಮ್ಮ ಹಾಗೆ ತ್ಯಾಗ ಮಾಡದಿದ್ದರೆ ನಾವು ನಾಲಕ್ಕು ಜನ ಮಕ್ಕಳು ಇಂಜಿನಿಯರಿಂಗ್ ಓದಲು ಆಗುತ್ತಿರಲಿಲ್ಲ, ಮತ್ತು ನನ್ನ ಭರತನಾಟ್ಯದ ಹವ್ಯಾಸವು ಈಡೇರುತ್ತಿರಲಿಲ್ಲ.ನಮ್ಮ ತಂದೆ ಕಾರ್ಪೋರೇಶನ್ ಆಫೀಸ್ನಲ್ಲಿ asst executive engineer ಆಗಿ ಇದ್ದರೂ ನಮ್ಮ ಮನೆ ಪರಿಸ್ಥಿತಿ ಹೀಗೆ ಇನ್ನು BEL ಮತ್ತು ITI ನಲ್ಲಿ ಸಾಧಾರಣ ಕೆಲಸದಲ್ಲಿ ಇದ್ದ ನನ್ನ ಅತ್ತೆ ಮಾವ ಎಷ್ಟು ಮಗನಿಗಾಗಿ ತ್ಯಾಗ ಮಾಡಿರಬಾರದು?

(ಮುಂದಿನ ಪುಟಕ್ಕೆ)

# ವನಿತೆಯ ಮನದಾಳ

## ಸ್ವದೇಶ ಪರದೇಶ - ನನ್ನ ಮನಸಿನ ಒಂದು ದ್ವಂದ್ವ (ಮುಂದುವರೆದುದು)

ಈಗ ಅವರ ಶ್ರಮದ ಫಲ ನಾನು ನನ್ನ ಮಕ್ಕಳು ಅನುಭವಿಸುತ್ತಿದ್ದೇವೆ. ನಾವು ಬೇರೆ ಯಾರನ್ನಾದರೂ ಅವರನ್ನು ನೋಡಿಕೊಳ್ಳಲು ಇಟ್ಟರೆ ಅವರ ಪ್ರೀತಿ ತ್ಯಾಗಕ್ಕೆ ದುಡ್ಡಿನಿಂದ ಬೆಲೆ ಕಟ್ಟಿದಂತೆ. ಅವರ ಇಳಿ ವಯಸ್ಸಿನಲ್ಲಿ ಮನನೋಯಿಸಿ ನಾವು ಸಂತೋಷವಾಗಿ ಇರಲು ಸಾಧ್ಯವೇ? ಅವರು ಜೀವನ ಪೂರ್ತಿ ನಮಗಾಗಿ ಪಟ್ಟ ಕಷ್ಟದ ಎದಿರು ಒಂದು ಸ್ವಲ್ಪ ಅನಾನುಕೂಲ ಸಹಿಸಲು ನಮ್ಮಿಂದ ಆಗದೆ? ಎಂದು ಅನ್ನಿಸಿ ಮನಸ್ಸು ಇನ್ನೂ ಧೃಢವಾಯಿತು.

ಮತ್ತೆ ಮುಖ್ಯವಾದ issue... ಅತ್ತೆ-ಮಾವರ ಜೊತೆ ಹೇಗೆ ಇರೋದು? ಅವರು ಆಗಾಗ ನನ್ನನ್ನು ಹೀಯಾಳಿಸಿ ಮಾತನಾಡುತ್ತಿದ್ದರು. ಇಲ್ಲಿ ನನ್ನ ಅಮ್ಮನಿಗೆ ನಾನು ಎಷ್ಟು ಕೈಮುಗಿದರೂ ಸಾಲದು. ಅವರು ಹೇಳಿದರು, "ನಾನು ನೀನು ಜಗಳ ಆಡುವುದಿಲ್ಲವೇ? ಆಮೇಲೆ ಮತ್ತೆ ಎಲ್ಲ ಸರಿಹೋಗುವುದಿಲ್ಲವೇ? ನಿನ್ನ ಮನಸ್ಸಿನಲ್ಲಿ ನಿನ್ನ ತಂದೆ ತಾಯಿ ಮತ್ತೆ ಅತ್ತೆ ಮಾವ ಬೇರೆ ಅಲ್ಲ ಅಂತ ಅಂದುಕೋ, ಸ್ವಲ್ಪ ಸಹನೆ ಇರಲಿ. ಪಾಪ ನಿಮ್ಮನ್ನು ಬಿಟ್ಟರೆ ಇನ್ಯಾರಿದ್ದಾರೆ ಅವರಿಗೆ?".
So, ಮನೆ ಮಾರಿ ಹೊರೆಟೆವು. ಆಗ ಅನನ್ಯಗೆ ೫ ವರ್ಷ ಮತ್ತು ಅವ್ನಿ ೩ ತಿಂಗಳು ಕೂಸು. ಅಲ್ಲಿ ಹೋದ ತಕ್ಷಣ ಒಂದು ಮನೆ ಕೊಂಡು, ಮಗಳ ಶಾಲೆ ಅಂತ ಎಲ್ಲ settle ಆಯ್ತು. ನಂಜನಗೂಡು, ಶ್ರೀರಂಗಪಟ್ಟಣ, ತಿರುಪತಿ, ಇತ್ಯಾದಿ ತೀರ್ಥ ಯಾತ್ರೆ. ಮೇಲೆ ನೋಡಲು ಎಲ್ಲ ಚೆನ್ನಾಗಿ ಇತ್ತು, ಆದರೆ ವಾಸ್ತವ ಬೇರೆ. cold war....
ಅತ್ತೆ ಮಾವ ---- ನಾವು ದೊಡ್ಡವರು. ನಾವು ಹೇಳಿದ ಹಾಗೆ ಆಗಬೇಕು.

ನಾವು ---------- ನಾವು ಅಮೇರಿಕೆಯಿಂದ ಇವರಿಗಾಗಿ ಬಂದಿಲ್ಲವೇ? ಸ್ವಲ್ಪ ಅಡ್ಜಸ್ಟ್ ಮಾಡಿಕೊಳ್ಳ ಬಾರದೆ?
ಅನನ್ಯ --------- ಯಾರ ಮಾತು ಕೇಳಬೇಕು?

ಒಂದು ದಿನ ಎಲ್ಲ ವಿಸ್ಫೋಟವಾಯ್ತು. ಅದಾದ ಮೇಲೆ ವೈಮನಸ್ಸು. ಹೀಗೆ ಎರಡು ವರ್ಷ ಕಳೆಯಿತು. ಈ ಪರಿಸ್ಥಿತಿ ನಮ್ಮ ಮಕ್ಕಳಿಗೆ ತುಂಬಾ confuse ಆಗುತ್ತಿತ್ತು.

ಇದನ್ನು ಕಂಡು ನಾನು ಒಂದು ದಿನ ನನ್ನ ಅತ್ತೆ ಜೊತೆ ಕೂತು ಅವರಿಗೆ ಏನು ಸರಿ ಹೋಗುತ್ತಿಲ್ಲ ಅಂತ ಕೇಳಿದೆ. ಇಬ್ಬರು ಏನೇನೋ ಹೇಳಿದರು ಆದರೆ ಅಡಗಿದ ಸಂದೇಶ ಅವರಿಗೆ ನನ್ನ ಪ್ರತಿ ಇದ್ದ ಅಭದ್ರತೆ.

ಆಗ ನಾನು ಅವರಿಗೆ ಹೇಳಿದೆ, "ನಾನು ನಿಮ್ಮ ಮಗಳ ಹಾಗೆ ಮತ್ತು ನಿಮ್ಮ ಕುಟುಂಬಕ್ಕೆ ಸೇರಿದವಳು. ದಯವಿಟ್ಟು ನಿಮಗೆ ಏನು ಬೇಕೋ ನೇರವಾಗಿ ಹೇಳಿ ಸುತ್ತಿ ಬಳಸಿ ಹೇಳಿದರೆ ನನಗೆ ಅರ್ಥ ಆಗೋಲ್ಲ plus ಎರಡು ಚಿಕ್ಕಮಕ್ಕಳನ್ನು ಕೂಡ ಸಂಭಾಳಿಸಬೇಕು. ಒಂದೊಂದು ಸಲ ರೇಗಿದರೆ ಬೇಜಾರು ಮಾಡಿಕೊಳ್ಳಬೇಡಿ". ನಮ್ಮ ಈ ಸಂಭಾಷಣೆ ನಮ್ಮ ಸಂಬಂಧದ ನಾಂದಿ ಆಯಿತು.

ನಾನು ಸೊಸೆ ಎಂಬ ಭಾವನೆ ಬಿಟ್ಟು ಮಗಳಾದೆ. ಆಗ ಅವರಿಬ್ಬರೂ ಎಷ್ಟು ಒಳ್ಳೆಯವರು ಅಂತ ಗೊತ್ತಾಯ್ತು. ಅವರಿಗೂ ಕೂಡ ನನ್ನ ಮೇಲೆ ವಿಶ್ವಾಸ ಮೂಡಿತು. ನನ್ನ ಅತ್ತೆಯನ್ನು ಎಲ್ಲರೂ ರೇಗಿಸುತ್ತಿದ್ದರು "ನಮ್ಮ ವಸು" ಅಂತ ಯಾವಾಗಲೂ ಸೊಸೆ ಗುಣಗಾನ ಮಾಡುತ್ತೀಯಾ ಅಂತ. ನಾವು ವಾಪಸ್ಸು ಹೋಗದ್ದಿದ್ದರೆ ಈ ಅನುಭವ ಅನುಭಾವಗಳನ್ನು ಎಂದೆಂದಿಗೂ ಕಳೆದುಕೊಂಡಿರುತ್ತಿದ್ದೆವು. ನಮ್ಮ ಮಕ್ಕಳಿಗೂ ಒಂದು ಪರಿಪೂರ್ಣ ಕುಟುಂಬ ಅಂದರೆ ಏನು ಅಂತ ಗೊತ್ತಾಗುತ್ತಿರಲಿಲ್ಲ. ಬರೀ ಅಜ್ಜಿ-ತಾತ ಅಲ್ಲದೆ ಸೋದರ ಮಾವ, ಅತ್ತೆ ಮತ್ತು ನಮ್ಮ ಸಕಲ ಬಂಧು ಬಳಗದವರ ಪರಿಚಯವೂ ಆಯ್ತು.

ಈ ಕಡೆ ನನ್ನ ಅಮ್ಮನಿಗೆ ಯಾವಾಗ ಬೇಕೋ, ಎಷ್ಟು ಹೊತ್ತು ಬೇಕೋ ನನ್ನ ಜೊತೆ ಮಾತಾಡುತ್ತಿದ್ದರು. ಮೊಮ್ಮಕ್ಕಳನ್ನು ನೋಡಬೇಕು ಅನಿಸಿದಾಗಲೆಲ್ಲ ಶಾಲೆಗೆ ರಜೆ ಇದ್ದರೆ ನಾವು ಹೋಗುತ್ತಿದ್ದೆವು ಇಲ್ಲಾಂದರೆ ಅಮ್ಮ ಬರುತ್ತಿದ್ದರು. ಅವರು ತೀರಿಕೊಳ್ಳುವ ಮುಂಚೆ ೩ ತಿಂಗಳು ನಮ್ಮ ಜೊತೆ ಇದ್ದರು. ದೇವರಾಯನದುರ್ಗಕ್ಕೆ ಕರೆದುಕೊಂಡು ಹೋಗು ಎಂದರು, pizza, burger, taco, ಕಚೋರಿ, ಸಮೋಸ, ಅಕ್ಕಿರೊಟ್ಟಿ, MTR ವಿದ್ಯಾರ್ಥಿ ಭವನ, ಹೀಗೆ ದಿನಕ್ಕೊಂದು ಚಿಕ್ಕಮಕ್ಕಳ ಹಾಗೆ ಬೇಡಿಕೆ. **(೫೯ನೇ ಪುಟಕ್ಕೆ)**

ವನಿತೆಯ ಮನದಾಳ

# ಮಹಿಳೆ ಮುಂದುವರೆಯುವುದು ಎಂದು?



ಬಿಂದುಮಾಧವಿ ಪಾಲಾಕ್ಷಪ್ಪ

> “ ಹೆಂಗಸರೆಂದರೆ ಹೀಗೇ ಇರಬೇಕು ಎಂದು ಅಂಧಕಾರದಲ್ಲಿ ಮುಳುಗದೇ, ಎಲ್ಲಾ ಜವಾಬ್ದಾರಿಗಳನ್ನೂ ಹೊರುತ್ತಾ, ಕೀಳರಿಮೆಯನ್ನು ಬುಡದಿಂದ ಕೀಳುತ್ತಾ ಬೆಳೆಯಬೇಕು. ”

“ಈ ಶತಮಾನದ ಮಾದರಿ ಹೆಣ್ಣು” ಎಂದು ಆರತಿ ಶುಭಮಂಗಳ ಚಿತ್ರದಲ್ಲಿ ಹಾಡಿ ಈಗ್ಗೆ ನಲವತ್ತು ವರ್ಷಗಳೇ ಆಗಿ ಹೋಗಿವೆ. ಆದರೂ ಇಂದಿಗೂ ಈ ಹಾಡು ಪ್ರಸ್ತುತವಾಗಿದೆ. ಇದಕ್ಕೆ ನಾವು ಹೆಮ್ಮೆ ಪಡಬೇಕೋ ಅಥವಾ ನಾಚಬೇಕೋ ಗೊತ್ತಿಲ್ಲ.

ನಿಜ, ಇಂದಿನ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಛಾಪನ್ನು ಮೂಡಿಸುತ್ತಿದ್ದಾಳೆ. ಆದರೆ ಅದು ಕೇವಲ ಇನ್ನೂ ಬೆರಳೆಣಿಕೆಯಷ್ಟೇ. ಚಿತ್ರರಂಗ, ರಾಜಕೀಯ, ವೈದ್ಯಕೀಯ, ವಿಜ್ಞಾನ, ಸಾಹಿತ್ಯ, ಕ್ರೀಡೆ, ಬಾಹ್ಯಾಕಾಶ ಸಂಶೋಧನೆ, ರಕ್ಷಣಾ ಇಲಾಖೆ, ವಾಣಿಜ್ಯ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆಗಳನ್ನು ಮಾಡುತ್ತಿದ್ದಾರೆ. ಆದರೆ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರು ಇದ್ದಾರೆ ಎಂದ ಮಾತ್ರಕ್ಕೆ ಮಹಿಳೆಯರು ಮುಂದುವೆರೆದಿದ್ದಾರೆ, ಪುರುಷರಿಗೆ ಸಮಾನವಾಗಿದ್ದಾರೆ ಎನ್ನಲು ಸಾಧ್ಯವಿಲ್ಲ. ಏಕೆಂದರೆ ಸಮಾಜದ ಗಣ್ಯ ವ್ಯಕ್ತಿಗಳನ್ನು ಗಣನೆಗೆ ತೆಗೆದುಕೊಂಡರೆ ಮಹಿಳೆಯರ ಪಾಲು ಅದರಲ್ಲಿ ಕಡಿಮೆ. ಕುಟುಂಬದಲ್ಲಿ ಹೆಣ್ಣೇ ಅಡಿಗೆಮನೆಯ ನಾಯಕಿಯಾಗಿದ್ದರೂ ಹೆಸರಾಂತ ಪಾಕ ಪ್ರವೀಣರ ಪಟ್ಟಿಯಲ್ಲಿ ಗಂಡಸರೇ ಮುಂದು. ಇದಕ್ಕೆ ಕಾರಣ ಪುರುಷ ಪ್ರಧಾನ ಸಮಾಜ ಎಂದು ಹೇಳುವುದಿಲ್ಲ. ಏಕೆಂದರೆ ನಮ್ಮಲ್ಲೇ ಅನೇಕರಿಗೆ ದೇವರ ದಯದಿಂದ ಮಕ್ಕಳಲ್ಲಿ ಹೆಣ್ಣು ಗಂಡು ಎಂದು ಭೇದಭಾವ ಮಾಡದ ಪೋಷಕರಿದ್ದಾರೆ, ಹೆಣ್ಣು ಎಂದು ಕೀಳಾಗಿ ನೋಡದ ಬಾಳ ಸಂಗಾತಿಗಳಿದ್ದಾರೆ. ಹಾಗಾದರೂ ನಾವು ನಮ್ಮದೇ ಆದ ಒಂದು ಹೊಸ್ತಿಲನ್ನು ದಾಟಿ ಮುಂದೆ ಹೋಗಲು ಹಿಂದು ಮುಂದು ನೋಡುತ್ತೇವೆ. ಏಕೆ ಹೀಗೆ?

ಬಹುಷಃ ಶತಶತಮಾನಗಳಿಂದ ಹೆಣ್ಣು ಎಂದರೆ ಹೀಗಿರಬೇಕು ಎಂದು ಬಂದಿರುವ ಸಂಸ್ಕಾರ ನಮ್ಮನ್ನು ಮುಂದುವರೆಯಲು ಬಿಡುತ್ತಿಲ್ಲ ಎನ್ನಿಸುತ್ತದೆ. ನಾನು ಕೇವಲ ಭಾರತೀಯ ಮಹಿಳೆಯರ ಬಗ್ಗೆ ಮಾತನಾಡುತ್ತಿಲ್ಲ. ಜಗತ್ತಿನಾದ್ಯಂತ ಯಾವುದೇ ದೇಶದ ಕಲಾಪಗಳನ್ನು ನೋಡಿದರೆ ಅದರಲ್ಲಿ ಪುರುಷರ ಪಾತ್ರದ ಮುಂದೆ ಮಹಿಳೆಯರ ಪಾತ್ರ ಬಹು ಗೌಣ ಎನ್ನಬಹುದು. ಹಾಗಾಗಿ ಈ ನಮ್ಮ ಸುತ್ತಲಿರುವ ಬೇಲಿಯನ್ನು ನಾವೇ ತೊಡೆದು ಮುಂದುವರೆಯಬೇಕು.

ಭಗವಂತ ಸೃಷ್ಟಿಸುತ್ತಲೇ ಹೆಣ್ಣಿಗೆ ಕೆಲವು ಜವಾಬ್ದಾರಿಗಳನ್ನು ಕೊಟ್ಟ, ಇನ್ನು ಸಮಾಜ ಒಂದಷ್ಟು ನಿಬಂಧನೆಗಳನ್ನು ಹೇರಿತು, ಅಷ್ಟೇ ಅಲ್ಲ ಮಹಿಳೆಯೂ ಇಲ್ಲದ ಕೆಲವು ನಿಯಮಗಳನ್ನು ತನಗೆ ತಾನೇ ರೂಪಿಸಿ-ಕೊಂಡಳು ಎಂದರೆ ತಪ್ಪಿಲ್ಲ. ಏಕೆಂದರೆ ಒಬ್ಬ ಪುರುಷ ಎದ್ದು ತನ್ನ ವೃತ್ತಿಯ ಪೋಷಾಕು ಧರಿಸಿ ಕಛೇರಿಗೆ ಹೋಗುವುದಕ್ಕೂ ಮಹಿಳೆ ತಯಾರಾಗಿ ಹೋಗುವುದಕ್ಕೂ ಬಹಳ ವ್ಯತ್ಯಾಸವಿದೆ. ಅವಳು ಭಾರತೀಯಳಾಗಿ ಸ್ವಲ್ಪ ಸಾಂಪ್ರದಾಯಿಕ ಉಡುಗೆ ತೊಡುವುದಾದರೆ ಸೀರೆ, ಕುಂಕುಮ, ಕಿವಿಯೋಲೆ, ಬಳೆ ಇತ್ಯಾದಿ ಎಲ್ಲ ವ್ಯವಸ್ಥಿತವಾಗಿ ಧರಿಸಿ ಹೊರಡಲು ಪುರಷನಿಗಿಂತ ಹೆಚ್ಚು ಸಮಯ ಬೇಕು. ಇನ್ನು ಪಾಶ್ಚಾತ್ಯ ಉಡುಗೆ ತೊಡುಗೆ ಎಂದರೂ ಹಿಂದಿನ ದಿನ ಧರಿಸದ ಪೋಷಾಕು, ವೃತ್ತಿಗೆ ಸೂಕ್ತವಾದ ಬಟ್ಟೆಬರೆ, ತೀಡಿದ ಹುಬ್ಬು, ಅಲ್ಪಸ್ವಲ್ಪವಾದರೂ ಮೇಕ್‌ಅಪ್ ಎಲ್ಲ ಇರಲೇಬೇಕು. ಅದಕ್ಕೆಲ್ಲಾ ಗಮನ ಕೊಡದೆ ಗಂಡಸಿನಂತೆ ಯಾವುದೋ ಒಂದು ಒಟ್ಟಿನಲ್ಲಿ ಶಿಸ್ತಾಗಿರುವ ಉಡುಪು ಎಂದು ಧರಿಸಿ ಕೆಲಸಕ್ಕೆ ಹೋಗಿ ನೋಡಬೇಕು. (ಮುಂದಿನ ಪುಟಕ್ಕೆ)

# ವನಿತೆಯ ಮನದಾಳ

## ಮಹಿಳೆ ಮುಂದುವರೆಯುವುದು ಎಂದು?

**(ಮುಂದುವರೆದುದು)**

ಆಗ ಪುರುಷರು ಗಮನಿಸದಿದ್ದರೂ ಮಹಿಳೆಯರೇ ಏನು ಹೀಗೆ ಬಂದಿದ್ದಾಳೆ ಎಂದು ಆಡಿಕೊಳ್ಳುವುದಂತೂ ಖಂಡಿತ. ಇದಕ್ಕೆ ಒಂದು ಉದಾಹರಣೆ ಮೊನ್ನೆ ಅಮೇರಿಕಾದಲ್ಲಿ ರಾಜಕಾರಿಣಿ ಗ್ರೆಚನ್ ವಿಟ್ ಮರ್ (Gretchen Whitmer ) ಮಾಡಿದ ಭಾಷಣದ ಬಗ್ಗೆ ಪ್ರತಿಕ್ರಿಯಿಸುವುದರ ಬದಲು ಅವಳ ಉಡುಪಿನ ಬಗ್ಗೆ ಚರ್ಚಿಸಿದವರಲ್ಲಿ ಮಹಿಳೆಯರೇ ಮೊದಲಿಗರು. ಇನ್ನು ನಮ್ಮ ನೆಲ ಕರ್ನಾಟಕದಲ್ಲಿ ಚುನಾವಣೆಗೆ ಸ್ಪರ್ಧಿಸಲು ಹೊರಟ ಮಹಿಳೆಗೆ ಗಂಡ ಸತ್ತು ಒಂದು ತಿಂಗಳೂ ಆಗಲಿಲ್ಲ ಈಗಲೇ ಯಾಕೆ ಇವಳಿಗೆ ಚುನಾವಣೆ ಎಂದು ತಮ್ಮ ಅಲ್ಪ ಬುದ್ಧಿಯನ್ನು ಮೆರೆದರು ಹಿರಿಯ (?) ರಾಜಕಾರಣಿಗಳು!!

ಇನ್ನು ಅಮೆರಿಕಾದಂತಹ ಮುಂದುವರೆದ ದೇಶದಲ್ಲಿ ಮೂರು ನಾಲ್ಕು ದಶಕಗಳೇ ಇದ್ದು ಭಾರತಕ್ಕೆ ಬಂದ ಮಹಿಳೆಯರು ಕೂಡ ಮನೆಗೆ ಬಂದ ಹೆಂಗಸರಲ್ಲಿ ಮುತ್ತೈದೆ, ವಿಧವೆ ಎಂದು ಭೇದಭಾವ ತೋರುವುದುಂಟು. ಇನ್ನು ಉಳಿದವರ ಬಗ್ಗೆ ಏನು ತಾನೇ ಹೇಳುವುದು? ನಾವು ಇದನ್ನೆಲ್ಲಾ ತೊಡೆದು ಮುಂದುವರೆಯಬೇಕೆಂದರೆ, ಹೆಜ್ಜೆ ಹೆಜ್ಜೆಗೂ ನಾವು ನಮ್ಮನ್ನು ಪ್ರಶ್ನಿಸುತ್ತಿರಬೇಕು. ಯಾವುದು ಸರಿ, ಯಾವುದು ತಪ್ಪು? ಎಂದು. ಹೆಂಗಸರೆಂದರೆ ಹೀಗೇ ಇರಬೇಕು ಎಂದು ಅಂಧಕಾರದಲ್ಲಿ ಮುಳುಗದೇ, ಎಲ್ಲಾ ಜವಾಬ್ದಾರಿಗಳನ್ನೂ ಹೊರುತ್ತಾ, ಕೀಳರಿಮೆಯನ್ನು ಬುಡದಿಂದ ಕೀಳುತ್ತಾ ಬೆಳೆಯಬೇಕು. ಆಗ ವಿಶ್ವ ಮಹಿಳಾದಿನವನ್ನು ಹೆಮ್ಮೆಯಿಂದ ಆಚರಿಸಬಹುದು, ಅಷ್ಟೇ ಅಲ್ಲ ಪ್ರತಿಯೊಂದು ದಿನವನ್ನೂ ಹೆಮ್ಮೆಯಿಂದ ಬಾಳಬಹುದು. ■

## ಸ್ವದೇಶ ಪರದೇಶ - ನನ್ನ ಮನಸಿನ ಒಂದು ದ್ವಂದ್ವ

**೫೭ನೇ ಪುಟದಿಂದ.....**

ಅವರು ಒಂದು ವರ್ಷದ ಮಗುವಾದಾಗ ತಾಯಿಯನ್ನು ಕಳೆದುಕೊಂಡಿದ್ದರು. ಆದರೆ ಆ ೩ ತಿಂಗಳು ನಾನು ಅವರ ತಾಯಿ ಆಗಿ ಅವರ ಪುಟ್ಟ ಪುಟ್ಟ ಆಸೆಗಳನ್ನು ತೀರಿಸಿದೆ. ಮತ್ತು ಅವರು ಪರಲೋಕಕ್ಕೆ ಹೋಗುವ ಒಂದು ವಾರದ ಮುಂಚೆ ನನ್ನನ್ನು ಕರೆಸಿಕೊಂಡು ಅವರ ಸೇವೆ ಮಾಡುವ ಒಂದು ಅವಕಾಶವನ್ನು ಕೊಟ್ಟರು. ನಾನು ಇಲ್ಲಿ ಇದ್ದಿದ್ದರೆ ಇವೆಲ್ಲ ಸಾಧ್ಯವಾಗುತ್ತಿತ್ತೇ? Skype, whatsapp cannot come even close.

ಈಗ ನಮ್ಮ ಅತ್ತೆ-ಮಾವನವರು ಇಲ್ಲ. ಈ ಜೀವಗಳು ಮತ್ತೆ ಬೇಕು ಎಂದರೆ ಸಿಗುವುದಿಲ್ಲ. ಅವರ ಆಶೀರ್ವಾದಕ್ಕಿಂತ ದೊಡ್ಡ ಆಸ್ತಿ ಯಾವುದೂ ಇಲ್ಲ. ಇಂದು ನಾನು, ಗಿರೀಶ್ ತುಂಬಾ ಸಮಾಧಾನದ ಜೀವನ ನಡೆಸುತ್ತಿದ್ದೇವೆ. ಮನಸ್ಸಿನಲ್ಲಿ ಯಾವುದೇ ತರಹದ ಗೊಂದಲ, ಅಪರಾಧಿ ಭಾವ ನಮ್ಮನ್ನು ಕಾಡುವುದಿಲ್ಲ. ನನಗೆ "ಪ್ರೀತಿ ಪ್ರೇಮ ಎಲ್ಲವನ್ನು ಎದಿರಿಸುವ ಶಕ್ತಿ ಕೊಡುತ್ತೆ" ಎಂಬ ಹೇಳಿಕೆಯ ನಿಜವಾದ ಅನುಭವ ಆಯ್ತು. ಬೆಂಗಳೂರಿನ traffic, pollution ಎಲ್ಲ ಸಂಬಂಧಗಳ ಮುಂದೆ ತುಂಬಾ ಕ್ಷುಲ್ಲಕ ಅನಿಸುತ್ತೆ.

ಈ ಯುಗಾದಿ ಹಬ್ಬದಲ್ಲಿ ನಾವು ಕೇವಲ ಶಾಸ್ತ್ರಕ್ಕಾಗಿ ಬೇವು ಬೆಲ್ಲ ತಿನ್ನುವುದೇ? ನಿಜಜೀವನದಲ್ಲಿ ಬೆಲ್ಲದ ಜೊತೆ ಬೇವು ಬೇಡ ಅನ್ನಲು ಸಾಧ್ಯವೇ? ಬೇವು ಬೆಲ್ಲ ಎರಡರಲ್ಲಿ ಬೇವೇ ದೇಹಕ್ಕೆ ಆರೋಗ್ಯಕರ.

**ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ.**

ಕೃಷ್ಣಾರ್ಪಣ ■

ಕವನ

# ಮಲೆನಾಡಿಗೊಂದು ನಮ್ಮ ಪಯಣ



*ರಾಜಶ್ರೀ ಹಿತೇಶ್ ರಾವ್*



ಮಲೆನಾಡಿಗೊಂದು ನಮ್ಮ ಪಯಣ
ಬಂದೇ ಬಿಟ್ಟಿತು ಆ ದಿನ
ನವೋಲ್ಲಾಸ ತುಂಬಿದ ಮಧುರ ಕ್ಷಣ
ವರುಣನೊಂದಿಗೆ ಹೊರಟಿತು ನಮ್ಮ ಪಯಣ
ವಿಶ್ವ ವಿಖ್ಯಾತ ಜೋಗ ಜಲಪಾತಕ್ಕೊಂದು ಭ್ರಮಣ - (೧)

ಹುಲಿಕಲ್ಲಿನ ಘಾಟಿಯಲ್ಲಿ ಸಾಗಿತು ನಮ್ಮ ವಾಹನ
ಸುತ್ತಲೂ ಆವರಿಸಿದ ಮಂಜುಮುಸುಕಿದ ವಾತಾವರಣ
ಎಡೆಬಿಡದೆ ಸುರಿದು ಆರ್ಭಟಿಸುತ್ತಿದ್ದ ವರುಣ
ಭುವಿ-ಆಗಸ ಒಂದಾಗುವಂತಿತ್ತು ಆ ಚಿತ್ರಣ - (೨)

ಮಳೆಯಲ್ಲೇ ಮುಂದುವರಿಯಿತು ನಮ್ಮ ಗಾಡಿ
ಸಣ್ಣ ತರಹದ ಉದರ ಪೋಷಣೆ ಮಾಡಿ
ಸಂತಸದಲಿದ್ದರು ಚಿಣ್ಣರು ನಕ್ಕು ನಲಿದಾಡಿ
ಅವರೊಂದಿತೆ ಜೊತೆಯಾದೆವು ನಾವೂ ಕೂಡಿ ಹಾಡಿ - (೩)

ಹಚ್ಚ ಹಸುರುಟ್ಟು ಕಂಗೊಳಿಸುತ್ತಿದ್ದ ಪ್ರಕೃತಿ ಮಾತೆ
ಮಧ್ಯ ಸ್ವಾಗತಿಸುತಿತ್ತು ಬಿದನೂರು ಕೋಟೆ
ಎಲ್ಲೆಲ್ಲೂ ಹರಡಿತ್ತು ಹುಲ್ಲು ಹಸುರಿನ ರಾಶಿ
ಮಳೆಯಲ್ಲಿ ನೆನೆದು ಸಂಭ್ರಮಿಸಿದೆವು ಅಲ್ಲಿ ಪ್ರವೇಶಿಸಿ - (೪)

ಕವಿದ ಕಗ್ಗತ್ತಲಲಿ ಮತ್ತೆ ಪಯಣಿಸಿದೆವು ನಾವು
ಮೊದಲೇ ಕಾಯ್ದಿರಿಸಿದ್ದ ವಸತಿ ಗೃಹವ ಸೇರಲು
ಒಡನೆಯೇ ಗ್ರಹಿಸಿದೆವು ರಾತ್ರಿ ಫಲಾಹಾರವ
ಜಾರಿದೆವು ನಿದ್ದೆಗೆ ಮರೆತು ಪ್ರಯಾಸವ - (೫)

ಮುಂಜಾನೆ ಎದ್ದು ಉತ್ಸಾಹದಿಂದ
ಸಿದ್ಧರಾದೆವು ಬಹಳ ಶೃಂಗಾರದಿಂದ
ಪಟಪಟನೆ ಮುಗಿಸಿದೆವು ಬೆಳಗಿನುಪಹಾರ
ಆರಂಭಿಸಿದೆವು ನಾವು ಆ ದಿನದ ಸಂಚಾರ - (೬)

ರಸ್ತೆ ಇಕ್ಕೆಲಗಳಲಿ ಕಂಡಿತು ಪೈರುಪಚ್ಚೆಗಳ ಸಾಲು
ಅಲ್ಲಲ್ಲಿ ಕಾಣಸಿಕ್ಕಿತು ಮೇಯುತ್ತಿದ್ದ ಗೋವುಗಳು
ಕಿವಿಗಿಂಪಾಯಿತು ಹಕ್ಕಿಗಳ ಕಲರವ ಕೇಳಲು
ಮೈಮನ ತಂಪೇರಿತು ತಂಗಾಳಿ ಸೋಕಲು - (೭)

ನೋಡ ನೋಡುತ್ತಲೇ ಬಂತು ಜೋಗ ಜಲಪಾತ
ಸೌಂದರ್ಯವ ಕಂಡು ನಾನಾದೆ ಮೂಕವಿಸ್ಮಿತ
ಮಳೆ-ಮಂಜು-ಮುಸುಕಿನ ನಡುವೆ ಶರಾವತಿಯ ಭೋರ್ಗರೆತ
ರಾಜ-ರಾಣಿ-ರೋರರ್-ರಾಕೆಟ್‌ರ ಹರಿವಿನ ಭರತ - (೮)

**(ಮುಂದಿನ ಪುಟಕ್ಕೆ)**

## ಕವನ

### ಮಲೆನಾಡಿಗೊಂದು ನಮ್ಮ ಪಯಣ

**(ಮುಂದುವರೆದುದು)**

ಕ್ಷಣ ಕ್ಷಣವು ಇಮ್ಮಡಿಸಿತು ಪ್ರಕೃತಿಯ ಸೊಬಗು
ದುಮ್ಮಿಕ್ಕಿ ಹರಿಯುತ್ತಿತ್ತು ಬೆಳ್ನೊರೆಯ ಚೆಲುವು
ಅಲ್ಲಲ್ಲಿ ತೇಲುತ್ತಿತ್ತು ಪತಂಗಗಳ ಹಿಂಡು
ಆಗಾಗ ಹಾರುತ್ತಿತ್ತು ಬೆಳ್ಳಕ್ಕಿಗಳ ದಂಡು - (೯)

ಸೌಂದರ್ಯವ ಸವಿಯುತ ಕಳೆದೆವು ಬಹಳ ಸಮಯ
ಕ್ಯಾಮರಾ ಕಣ್ಣಿನಲ್ಲೂ ಸೆರೆಹಿಡಿದೆವು ನಿಸರ್ಗದ ವಿಸ್ಮಯ
ಆಗಲೇ ನೆನಪಾಯಿತು ಡಾ|ರಾಜ್ ಕುಮಾರರ ಜೋಗದ ಗಾನ
ಗುನುಗುತ ಸಾಗಿತು ವರದ ಹಳ್ಳಿಗೆ ನಮ್ಮ ಯಾನ - (೧೦)

ಹತ್ತಿದೆವು ಇನ್ನೂರೈವತ್ತು ಮೆಟ್ಟಿಲುಗಳ ಬೆಟ್ಟಕ್ಕೆ
ಶಿರಬಾಗಿ ನಮಿಸಿದೆವು ಶ್ರೀಧರ ಸ್ವಾಮಿಗಳ ಸನ್ನಿಧಾನಕ್ಕೆ
ಬಳಿಕ ೦೦ಮುಂದುವರಿದೆವು ಮೃಷ್ಟಾನ್ನ ಭೋಜನಕ್ಕೆ
ಬೆಳೆಸಿದೆವು ಪ್ರವಾಸ ಮುಂದಿನ ತಾಣಕ್ಕೆ - (೧೧)

ಆಗಲೇ ಕವಿದಿತ್ತು ಕರಿಮೋಡಗಳ ಛಾಯೆ
ದೊಪ್ಪನೆ ಸುರಿಯಿತು ಋತು ವರ್ಷಧಾರೆ
ದಟ್ಟ ಕಾನನವು ಸೀಳಿ ಸರಿಯಿತು ಹಿಂದೆ
ಬಂದು ನಿಂತೆವು ಇಕ್ಕೇರಿ ಅಘೋರೇಶ್ವರನ ಮುಂದೆ - (೧೨)

ಆಹಾ| ಎಂಥಾ ಭವ್ಯ ದೇವಾಲಯ|
ವರ್ಣನಾತೀತ ಆದರ ಶಿಲ್ಪಕಲೆಯ ಕೌಶಲ್ಯ
ಹೆಜ್ಜೆ ಹೆಜ್ಜೆಯಲ್ಲೂ ಕೌತುಕತೆಯ ಕೆತ್ತನೆ
ಸಾರಿ ಹೇಳುತ್ತಿತ್ತು ನಮ್ಮ ಶ್ರೀಮಂತಿಕೆಯ ಇತಿಹಾಸವನ್ನೇ - (೧೩)

ನೋಡುತ್ತಾ ಹಾಕಿದೆವು ದೇಗುಲಕೆ ಒಂದು ಪ್ರದಕ್ಷಿಣೆ
ಭಕ್ತಿ ಭಾವವನ್ನೇ ನೀಡಿದವು ದೇವರಿಗೆ ಸಮರ್ಪಣೆ
ಮನದಲ್ಲೇ ಮೂಡಿತು ಸಾತ್ವಿಕತೆಯ ಭಾವನೆ
ಶಾಂತಿಯಿಂದ ಕುಳಿತೆವು ತುಸು ಹೊತ್ತು ಮಾಡುತ್ತಾ ದೇವರ ಸ್ಮರಣೆ
- (೧೪)

ಮತ್ತೆ ದೊರೆಯಿತು ನಮ್ಮ ಪ್ರಯಾಣಕ್ಕೆ ಚಾಲನೆ
ಕೂಡಲೇ ನೆನಪಾಯಿತು ಸ್ವಗೃಹದ ಯೋಚನೆ
ತಿಳಿಯದೇ ಹೋಯಿತು ದಾರಿ ಸವೆಸಿದ ವೇಗ
ಪಯಣದ ಅನುಭವವ ಮೆಲುಕುತ್ತಾ ಸಾಗಿದಾಗ - (೧೫)

ಅಂತೂ ಇಂತೂ ಸೇರಿದೆವು ನಮ್ಮ ಮನೆಗೆ
ತೊಡಗಿಕೊಂಡವು ಮುಂದಿನ ಕಾರ್ಯದೆಡೆಗೆ
ಮತ್ತೆ ಮತ್ತೆ ಮರುಕಳಿಸುತ್ತಿತ್ತು ಪ್ರವಾಸದ ಗಮ್ಮತ್ತು
ಅದೇ ಸ್ಫೂರ್ತಿಯಾಯಿತು ನನ್ನ ಈ ಕವನಕ್ಕೆ ವಸ್ತು - (೧೬)

ಅಬ್ಬಾ ಏನದ್ಭುತ ನಮ್ಮ ಮಲೆನಾಡು !
ಗಿರಿ ಕಾನನಗಳು ತುಂಬಿದ ಸಂಪತ್ತಿನ ಬೀಡು
ಕಲೆ ಕವಿಗಳು ಜನಿಸಿದ 'ಪುಣ್ಯ ಭೂಮಿ'
ಅನ್ನದಾತರಿಗಿದು 'ಸ್ವರ್ಣ ಭೂಮಿ'. - (೧೭) ■

**ಛಾಯಾಚಿತ್ರ: ಜೋಗ ಜಲಪಾತ ಕೃಪೆ: ರಾಜಶ್ರೀ ರಾವ್**

ಲೇಖನ

# ಪುರಂದರ ದಾಸರ ಸಾಹಿತ್ಯ ದರ್ಶನ



*ರಾಘವೇಂದ್ರ ಕುಂದಲಗುರ್ಕಿ*

ಕರ್ನಾಟಕದ ಇತಿಹಾಸದಲ್ಲಿ ಶ್ರೀ ಪುರಂದರದಾಸರು "ಸಂಗೀತ ಪಿತಾಮಹ" ಎನಿಸಿಕೊಂಡ ದಾಸ ಶ್ರೇಷ್ಠರು. ಹಲವಾರು ಕೃತಿಗಳು ದಾಸಸಾಹಿತ್ಯದ ಸಾರವನ್ನು ತಿಳಿಸುವುದಲ್ಲದೆ, ಜೀವನಕ್ಕೆ ಬೇಕಾದ ಮಾರ್ಗದರ್ಶನವನ್ನು ತೋರುವಂತಹ ವಿವಿಧ ಶೈಲಿಯ, ವಿವಿಧ ಪ್ರಕಾರಗಳ ರಚನೆ, ಉಗಾಭೋಗಗಳು, ಸುಳಾದಿಗಳು ಹಾಗೂ ದೇವರ ನಾಮಗಳಾಗಿವೆ. ಇವರು ರಚಿಸಿರುವ ಕೃತಿಗಳು 5 ಲಕ್ಷ ಎಂಬುದನ್ನು ಇತಿಹಾಸಕಾರರು ತಿಳಿಸಿದ್ದಾರೆ. ಆದರೆ ಅವುಗಳಲ್ಲಿ ಉಪಲಬ್ಧವಿರುವ ಕೃತಿಗಳು ಕೆಲವು ಸಾವಿರ ಮಾತ್ರ. ಇವರ ಜೀವನ ಚರಿತ್ರೆ ಒಂದು ಮಾರ್ಮಿಕವಾದಂತ ಕಥೆ. ನವಕೋಟಿ ನಾರಾಯಣನಾಗಿ, ನಂತರ ಉಂಚ ವೃತ್ತಿಯನ್ನು ಜೀವನಾಧಾರ-ವಾಗಿಸಿಕೊಂಡು, ಹರಿ ನಾಮಸ್ಮರಣೆಯನ್ನು ಮಾಡುತ್ತಾ ಊರು-ಊರುಗಳನ್ನು ಸುತ್ತಿ, ಜನರ ಜೀವನದ ಸಾಧನೆಗೆ ಪ್ರಮುಖವಾದಂತಹ ಆಧ್ಯಾತ್ಮದ ಮಾರ್ಗದರ್ಶನವನ್ನು ತಿಳಿಸುತ್ತಾ, ದಾಸ ವೃತ್ತಿಯನ್ನು ಮಾಡಿದವರು. ಇವರ ಕೃತಿಗಳ ವಿವಿಧ ಸಾಹಿತ್ಯದ ಬಗೆಗಳನ್ನು ತಿಳಿದುಕೊಳ್ಳೋಣ.

ದಾಸಸಾಹಿತ್ಯಕ್ಕೆ ಮುಂಚೆ ಬಂದಂತಹ ವಚನ- ಸಾಹಿತ್ಯದೊಡನೆ ಕೆಲವು ಸಾಮ್ಯತೆಗಳಿದ್ದವು. ಜೀವನದ ಮೌಲ್ಯಗಳನ್ನು ತಿಳಿಸಿಕೊಳ್ಳುವುದರಲ್ಲಿ, ರಚನೆಯ ದೃಷ್ಟಿಯಿಂದ ನೋಡಿದರೆ ವಚನ, ದೇವರ-ನಾಮಗಳು ಬೇರೆ ಬೇರೆ ಮಾರ್ಗಗಳಿಂದ ರಸ ಕೋಶವನ್ನು ಪ್ರವೇಶಿಸುತ್ತವೆ. ವಚನಗಳು ಪ್ರಾಕಾರವನ್ನು ಸುತ್ತಿ ಗರ್ಭಗುಡಿ ಪ್ರವೇಶಿಸಿದರೆ, ದೇವರ ನಾಮಗಳು ನೇರವಾಗಿ ಗರ್ಭಗುಡಿಯನ್ನು ಪ್ರವೇಶಿಸುತ್ತವೆ. ಬಸವಣ್ಣನವರ "ಮನೆಯೊಳಗೆ ಮನೆಯೊಡೆಯನಿಲ್ಲ", ಇದು ಒಂದು ವಚನದ ಭಾಗ. ಈ ಭಾಗವನ್ನು ತಿಳಿಸಲು ಬಸವಣ್ಣನವರು ಒಂದು ಸೂಕ್ತವಾದ ವಾತಾವರಣವನ್ನು ನಿರ್ಮಿಸುತ್ತಾರೆ.



ಛಾಯಾಚಿತ್ರ ಕೃಪೆ: (ಅಂತರ್ಜಾಲ)

ಯಾರೋ ಒಬ್ಬ ಯಜಮಾನನನ್ನು ಕಾಣಲೆಂದು ಮನೆಗೆ ಬರುತ್ತಾನೆ, ಹೊಸ್ತಿಲಿನ ಹುಲ್ಲು, ಮನೆಯೊಳಗೆ ಧೂಳು ಕಂಡ ಕೂಡಲೇ ಮನೆಯೊಡೆಯ ಮನೆಯೊಳಗೆ ಇದ್ದಾನೊ, ಇಲ್ಲವೋ ಎಂಬ ಅನುಮಾನ ಮೂಡುತ್ತದೆ. ಕೊನೆಗೆ ಮನೆಯೊಳಗೆ ಮನೆಯೊಡೆಯನಿಲ್ಲ ಎಂಬ ಖಚಿತ ನಿರ್ಧಾರ ತೆಗೆದುಕೊಳ್ಳುತ್ತಾನೆ. ಇದು ವಚನದ ಧಾಟಿ. ಆದರೆ ದಾಸರಪದ ನೇರವಾಗಿ ವಿಷಯವನ್ನು ಹೇಳುತ್ತದೆ. "ಗಿಳಿಯು ಪಂಜರದೊಳಗಿಲ್ಲ", "ಸತ್ಯವಂತರಿಗಿದು ಕಾಲವಲ್ಲ", "ದಾರಿ ಯಾವುದಯ್ಯಾ ವೈಕುಂಠಕೆ" ಮುಂತಾದ ಪದಗಳಲ್ಲಿ ಗಮನಿಸಬಹುದು. ಪಲ್ಲವಿಯ ಮುಖ್ಯ ಚರಣವೇ ಕವಿತೆಯ ಹೂರಣ ಆಗುತ್ತದೆ. ಮುಂದಿನ ಚರಣಗಳು ಈ ವಿಷಯವನ್ನು ಪ್ರತಿಪಾದಿಸುತ್ತವೆ. ರಸಾನುಭವದ ದೃಷ್ಟಿಯಿಂದ ಈ ಎರಡು ಮಾರ್ಗಗಳು ಫಲಪ್ರದವಾಗಿವೆ.

ಪುರಂದರದಾಸರ ಬಹುಮಟ್ಟಿನ ಕವಿತೆಗಳು ತಟಕ್ಕನೆ ಮೇಲುನೋಟಕ್ಕೆ ಕಂಡಂತೆ ಬರೆದ ಆಶುಕವಿತೆಗಳಂತೆ ಕಾಣುವ ಪದಗಳಾಗಿವೆ. ಜಾನಪದ ಪ್ರಭಾವ ಈ ಲಕ್ಷಣಕ್ಕೆ ಮುಖ್ಯ ಕಾರಣ ಎನ್ನಬಹುದು.

**(ಮುಂದಿನ ಪುಟಕ್ಕೆ)**

## ಲೇಖನ

### ಪುರಂದರ ದಾಸರ ಸಾಹಿತ್ಯ ದರ್ಶನ (ಮುಂದುವರೆದುದು)

"ಕಲ್ಲು ಸಕ್ಕರೆ ಕೊಳ್ಳಿರೋ", "ಜಾಲಿಯ ಮರದಂತೆ ದುರ್ಜನರೆಲ್ಲ", "ನಿಮ್ಮ ಭಾಗ್ಯ ದೊಡ್ಡದೋ? ನಮ್ಮ ಭಾಗ್ಯ ದೊಡ್ಡದೋ?", "ನಗೆಯು ಬರುತಿದೆ ಎನಗೆ ನಗೆಯು ಬರುತಿದೆ". ಈ ಸಾಹಿತ್ಯವನ್ನು ನೋಡಿದಾಗ ಶ್ರೀ ಪುರಂದರದಾಸರು ಸಾಮಾನ್ಯವಾಗಿ ಗಡುಸಾದ ಪಾಂಡಿತ್ಯ ಶೈಲಿಗೆ ತೆರೆದುಕೊಳ್ಳದ ಸಾಮಾನ್ಯ ಜನತೆಯನ್ನು ಈ ಸುಂದರವಾದ ಆಪ್ತ ಸಾಲುಗಳ ಮೂಲಕ ತಮ್ಮ ಕಡೆಗೆ ಸೆಳೆದುಕೊಳ್ಳುವ ಸಕಲ ತಂತ್ರವನ್ನು ಅನುಸರಿಸಿದ್ದಾರೆ. ಲೋಕ ಶಿಕ್ಷಣಕ್ಕೆ ಒಂದು ಮಾದರಿಯನ್ನು ಹಾಕಿದ್ದಾರೆ.

ಮೇಲಿನ ಉದಾಹರಣೆಯನ್ನು ತೆಗೆದು ಕೊಳ್ಳೋಣ. "ಕಲ್ಲು ಸಕ್ಕರೆ ಕೊಳ್ಳಿರೋ ನೀವೆಲ್ಲರೂ ಕಲ್ಲು ಸಕ್ಕರೆ ಕೊಳ್ಳಿರೋ", ಈ ವಾಕ್ಯಯಾವುದೋ ಸಂತೆಯಲ್ಲೊ, ಅಥವಾ ಬೀದಿಯಲ್ಲೊ ವ್ಯಾಪಾರಿ ಕರೆಯುವ ರೀತಿ, ಜನರಿಗೆ ನಿತ್ಯ ಕೇಳುವ ಭಾಷೆ. ವ್ಯಾಪಾರಕ್ಕೆ ಮುಖ್ಯವಾದದ್ದು ಪ್ರಚಾರ ಶೈಲಿ, ದಾಸರು ಹೇಳುವ ವಿಷಯ ಪಾರಮಾರ್ಥಿಕವಾದರೂ ಹೇಳುವ ಶೈಲಿ ಲೌಕಿಕವಾಗಿದೆ, ಜನರಿಗೆ ಸುಲಭವಾಗಿ ತಿಳಿಯುವಂತದಾಗಿದೆ.

ಕನ್ನಡದ "ಕೀರ್ತನೆಯ" ಸಾಹಿತ್ಯ, ಒಂದು ರೀತಿಯಲ್ಲಿ ಶಿಲ್ಪಿಯ ಕೆತ್ತನೆಯಂತೆ. ಶಿಲ್ಪಿ ಕಲ್ಲಿನಲ್ಲಿ ಕೆತ್ತನೆ ಮಾಡಿದಂತೆ, ಕವಿ ಪದಗಳಲ್ಲಿ ಕೆತ್ತನೆ ಮಾಡುತ್ತಾನೆ. ಪ್ರತಿಯೊಂದು ಶೈಲಿಯು ಮೂಲಕಲಾಕಾರನ ಮನೋಧರ್ಮವನ್ನು ಅನುಸರಿಸುತ್ತದೆ. ಹೆಚ್ಚು ಶಾಸ್ತ್ರನಿಷ್ಟವಾಗದ, ಜನಮಾನ್ಯವಾಗುವಂತೆ ಮಾಡುವ ಶೈಲಿಯೂ ಪುರಂದರ ದಾಸರ ಕೀರ್ತನೆಗಳಲ್ಲಿ ನೋಡಬಹುದು.

ಕನ್ನಡದ ಛಂದಸ್ಸು ಅಕ್ಷರ ವೃತ್ತ, ಕಂದ, ರಗಳೆಗಳಿಂದ ಕೂಡಿದ ಚಂಪೂಕಾವ್ಯ ಪದ್ಧತಿಯಲ್ಲಿ ಬೆಳೆದ ನಂತರ, ಮಾತ್ರಾ ಛಂದಸ್ಸು ಹರಿಹರನ ರಗಳೆಗಳಲ್ಲಿ ತೋರಿತು. ಇವೆರೆಡರನ್ನೂ ಹೋಲದ, ಶುದ್ಧ ದೇಶೀಯವೇ ಆದ ಅಚ್ಚ ಕನ್ನಡದ "ಅಂಶ ಛಂದಸಿನಲ್ಲಿ" ಹಲವಾರು ಕಾವ್ಯಗಳು ನೋಡಬಹುದು.

ಪುರಂದರದಾಸರ ಶೈಲಿ, ಸುಳಾದಿಗಳು, ಉಗಾಭೋಗಗಳು ಹೊರತಾಗಿ, ಕನ್ನಡ ಛಾಂಧೋಗ್ಯದ ಅಂಶಗಣ, ಮಾತ್ರಾಗಣಗಳನ್ನು ಹಲವಾರು ಕೀರ್ತನೆಗಳಲ್ಲಿ ಅನುಸರಿಸಿದ್ದಾರೆ.

ಮುಖ್ಯವಾಗಿ ತ್ರಿಪದಿ ಸಾಂಗತ್ಯಗಳ ಪರಿಷ್ಕೃತ ರೂಪಗಳನ್ನೊಳಗೊಂಡ ಮುಕ್ತ ಅಂಶ ಲಯದಲ್ಲಿ ಮತ್ತು ಸ್ಥಿತಿಸ್ಥಾಪಕ ರೂಪದ ಮಾತ್ರದಲ್ಲಿ ಇವರು ಪದಗಳನ್ನು ನಿರ್ವಹಿಸಿದ್ದಾರೆ. ಮುಖ್ಯವಾಗಿ ತ್ರಿಪದಿ ಸಾಂಗತ್ಯಗಳ ಪರಿಷ್ಕೃತ ರೂಪಗಳನ್ನೊಳಗೊಂಡ ಮುಕ್ತ ಅಂಶ ಲಯದಲ್ಲಿ ಮತ್ತು ಸ್ಥಿತಿಸ್ಥಾಪಕ ರೂಪದ ಮಾತ್ರದಲ್ಲಿ ಇವರು ಪದಗಳನ್ನು ನಿರ್ವಹಿಸಿದ್ದಾರೆ.

ಆದಿ ಪ್ರಾಸ, ಅಂತ್ಯಪ್ರಾಸ, ವಡಿಗಳನ್ನು ಸಾಕಷ್ಟು ಮಟ್ಟಿಗೆ ತಮ್ಮ ರಚನೆಗಳಲ್ಲಿ ಉಪಯೋಗಿಸಿದ್ದಾರೆ.

ಅಂಶಗಣ

----------------

ವಿ | ವಿ | ವಿ |
ಅಂಬಿಗ ನಾ ನಿನ್ನ ನಂಬಿದೆ

ವಿ | ಬ್ರ | ಬ್ರ | ವಿ
ಜಗದಂಬ ರಮಣ ನಿನ್ನ ನಂಬಿದೆ

ಬ್ರ ಬ್ರಹ್ಮ(2) ವಿ - ವಿಷ್ಣು(3) ರು- ರುದ್ರ (4)

ಮಾತ್ರ ಗಣ

--------------------

4 | 4 | 4 | 4

ಯಾದವ | ನೀ ಬಾ | ಯದುಕುಲ | ನಂದನ

ಸಕಲ ಗ್ರಹ ಬಲ ನೀನೇ ಸರಸಿಜಾಕ್ಷ (ಏಕಾಕ್ಷ ವರ್ಣ ವಡಿ) -

ವಡಿಯಂದ್ರೆ ಅದ್ಯಕ್ಷರುಗಳು ಯತಿಯ ಸ್ಥಾನದಲ್ಲಿ ಸುತ್ತಿ ಬರುವುದು. ಪದದ ಮೊದಲಕ್ಷರ ಮತ್ತು ಪಾದದ ಯತಿಯ ಮುಂದಿನ ಮೊದಲಕ್ಷರ ಸಮಾನ ಅಥವಾ ಸಜಾತಿಯ-ವಾಗಿರುವುದು.

ನಲಿದಾಡೆ ಎನ್ನ ನಾಲಿಗೆ ಮೇಲೆ ( ಏಕವರ್ಣ ವಡಿ)


(೬೫ನೇ ಪುಟಕ್ಕೆ)

ಇ-ಕಾಲದಲ್ಲಿ

# 5G ತಂತ್ರಜ್ಞಾನ



ರಘುರಾಂ ರಾಯಸಂ




ವಿಜ್ಞಾನ ಜಗತ್ತಿನಲ್ಲಿ G ಎಂಬ ಪದಕ್ಕೆ ಬಹಳ ಪ್ರಾಮುಖ್ಯತೆ ಇದೆ. ಉದಾಹರಣೆಗೆ 1G, 2G, 3G, 4G ಈಗ 5G ಕೂಡ ಬರಲಿದೆ. ಈ G ಎಂದರೇನು? ಮೊಬೈಲ್ ತಂತ್ರಜ್ಞಾನವನ್ನು ವಿವಿಧ ತಂತ್ರಜ್ಞಾನದ ಪೀಳಿಗೆಗಳನ್ನು G ಯಿಂದ ಗುರುತಿಸಲಾಗಿದೆ. G ಎಂದರೆ Generation ಎಂದು. ಈ G ಗಳಿಂದ ನಮ್ಮ ನಿತ್ಯ ಜೀವನ ಹೇಗೆ ಬದಲಾಯಿತು, ಇದರ ಪ್ರಾಮುಖ್ಯತೆ, ಇದರ ಬಳಕೆ ಎಲ್ಲಿ, ಹೀಗೆ ಹೆಚ್ಚಿನ ವಿವರಗಳನ್ನು ವಿಸ್ತಾರವಾಗಿ ನಾವು ಈ ಸಂಚಿಕೆಯಲ್ಲಿ ತಿಳಿಯೋಣ. ಈ G ಗಳಿಂದಾಗಿಯೇ ಇದನ್ನೆಲ್ಲಾ ನೀವು ನಿಮ್ಮ ಮೊಬೈಲ್ ನಲ್ಲಿ ಓದಲು ಸಾಧ್ಯವಾಗಿದೆ.

**1G:** ಮೊದಲನೇ ಪೀಳಿಗೆಯ ಮೊಬೈಲ್ ತಂತ್ರಜ್ಞಾನವನ್ನು (1st generation) 1G ಎಂದು ಕರೆಯಲಾಗುವುದು. 2G ಬಂದ ನಂತರ, ಇದರ ಹಿಂದಿನ ಪೀಳಿಗೆಯ ತಂತ್ರಜ್ಞಾನವನ್ನು 1G ಎಂದು ಗುರುತಿಸಲಾಯಿತು. 1G ಫೋನ್ ಗಳ ಬಳಕೆ ಬಹಳ ವಿರಳವಾಗಿತ್ತು. ಸುಮಾರು 1980 ರಲ್ಲಿ ಬಳಸಿದ ಮೊಬೈಲ್ ಫೋನ್ ಗಳನ್ನು 1G ಎನ್ನಲಾಗುವುದು. ಈ ಮೊಬೈಲ್ ಫೋನುಗಳು ಬಹಳ ದಪ್ಪವಾಗಿ ಹಾಗೂ ಹೆಚ್ಚು ಭಾರವಾಗಿ ಇರುತ್ತಿದ್ದವು. ಕೇವಲ ಮಾತನಾಡಲು ಮಾತ್ರ ಸಾಧ್ಯವಾಗುತ್ತಿದ್ದ (Voice only) ಈ ಫೋನ್ಗಳಲ್ಲಿ ಸ್ಕ್ರೀನ್ ಇರುತ್ತಿರಲಿಲ್ಲ. ಡೇಟಾ ಇರುತ್ತಿರಲ್ಲಿಲ್ಲ, ಇದ್ದರೂ ಕೇವಲ 2.4kbps ಇರುತ್ತಿತ್ತು. ಮೊಬೈಲ್ ಕರೆಗಳು ಹೆಚ್ಚಾಗಿ ಡ್ರಾಪ್ ಆಗುತ್ತಿದ್ದವು. Analog ಸಿಗ್ನಲ್ಲುಗಳನ್ನು ಬಳಸುತ್ತಿದ್ದರು.

**2G:** ಎರಡನೆಯ ಪೀಳಿಗೆಯ ಮೊಬೈಲ್ ತಂತ್ರಜ್ಞಾನವನ್ನು (2nd generation) 2G ಎಂದು ಕರೆಯಲಾಗುವುದು. 2G ತಂತ್ರಜ್ಞಾನವು 1G ನಂತರ ಸಂಭವಿಸಿದ ಅತಿ ದೊಡ್ಡ ಹೆಜ್ಜೆ. ಸುಮಾರು 1990ರಲ್ಲಿ ಪ್ರಾರಂಭವಾದ ಈ 2G ಮೊಬೈಲ್ ಫೋನುಗಳ ಗಾತ್ರ ಚಿಕ್ಕದಾಯಿತು, ಜನಸಾಮಾನ್ಯರ ಬಳಕೆ ಹೆಚ್ಚಾಗಿ ಬಹಳ ಜನಪ್ರಿಯವೂ ಆಯಿತು. ಸಣ್ಣ ಸ್ಕ್ರೀನ್ಗಳು ಇರುತ್ತಿದ್ದ ಈ ಫೋನಿನಲ್ಲಿ, ಕರೆ ಮಾಡಿದವರ ನಂಬರ್ ಕಾಣಿಸುತ್ತಿತ್ತು. ಮಾತುಕತೆಗೆ ಮಾತ್ರ ಸೀಮಿತವಿರದ ಈ ಫೋನ್ಗಳಲ್ಲಿ SMS ಹಾಗೂ MMS ಪ್ರಾರಂಭವಾದವು. Data speed 2.4kbps ಇಂದ 1mbpsಗೆ ಬಡ್ತಿಯಾಯಿತು. ಮೊಬೈಲ್ ಕರೆಗಳು ಡ್ರಾಪ್ ಆಗುವುದು ಸಹ ಕಡಿಮೆಯಾಗತೊಡಗಿತು. Analog ಸಿಗ್ನಲ್ ಗಳ ಬದಲು, ಡಿಜಿಟಲ್ ಸಿಗ್ನಲ್ ಬಳಸಲು ಪ್ರಾರಂಭಿಸಿದರು.

**3G:** 1997 ಮೊಬೈಲ್ಗಳಿಗೆ ಹೊಸಾ ಸಂಚಲನವೇ ಸಿಕ್ಕಿತೆನ್ನಬಹುದು. ಈ ಹೊಸಾ ಪೀಳಿಗೆಯೇ 3G. ಮೊಬೈಲಿನಲ್ಲಿ voice ಕಾಲ್, SMS/MMS ಜೊತೆಗೆ, ಕೇವಲ ಲ್ಯಾಪ್ಟಾಪ್/ಕಂಪ್ಯೂಟರ್ ಗಳಲ್ಲಿ ನೋಡಲಾಗುತ್ತಿದ್ದ ಇಂಟರ್ನೆಟ್ ಹಾಗೂ ವೀಡಿಯೊ ಗೇಮ್ಗಳು ಮೊಬೈಲ್ ಪೋನಿಗೆ ಕಾಲಿಟ್ಟವು. ಇದು ಸಾಧ್ಯವಾಗಿದ್ದು 3G ತಂತ್ರಜ್ಞಾನದಿಂದ. ಆದರೆ ಇಂಟರ್ನೆಟ್ ಸ್ಪೀಡ್ ಸ್ವಲ್ಪ ನಿಧಾನವಾಗಿತ್ತು. ಇಂಟರ್ನೆಟ್ ಜೊತೆ, video ಕಾಲ್ ಸಹ 3G ಅಲ್ಲಿ ಶುರುವಾಯಿತು. ಡೇಟಾ ವೇಗ 2 mbps ಗೆ ಹೆಚ್ಚಿತು.

**(ಮುಂದಿನ ಪುಟಕ್ಕೆ)**

# ಇ-ಕಾಲದಲ್ಲಿ

## 5G ತಂತ್ರಜ್ಞಾನ (ಮುಂದುವರೆದುದು)

**4G:** 2008ರಷ್ಟರಲ್ಲಿ ಮೊಬೈಲ್ ಉಪಯೋಗಕ್ಕೆ ಕ್ರಾಂತಿಯನ್ನೇ ತಂದಿದ್ದು 4G. ಫೋನುಗಳು ಹೆಚ್ಚು ಬಲವಾಗಿ, ದೊಡ್ಡ ಪರದೆ, ಬಲವಾದ ಪ್ರಾಸೆಸ್ಸರ್ಗಳೊಂದಿಗೆ,ಬರತೊಡಗಿದಂತೆ ಜನರ ಇಂಟರ್ನೆಟ್ ಉಪಯೋಗವೂ ಜಾಸ್ತಿಯಾಯಿತು. ಈ ಬೇಡಿಕೆಯ ಸಾಕಾರ ಮಾಡಿದ್ದು 4G ತಂತ್ರಜ್ಞಾನ. ಈಗ ಪ್ರತಿಯೊಬ್ಬರ ಹತ್ತಿರ ಇರುವ ಸಾಧನಗಳು 4G ಮೊಬೈಲ್ ಗಳೇ ಆಗಿರುತ್ತವೆ. 3G ಯಲ್ಲಿ ಇರುವ ಎಲ್ಲಾ ವೈಶಿಷ್ಯಗಳ ಜತೆಯಲ್ಲಿ, ಹೆಚ್ಚು ಡೇಟಾ ಬಳಸುವ ಮೊಬೈಲ್ ಗೇಮ್ಸ್, TV, ವಿಡಿಯೋ conference, 3D ಚಿತ್ರಗಳು ಮುಂತಾದವುಗಳನ್ನು ಮೊಬೈಲ್ ನಲ್ಲಿ ನೋಡಲು ಸಾಧ್ಯವಾಗಿದ್ದೇ ಈ 4G ಇಂದ. **4G** ಯಲ್ಲಿ data ಸ್ಪೀಡ್ 1gbpsವರೆಗೂ ತಲುಪುತ್ತಿದೆ. ನಮ್ಮ ಮುಂದಿನ ಹೆಜ್ಜೆ 5G.

**5G:** ಈಗ ತಾನೆ ಶುರುವಾಗಿರುವ ಮೊಬೈಲ್ ಸಂವಹನ ತಂತ್ರಜ್ಞಾನವೇ 5G. 5G ಯಲ್ಲಿ data speed 4G ಗಿಂತ ಇಪ್ಪತ್ತು ಪಟ್ಟು ಹೆಚ್ಚಾಗಿರುವುದು. Data speed 20gbps ಇರುವುದು ಎಂದು ಹೇಳುತ್ತಾರೆ. ಅತಿವೇಗದ ಡೇಟಾ ಜತೆಗೆ, ಅತಿ ಚುರುಕಿನ ಪ್ರಾಸೆಸ್ಗಳು (low latency), ಬ್ಯಾಟರಿ ಉಳಿತಾಯ, ಹೆಚ್ಚು ಹೆಚ್ಚು ವಸ್ತುಗಳ/ಫೋನ್ಗಳ ಜತೆಗೆ ಸಂಪರ್ಕ, ಐದನೇ ಪೀಳಿಗೆಯ ಗುರಿ. ಕೆಲವು ಮೊಬೈಲ್ ತಯಾರಿಕಾ ಸಂಸ್ಥೆಗಳು, ಮೊಬೈಲ್ ಸೇವಾ ಸಂಸ್ಥೆಗಳು, ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿದ್ದರೂ, ಇದು ಪೂರ್ತಿಯಾಗಿ ಲಭ್ಯವಾಗುವುದಕ್ಕೆ ಇನ್ನು ಕೆಲವು ವರ್ಷಗಳು ಕಾಯಬೇಕಾಗಿದೆ. ಸುಮಾರು 2021 ರ ಸಮಯಕ್ಕೆ ಎಲ್ಲರ ಕೈಯಲ್ಲಿ 5G ಮೊಬೈಲ್ ಫೋನ್ ಇರುವ ಸಾಧ್ಯತೆ ಹೆಚ್ಚಿದೆ. ಕ್ಷಣಮಾತ್ರದಲ್ಲಿ ತೆರೆದುಕೊಳ್ಳುವ ವೆಬ್ ಸೈಟ್ಗಳು, ಇನ್ನಷ್ಟು IOT (Internet of things) ಸ್ಮಾರ್ಟ್ ಕಾರ್, ಸ್ಮಾರ್ಟ್ ಫೋನ್, ಸ್ಮಾರ್ಟ್ ಹೋಮ್.. ಹೀಗೆ ಅನೇಕ ಹೊಸ ಆವಿಷ್ಕಾರಗಳು 5Gಯನ್ನು ಉಪಯೋಗಿಸಿ ನಮ್ಮ ಭವಿಷ್ಯವನ್ನೇ ಬದಲಾಯಿಸಲಿವೆ.

ನಮಗಾಗಲೇ ಇರುವ ಮೊಬೈಲ್ ಚಟವು ಇನ್ನಷ್ಟು ಬಲವಾಗಲಿದೆ... ■

**(ಛಾಯಾಚಿತ್ರ ಕೃಪೆ: ಅಂತರ್ಜಾಲ)**

## ಪುರಂದರ ದಾಸರ ಸಾಹಿತ್ಯ ದರ್ಶನ

**( ೬೪ನೇ ಪುಟದಿಂದ )**

ಶ್ರೀ ಪುರಂದರದಾಸರು ಬರೆದಿರುವ ಪದಗಳಲ್ಲಿ ಸಾಹಿತ್ಯ ವಿವರಣೆ , ಸಮಾಜ ವಿಮರ್ಶೆ, ಜನರ ಸ್ವಭಾವದ ವಿವೇಚನೆ, ಆಚಾರ ವಿಚಾರಗಳ ಚರ್ಚೆ, ಅನುಪ್ರಾಸ ಪಲ್ಲವಿ-ಅನುಪಲ್ಲವಿಗಳ ಮಾಧುರ್ಯ, ನುಡಿಗಟ್ಟಿನ ಗಾದೆಗಳ ಬಳಕೆ, ಸಂಭಾಷಣೆಯ ಮಾದರಿ, ತಾತ್ವಿಕ ಪದಗಳಲ್ಲಿ ಜೀವನದ ಲೋಕಾನುಭವ ಎಲ್ಲವನ್ನೂ ನೋಡಬಹುದು.
ಇವರು ಸಾಹಿತ್ಯ ರಚಿಸುವ ಸಮಯದಲ್ಲಿ ಕನ್ನಡ ಭಾಷೆ ಉತ್ಕೃಷ್ಟವಾಗಿ ಬೆಳೆದಿತ್ತು. ಹಳೆಗನ್ನಡ ಮತ್ತು ನುಡಿಗನ್ನಡ ಹಾಗೂ ಜನಾಂಗಿಕ ಸಂಸ್ಕೃತಿಯಿಂದ ಪುಷ್ಟಿಗೊಂಡಿತು.

ಈ ಶ್ರೀಮಂತ ಭಾಷೆಗೆ ಸಂಗೀತದ ರೆಕ್ಕೆಗಳನ್ನು ಕಟ್ಟಿ ಹಾರಲು ಬಿಟ್ಟ ಕೀರ್ತಿ ಹರಿದಾಸರಿಗೆ ಸಲ್ಲುತ್ತದೆ. ■

**(ಪುರಂದರ ಸಾಹಿತ್ಯ ದರ್ಶನದಿಂದ)**

